TEXT PROBLEM WITHIN THE BOOK ONLY

UNIVERSAL
LIBRARY
OU_202309
UNIVERSAL
LIBRARY

# ಷಾಜಹಾನ್

ಸತ್ಯಶೋ[illegible] ಪುಸ್ತಕ ಭಂಡಾರ
ಬೆಂಗಳೂರು ನಗರ

ಜಿ. ಪುಟ್ಟಸ್ವಾಮಯ್ಯ

ಬೆಲೆ ಆಣೆ ೦—೧೨—೦

# ಶಾರದಾ ಗ್ರಂಥಮಾಲಾ

| | |
|---|---|
| ಪ್ರಿಯಂವದೆ (ಸಾಮಾಜಿಕ ನಾಟಕ) | ೦-೬ ೦ |
| ಇಂದಿರೆ (ಕಾದಂಬರಿ) | ೦ ೧೨-೦ |
| ಹಿಂದೂ ಭಾಗ್ಯೋದಯ (ಮಕ್ಕಳ ನಾಟಕ) | ೦-೪-೦ |
| ಸ್ನೇಹಲತೆ (ಸಾಮಾಜಿಕ ನಾಟಕ) | ೦-೧೨-೦ |
| ನಿರ್ಮಲೆ (ಕಾದಂಬರಿ) | ೦-೮-೦ |
| ಸತಿ ಪದ್ಮಿನಿ (ಐತಿಹಾಸಿಕ ನಾಟಕ) | ೧-೦-೦ |
| ಷಾಜಹಾನ್ ,, | ೦-೧೨-೦ |
| ಬ್ಯಾರಿಷ್ಟರ್ ರಾಮಚಂದ್ರನ್ (ಸಾಮಾಜಿಕ ಪ್ರಹಸನ) | |
| ಸಂಕಲನ | |
| ರಣಕೇಸರಿ (ಅಚ್ಚಿನಲ್ಲಿದೆ) | |

ಾರದಾ ಗ್ರ ಮಾಲಾ

# ಷಾಜಹಾನ್.

(ಐದು ಅಂಕದ ಒಂದು ನಾಟಕ)

ಲೇಖಕ,

ಬಿ. ಪುಟ್ಟಸ್ವಾಮಯ್ಯ

ಬೆಂಗಳೂರು ಸಿಟಿ.

1927.

ಬೆಲೆ 0-12-0.

ಪ್ರಕಾಶಕರು—

ಶಾರದಾ ಗ್ರಂಥಮಾಲಾ,

ಚಾಮರಾಜಪೇಟೆ, ಬೆಂಗಳೂರು ಸಿಟಿ.

ಪ್ರಥಮ ಸಂಸ್ಕರಣ.

ಮುದ್ರಕರು—

ಮಾಡಲ್ ಮುದ್ರಾಕ್ಷರಶಾಲಾ,

ಅಕ್ಕಿಪೇಟೆಚೌಕ, ಬೆಂಗಳೂರು ಸಿಟಿ

## ಮುನ್ನುಡಿ.

ಶ್ರೀಯುತ ದ್ವಿಜೇಂದ್ರಲಾಲರಾಯರ ಒಂದು ಬಂಗಾಳೀ ಗ್ರಂಥದ ಅವಲಂಬನದಿಂದ ಈ ನಾಟಕವು ಬರೆಯಲ್ಪಟ್ಟಿರುವುದು.

# ಪಾತ್ರಗಳು.

## ಪುರುಷರು.

| | |
|---|---|
| ಷಾಜಹಾನ್ | ಮೊಗಲ್ ಸಮ್ರಾಟ್ |
| ದಾರಾ<br>ಷೂಜಾ<br>ಔರಂಗಜೀಬ<br>ಮುರಾದ್ | ಸಮ್ರಾಟನ ನಾಲ್ವರು ಪುತ್ರರು. |
| ಸುಲೇಮಾನ್, ಸಿಪಾರ್ | ದಾರನ ಪುತ್ರರು |
| ಮಹಮದ್ ಸುಲ್ತಾನ್ | ಔರಂಗಜೀಬನ ಮಗ |
| ಜಯಸಿಂಹ | ಜಯಪುರದ ರಾಜ |
| ಯಶೋವಂತಸಿಂಹ | ಯೋಧಪುರದ ರಾಜ |
| ದಿಲ್ದಾರ್ | ವೇಷದಾರಿಯಾದ ದಾನೇಷಮಂದ್ ಎಂಬ ಜ್ಞಾನಿ |

ದಿಲೇರ್‌ಖಾನ್, ಮೀರಜುಮ್ಲಾ, ಜಿಹನ್‌ಖಾನ್, ಸೈನಿಕರು ಇತ್ಯಾದಿ.

## ಸ್ತ್ರೀಯರು.

| | |
|---|---|
| ಜಹನಾರಾ | ಷಾಜಹಾನನ ಪುತ್ರಿ |
| ನಾದಿರಾ | ದಾರನ ಹೆಂಡತಿ |
| ಪಿಯಾರಾ | ಷೂಜನ ಹೆಂಡತಿ |
| ಜಹರತ್ ಉನ್ನೀಸಾ | ದಾರನ ಮಗಳು |
| ಮಹಾಮಾಯಾ | ಯಶೋವಂತಸಿಂಹನ ಪತ್ನಿ |

ನರ್ತಕಿಯರು, ಚಾರಣಬಾಲಕಿಯರು ಇತ್ಯಾದಿ.

---

ಸೂಚನೆ— ಈ ನಾಟಕದ ಅಭಿನಯ ಸ್ವಾತಂತ್ರ್ಯವು ಗ್ರಂಥಕಾರರಿಂದ ಕಾದಿಡಲ್ಪಟ್ಟಿರುವುದು. ಅವರ ಅನುಮತಿಯ ಹೊರತು ಇದನ್ನಾರೂ ಅಭಿನಯಿಸಲಾಗದು.

# ಷಾಜಹಾನ್.

## ಮೊದಲನೆಯ ಅಂಕ.

### ಒಂದನೆ ನೋಟ.

ಸ್ಥಾನ—ಆಗ್ರಾದ ದುರ್ಗಪ್ರಾಸಾದದಲ್ಲಿ ಷಾಜಹಾನನ ಮಂದಿರ. ಕಾಲ—ಅಪರಾಹ್ನ.

ಷಾಜಹಾನನು ತಲ್ಪದಮೇಲೆ ಅರ್ಧಶಾಯಿತನಾಗಿ, ಅಧೋಃಮುಖನಾಗಿ ಏನನ್ನೋ ಚಿಂತಿಸುತ್ತಿರುವನು ಮಧ್ಯೆಮಧ್ಯೆ ಗುಡಿಗುಡಿಯ ನಾಳವನ್ನು ಕೈಯಿಂದ ಆಡಿಸುತ್ತಿರುವನು. ಎದುರಿಗೆ ದಾರಾ.

**ಷಾಜಹಾನ್**-ಸರಿ; ಇದೆಂತ ಕೆಟ್ಟ ಸುದ್ದಿ? ದಾರಾ

**ದಾರಾ**-ಷೂಜನು ಬಂಗಾಳದಲ್ಲಿ ವಿದ್ರೋಹಕ್ಕೆ ಪ್ರಾರಂಭಮಾಡಿರುವನಾದರೂ, ಸಮ್ರಾಟನೆಂದು ಹೆಸರಿಟ್ಟುಕೊಂಡಿಲ್ಲ. ಇತ್ತ ಮುರಾದನು ಗುಜರಾತದಲ್ಲಿ ತಾನೇ ಸಮ್ರಾಟನೆಂದು ಹೇಳಿಕೊಳ್ಳಲು ಮೊದಲುಮಾಡಿರುವನು. ದಕ್ಷಿಣಾತ್ಯದಲ್ಲಿ ಔರಂಗಜೇಬನೂ ಅದಕ್ಕೆ ಸಹಾಯಮಾಡುತ್ತಿರುವನು.

**ಷಾಜಹಾನ್**-ಔರಂಗಜೇಬನು ಸಹಾಯಮಾಡುತ್ತಿರುವನೇ? ಸರಿ. ಇದು ಯೋಚಿಸಬೇಕಾದ್ದೆ. ಹೀಗಾಗುವುದೆಂದು ನಾನು ಯಾವಾಗಲೂ ನೆನೆಸಿರಲಿಲ್ಲ. ಆದುದರಿಂದಲೆ ಈ ಉದ್ಧಟತನವನ್ನು ಸಹಿಸಲಾರದವನಾಗಿರುವೆನು. ಆಮೇಲೆ? (ಧೂಮಪಾನಮಾಡಲು ಮೊದಲುಮಾಡುವನು.)

**ದಾರಾ**-ನನಗೇನು ಮಾಡಬೇಕೆಂಬುದು ತಿಳಿಯದಂತಾಗಿದೆ.

**ಷಾಜಹಾನ್**-ಹೌದು! ನನಗೂ ಹಾಗೆಯೇ. (ಮತ್ತೆ ಧೂಮಪಾನ)

**ದಾರಾ**-ಅಲ್ಲಾಹಾಬಾದಿನಲ್ಲಿರುವ ನನ್ನ ಪುತ್ರ ಸುಲೇಮಾನನಿಗೆ ಷೂಜನ ವಿರುದ್ಧವಾಗಿ ಯುದ್ಧಕ್ಕೆ ಹೊರಡುವಂತೆ ಬರೆದಿರುವೆನು. ಅವನ ಸಹಾಯಕ್ಕಾಗಿ ಬೀಕನೀರದ ಮಹಾರಾಜ ಜಯಸಿಂಹನೂ, ಸೇನಾಧ್ಯಕ್ಷ ದಿಲೀರಖಾನನೂ ಹೊರಡುವರು.

[ಷಾಜಹಾನನು ತಲೆತಗ್ಗಿಸಿಕೊಂಡು ಧೂಮಪಾನದಲ್ಲಿ ಮಗ್ನನಾಗಿರುವನು.]

**ದಾರಾ**-ಮುರಾದನ ವಿರುದ್ಧವಾಗಿ ಮಹಾರಾಜ ಯಶೋವಂತ ಸಿಂಹನನ್ನು ಕಳುಹಿಸಿರುವೆನು.

**ಷಾಜಹಾನ್**-ಕಳುಹಿಸಿರುವೆಯಾ ? ಆಮೇಲೆ? (ಹಿಂದಿನಂತೆ ಧೂಮಪಾನ)

**ದಾರಾ**-ತಂದೆಯೇ, ನೀನು ಚಿಂತಿಸಬೇಡ. ಈ ವಿದ್ರೋಹವನ್ನು ದಮನಮಾಡಲು ನನ್ನ ಕೈಲಾಗುವುದು

**ಷಾಜಹಾನ್**-ಇಲ್ಲ, ದಾರಾ; ನಾನದರ ಸಲುವಾಗಿ ಚಿಂತಿಸುತ್ತಿಲ್ಲ. ಈ ಅಣ್ಣ ತಮ್ಮಂದಿರ ಕಲಹ—ಅದಕ್ಕೆ ಚಿಂತಿಸುತ್ತಿದ್ದೆನು. (ಧೂಮಪಾನಮಾಡತೊಡಗುವನು. ಸ್ವಲ್ಪಹೊತ್ತಿನಮೇಲೆ ಹಠಾತ್ತಾಗಿ) ಇಲ್ಲ ದಾರಾ, ಅದು ಕರ್ತವ್ಯವಲ್ಲ; ನಾನವರಿಗೆ ತಿಳಿಯಹೇಳುವೆನು. ನಿರ್ಬಂಧವಿಲ್ಲದೆ ಅವರು ರಾಜಧಾನಿಯನ್ನು ಪ್ರವೇಶಿಸಲಿ.

[ಜಹನಾರಳು ಬೇಗನೆ ಬರುವಳು]

**ಜಹನಾರಾ**-ಎಂದಿಗೂ ಆಗದು; ಹಾಗಾಗುವುದು ಸಾಧ್ಯವಿಲ್ಲ. ತಂದೆಯೇ, ಪ್ರಜರು ರಾಜನಮೇಲೆ ಕತ್ತಿಯೆನ್ನೆತ್ತಿರುವರು. ಆ ಕತ್ತಿಯು ಅವರ ತಲೆಯಮೇಲೆಯೇ ಬೀಳಲಿ.

**ಷಾಜಹಾನ್**-ಇದೇನು ! ಜಹನಾರಾ, ಅವರು ನನ್ನ ಮಕ್ಕಳಲ್ಲವೇ?

**ಜಹನಾರಾ**--ಮಕ್ಕಳೇ ಆಗಲಿ. ಏನಾಯಿತು? ಮಕ್ಕಳು ತಂದೆಯ ಪ್ರೀತಿಗೆಮಾತ್ರ ಅಧಿಕಾರಿಗಳೋ? ಒಮ್ಮೊಮ್ಮೆ ಅವರ ಶಾಸನವನ್ನೂ ಮಾಡಬೇಕಾಗುವುದು.

**ಷಾಜಹಾನ್**-ನನ್ನ ಹೃದಯವು ಒಂದು ವಿಧವಾದ ಶಾಸನವನ್ನು ಮಾತ್ರ ಬಲ್ಲದು; ಅದು ಕೇವಲ ಪ್ರೇಮಶಾಸನ. ತಾಯಿಲ್ಲದ ನಿರ್ಭಾಗ್ಯರಾದ ನನ್ನ ಮಕ್ಕಳು; ಯಾವ ಮನಸ್ಸಿನಿಂದ ನಾನವರನ್ನು ಶಾಸನಮಾಡಬಲ್ಲೆನು? ಜಹನಾರಾ, ನೋಡು! ಇತ್ತನೋಡು! ಈ ಸ್ಫಟಿಕ ಶಿಲೆಯಿಂದ ನಿರ್ಮಿತವಾದ ನನ್ನ ದೀರ್ಘ ನಿಶ್ವಾಸದ--ಈ ತಾಜಮಹಲದ ಕಡೆ ನೋಡು ! ಬಳಿಕ ಅವರನ್ನು ಶಾಸನ ಮಾಡಹೇಳು.

**ಜಹನಾರಾ**-ತಂದೆಯೇ, ಇದು ನಿನಗೆ ಯೋಗ್ಯವಾದ ಮಾತುಗಳೇ ! ಇಂತ ದೌರ್ಬಲ್ಯವು ಭಾರತ ಸಮ್ರಾಟ್ ಷಾಜಹಾನನಲ್ಲಿ ಶೋಭಿಸುವುದೇ! ಸಾಮ್ರಾ

ಜ್ಯವು ಅಂತಃಪುರವಲ್ಲ. ಮಕ್ಕಳ ಆಟವಲ್ಲ. ಒಂದು ಪ್ರಕಾಂಡ ಶಾಸನದ ಭಾರವು ನಿನ್ನ ಬೆನ್ನು ಹತ್ತಿರುವುದು. ಪ್ರಜರು ವಿದ್ರೋಹಮಾಡಿದರೆ ಸಮ್ರಾಟನು ಅವರನ್ನು ಪುತ್ರರೆಂದು ಮನ್ನಿಸುವನೆ? ಸ್ನೇಹದಿಂದ ಕರ್ತವ್ಯವನ್ನು ಮರೆಯುವುದೆ?

**ಷಾಜಹಾನ್**-ತರ್ಕಮಾಡಬೇಡ, ಜಹನಾರಾ, ನನಗೆ ಮತ್ತಾವ ಯುಕ್ತಿಯೂ ಇಲ್ಲ. ನನ್ನ ಏಕಮಾತ್ರ ಉಪಾಯವು ಪ್ರೇಮ ಒಂದೇ—ನಾನು ಭಾವಿಸುತ್ತಿದ್ದೆನೇನೆಂದರೆ-ದಾರಾ, ಈ ಯುದ್ಧದಲ್ಲಿ ಯಾರಿಗೆ ಪರಾಜಯವಾದರೂ ನನಗೆ ಸಮಾನಕ್ಷತಿ. ನೀನು ಸೋತರೆ ನಿನ್ನ ಮ್ಲಾನ ಮುಖವನ್ನು ನೋಡಬೇಕಾಗುವುದು. ಅಲ್ಲವೆ ಅವರು ಪರಾಜಿತರಾಗಿ ಹಿಂದಿರುಗಿದರೆ ಅವರ ಬಾಡಿದ ಮುಖಗಳನ್ನು ಕಲ್ಪಿಸಿಕೊಳ್ಳಬೇಕಾಗುವುದು. ಇದು ಸರಿಯಲ್ಲ. ದಾರಾ, ಅವರು ರಾಜಧಾನಿಗೆ ಬರಲಿ; ನಾನವರಿಗೆ ತಿಳಿಯಹೇಳುವೆನು.

**ದಾರಾ**-ತಂದೆಯೇ, ನಿನ್ನಿಷ್ಟದಂತಾಗಲಿ.

**ಜಹನಾರಾ**-ದಾರಾ, ನೀನಿದಕ್ಕೆ ಸಮ್ಮತನಾದರೆ ನಿನ್ನ ವೃದ್ಧಪಿತನ ಪ್ರತಿನಿಧಿಯ ಕರ್ತವ್ಯವನ್ನು ಮಾಡಿದಂತಾಗುವುದೆ? ತಂದೆಯು ಸ್ವಯಂಶಾಸನ ಮಾಡಲು ಶಕ್ತನಾಗಿದ್ದಲ್ಲಿ ರಾಜ್ಯ ರಶ್ಮಿಯನ್ನು ನಿನ್ನ ಕೈಲೆಂದಿಗೂ ಕೊಡುತ್ತಿರಲಿಲ್ಲ. ಈ ಉದ್ಧಟನಾದ ಷೂಜಾ ತನ್ನಷ್ಟಕ್ಕೆ ತಾನೆ ಸಮ್ರಾಟನೆಂದು ಹೇಳಿಕೊಳ್ಳುತ್ತಿರುವ ಈ ಮೊರಾದ ಇವರ ಸಹಾಯಕನಾದ ಔರಂಗಜೀಬ ಇವರೆಲ್ಲ ವಿದ್ರೋಹದ ನಿಶಾನೆಯನ್ನು ಹಿಡಿದುಕೊಂಡು ಜಯಘೋಷದಿಂದ ಆಗ್ರಾವನ್ನು ಪ್ರವೇಶಿಸುವರು. ಆಗ ನೀನು-ತಂದೆಯ ಪ್ರತಿನಿಧಿಯಾದ ನೀನು-ಸಹಾಸ್ಯಮುಖನಾಗಿ ನಿಂತು ನೋಡುತ್ತಿರುವೆ; ಎಷ್ಟು ಚನ್ನಾಗಿದೆಯೋ!

**ದಾರಾ**-ಹೌದು! ತಂದೆಯೇ, ಹಾಗಾಗುವುದು ಸಾಧ್ಯವೇ? ನನಗೆ ಅನುಜ್ಞೆಯನ್ನು ಕೊಡು.

**ಷಾಜಹಾನ್**-ಈಶ್ವರನೇ, ಪಿತೃಗಳ ಹೃದಯದಲ್ಲಿಂತ ಉಕ್ಕಿ ಹರಿಯುವ ಪ್ರೇಮವನ್ನೇಕೆ ತುಂಬಿದೆ? ಅವರ ಮನಸ್ಸನ್ನು ಕಬ್ಬಿಣದಿಂದೇಕೆ ನಿರ್ಮಿಸಲಿಲ್ಲ.

**ದಾರಾ**-ತಂದೆಯೇ, ನಾನೀ ಸಿಂಹಾಸನವನ್ನು ಆಶಿಸುತ್ತಿರುವೆನೆಂದು ಶಂಕಿಸಬೇಡ. ಈ ಯುದ್ಧವು ಅದಕ್ಕೋಸುಗವಲ್ಲ. ನನಗೀ ಸಾಮ್ರಾಜ್ಯವು ಬೇಡ. ದರ್ಶನ,

ಉಪನಿಷತ್ತುಗಳಲ್ಲಿ ಇದಕ್ಕಿಂತ ದೊಡ್ಡದೊಂದು ಸಾಮ್ರಾಜ್ಯವು ನನಗೆ ದೊರೆ ತಿರುವುದು. ನಾನು ಹೋಗುವೆನೇಕಂದರೆ; ನಿನ್ನ ಸಿಂಹಾಸನವನ್ನು ರಕ್ಷಿಸುವ ಸಲವಾಗಿ.

**ಜಹನಾರಾ**- ನೀನು ಹೋಗುವೆ ನ್ಯಾಯದ ಸಿಂಹಾಸನವನ್ನು ರಕ್ಷಿಸುವ ಸಲುವಾಗಿ; ದುಷ್ಕರ್ಮಿಗಳನ್ನು ಶಾಸನಮಾಡುವ ಸಲುವಾಗಿ; ದೇಶದ ಕೋಟಿ ಕೋಟಿ ನಿರೀಹ ಪ್ರಜರನ್ನು ಅರಾಜಕ ಅತ್ಯಾಚಾರಗಳ ಗ್ರಾಸದಿಂದ ಉದ್ಧರಿಸುವ ಸಲವಾಗಿ. ರಾಜ್ಯದಲ್ಲಿನ ಈ ದುಷ್ಪ್ರವೃತ್ತಿಯು ಶೃಂಖಲಾಬದ್ಧವಾಗದೆ ಹೋದರೆ ಮೊಗಲ್ ಸಾಮ್ರಾಜ್ಯದ ಪರಮಾವಧಿಯು ಮತ್ತೆಷ್ಟುದಿನ?

**ದಾರಾ**-ತಂದೆಯೇ, ನಾನು ಪ್ರತಿಜ್ಞೆಮಾಡುವೆನು; ನನ್ನ ಸೋದರರನ್ನಾವರೀತಿಯು ಲ್ಲೂ ಪೀಡಿಸುವುದಿಲ್ಲ; ವಧಿಸುವುದಿಲ್ಲ. ಅವರನ್ನು ಹಿಡಿದುತಂದು ನಿನ್ನ ಪದತಲ ದಲ್ಲಿ ಹಾಕುವೆನು. ಆಗ ಇಚ್ಛೆಯಿದ್ದರೆ ನೀನವರನ್ನು ಕ್ಷಮಿಸಬಹುದು. ಅವರು ತಿಳಿದುಕೊಳ್ಳಲಿ; ಸಮ್ರಾಟ್ ಷಾಜಹಾನನು ಸ್ನೇಹಶೀಲನು, ಆದರೂ ದುರ್ಬಲನಲ್ಲವೆಂದು ...........

**ಷಾಜಹಾನ್**-(ಎದ್ದು) ಹಾಗಾದರದು ನಡೆದುಹೋಗಲಿ. ಷಾಜಹಾನನು ಕೇವಲ ತಂದೆಯಲ್ಲ; ಸಮ್ರಾಟನು ಹೌದೆಂಬುದನ್ನು ಅವರು ತಿಳಿದುಕೊಳ್ಳಲಿ ಹೋಗು. ದಾರಾ, ತೆಗೆದುಕೊ ಈ ಪಂಜಾವನ್ನು; ನನ್ನ ಸಮಸ್ತ ಅಧಿಕಾರವನ್ನು ನಿನಗೆ ಕೊಟ್ಟಿರುವೆನು; ವಿದ್ರೋಹಿಗಳ ಶಾಂತಿವಿಧಾನವನ್ನು ಮಾಡು. (ಪಂಜಾವ ನ್ನು ಕೊಡುವನು.)

**ದಾರಾ**--ತಂದೆಯ ಆಜ್ಞೆಯಂತೆ.

**ಷಾಜಹಾನ್**-ಈ ದಂಡವಿಧಾನವು ಅವರಿಗೆ ಮಾತ್ರವಲ್ಲ; ನನಗೂ ಸಹ. ತಂದೆಯು ಮಗನನ್ನು ಹೊಡೆದಾಗ, ಮಗನು ತಂದೆಯು ಎಷ್ಟು ಕಠಿಣಾತ್ಮನೆಂದು ಚಿಂತಿಸುವನು. ತಂದೆಯ ಉಧೃತವೇತ್ರದ ಅರ್ಧಾಧಿಕ ಪೆಟ್ಟುಗಳು ತಂದೆಯು ಬೆನ್ನಿನಮೇಲೆಯೇ ಮತ್ತೆ ಬೀಳುವುದೆಂದು ಅವರಿಗೆ ತಿಳಿಯದು.

**ಜಹನಾರಾ**--ಅವರು ಹಠಾತ್ತಾಗಿ ವಿದ್ರೋಹಮಾಡಲು ಕಾರಣವೇನೆಂಬುದನ್ನು ಚಿಂತಿಸಿದೆಯಾ ದಾರಾ.

**ದಾರಾ**--ಅವರು ತಂದೆಯು ರೋಗಗ್ರಸ್ತನಾಗಿರುವುದು ಸುಳ್ಳೆಂದು ತಿಳಿದುಕೊಂಡಿರುವರು. ತಂದೆಯು ಸತ್ತಿರುವನಂತೆ ಮತ್ತು ನಾನು ತಂದೆಯ ಹೆಸರಿನಲ್ಲಿ ನನ್ನ ಆಜ್ಞೆಗಳನ್ನು ಪಾಲಿಸುತ್ತಿರುವೆನಂತೆ.

**ಜಹನಾರಾ**-ಅದರಲ್ಲಿ ತಪ್ಪೇನು! ನೀನು ಸಮ್ರಾಟನ ಜ್ಯೇಷ್ಠಪುತ್ರ, ಮುಂದೆ ಸಮ್ರಾಟನಾಗತಕ್ಕವನು.

**ದಾರಾ**--ಅವರಿಗೆ ನಾನು ಸಮ್ರಾಟನಾಗುವುದು ಸಮ್ಮತವಿಲ್ಲ.

[ಸಿಪಾರನೂ ನಾದಿರಳೂ ಪ್ರವೇಶಿಸುವರು]

**ಸಿಪಾರ**-ನೀನು ಸಮ್ರಾಟನಾಗುವುದು ಅವರಿಗೆ ಸಮ್ಮತವಿಲ್ಲವೆ ಅಪ್ಪ ?

**ಜಹನಾರಾ**-ಓಹೊ ಎಷ್ಟೊಂದು ಸ್ಪರ್ಧೆ ! (ನಗುವಳು)

**ದಾರಾ**-ಇದೇನು ನಾದಿರಾ, ತಲೆಯನ್ನು ಜೋಲುಹಾಕಿಕೊಂಡಿರುವೆ. ಏನಾದರೂ ವಿಶೇಷವಿಧೆಯೊ ?

**ನಾದಿರಾ**-ನನ್ನ ಮಾತನ್ನು ಕೇಳುವೆಯಾ ಪ್ರಭು, ನನ್ನೊಂದು ಅನುರೋಧವನ್ನು ಪಾಲಿಸುವೆಯಾ ?

**ದಾರಾ**-ಈವರೆಗೆ ನಿನ್ನ ಯಾವನುರೋಧವನ್ನು ಮೀರಿ ನಡೆದಿರುವೆನು ನಾದಿರಾ.

**ನಾದಿರಾ**-ನಾನದನ್ನು ಬಲ್ಲೆ. ಆದುದರಿಂದಲೆ ಹೇಳಲು ಸಾಹಸಗೊಂಡೆನು. ನಾನು ಹೇಳುವುದೇನಂದರೆ--ನೀನೀ ಯುದ್ಧದ ಗೊಡವೆಯನ್ನು ಬಿಡು.

**ಜಹನಾರಾ**-ಇದೇನು ನಾದಿರಾ?

**ನಾದಿರಾ**-ಅಕ್ಕ .. .. .....

**ದಾರಾ**-ಇದೇನು ಮಾತಾಡದೆ ಸುಮ್ಮನಿರುವೆ; ನೀನಾವಕಾರಣದಿಂದ ನನ್ನನ್ನು ತಡೆಮಾಡುವೆ ನಾದಿರಾ?

**ನಾದಿರಾ**- ನೆನ್ನಿರಾತ್ರಿ ನಾನೊಂದು ಕೆಟ್ಟ ಕನಸ್ಸನ್ನು ಕಂಡೆನು.

**ದಾರಾ**-ಎಂತ ಕೆಟ್ಟ ಕನಸು.

**ನಾದಿರಾ**-ನಾನದನ್ನು ಹೇಳಲಾರೆ; ಹಾ ! ಎಷ್ಟೊಂದು ಭಯಾನಕ! ಇಲ್ಲ; ಪ್ರಾಣೇಶ್ವರ, ನೀನೀ ಯುದ್ಧಕ್ಕೆ ಹೋಗಬೇಡ.

**ದಾರಾ**-ಇದೇನು ನಾದಿರಾ ?

**ಜಹನಾರಾ**-ನಾದಿರಾ, ನೀನು ಪರಬೇಜನ ಪುತ್ರಿಯಲ್ಲವೇ? ಒಂದು ಯುದ್ಧದ ಸಲವಾಗಿ ಇಷ್ಟೊಂದು ಕಣ್ಣೀರು, ಇಂತ ಶಂಕಾಕುಲದೃಷ್ಟಿ, ಭಯವಿಹ್ವಲವಾದ ಮಾತುಗಳು, ಇವು ನಿನಗೆ ಶೋಭಿಸುವುದಿಲ್ಲ.

**ನಾದಿರಾ**-ಅಕ್ಕ, ನೀನಾಕನಸು ಎಷ್ಟೊಂದು ಭಯಾನಕವಾಗಿತ್ತೆಂಬುದನ್ನು ಬಲ್ಲೆ ಯಾದರೆ..... ಅಯ್ಯೋ ಸಹಿಸಲಾರೆನು.

**ಜಹನಾರಾ**-ದಾರಾ, ಏನನ್ನು ಯೋಚಿಸುತ್ತಿರುವೆ? ಇಷ್ಟೊಂದು ತರಳನೇ ನೀನು? ತಂದೆಯ ಸಮ್ಮತಿಯನ್ನು ಹೊಂದಿದ್ದಾಯಿತು; ಇನ್ನು ಹೆಂಡತಿಯ ಸಮ್ಮತಿ ಯನ್ನು ಹೊಂದಬೇಕಲ್ಲವೆ? ನೆನಪಿರಲಿ ದಾರಾ, ಎದುರಿನಲ್ಲಿ ಕಠೋರವಾದ ಕರ್ತವ್ಯ, ಈಗ ಚಿಂತಿಸುವ ಸಮಯವಿಲ್ಲ.

**ದಾರಾ**-ಸತ್ಯ. ನಾದಿರಾ, ಈ ಯುದ್ಧವು ಅನಿವಾರ್ಯವಾದುದು. ನಾನಿನ್ನು ಹೊರಡು ವೆನು (ಹೋಗುವನು.)

**ನಾದಿರಾ**-ಎಂತಹ ನಿಷ್ಠುರಳೇ ನೀನು. ಬಾ ಸಿಪಾರ (ಹೋಗುವರು.)

**ಜಹನಾರಾ**-ಏಕಿಷ್ಟೊಂದು ಭಯಗ್ರಸ್ಥಳಾಗಿರುವಳೊ ಕಾಣೆ.

[ಷಾಜಹಾನನು ಮತ್ತೆ ಬರುವನು.]

**ಷಾಜಹಾನ್**-ದಾರನು ಹೊರಟು ಹೋದನೆ ಜಹನಾರಾ?

**ಜಹನಾರಾ**-ಹೌದು ಅಪ್ಪ.

**ಷಾಜಹಾನ್**-(ಸ್ವಲ್ಪ ಹೊತ್ತು ಸುಮ್ಮನಿದ್ದು ಬಳಿಕ) ಜಹನಾರಾ.........

**ಜಹನಾರಾ**-ಅಪ್ಪ.

**ಷಾಜಹಾನ್**-ನೀನೂ ಈ ಗೊಂದಲದಲ್ಲಿ .....

**ಜಹನಾರಾ**-ಯಾವ ಗೊಂದಲದಲ್ಲಿ.

**ಷಾಜಹಾನ್**-ಈ ಅಣ್ಣತಮ್ಮಂದಿರ ಗೊಂದಲದಲ್ಲಿ. ಜಹನಾರಾ ಕೇಳು. ಇದು ಬಹು ಮರ್ಮಾಂತಿಕವಾದ ಕಾರ್ಯ. ಏನುಮಾಡಲಿ, ಇಂದದರ ಪ್ರಯೋಜನವು ಒದಗಿತು; ಬೇರೆ ಉಪಾಯವಿಲ್ಲ. ಆದರೆ ನೀನು ಈ ಗೊಂದಣದಲ್ಲಿ ಸಿಕ್ಕ ಬೇಡ ಜಹನಾರಾ, ನಿನ್ನ ಕರ್ತವ್ಯವು ಸ್ನೇಹ, ಭಕ್ತಿ, ಹಾಗೂ, ಅನುಕಂಪ ಈ ಆವರ್ಜನದಿಂದ ನೀನೂ ಕೆಡಬೇಡ; ಅಂತತಃ ಪವಿತ್ರಳಾಗಿರು.

## ಎರಡನೆಯ ನೋಟ.

ಸ್ಥಾನ—ನರ್ಮದಾತೀರದಲ್ಲಿ ಮುರಾದನ ಶಿಬಿರ    ಕಾಲ—ರಾತ್ರಿ.

— ದಿಲ್‌ದಾರ್ ಏಕಾಂಗಿ —

**ದಿಲ್ದಾರ್**-ನಾನು ಬಹಿರಂಗದಲ್ಲಿ ಮುರಾದನ ವಿದೂಷಕ, ಹಾಸ್ಯ ಪರಿಹಾಸ್ಯಮಾಡ ತೊಡಗಿದರೆ ಏನೊ ಒಂದು ವ್ಯಂಗವಾಗಿ ಹೋಗುವುದು. ಪಾಪ! ಮೂರ್ಖ ನಿಗೆ ಅದೂ ತಿಳಿಯುವುದಿಲ್ಲ. ಅಸಂಬದ್ಧವಾಗಿ ಮಾತನಾಡುತ್ತಿರುವೆನೆಂದು ನಗುವನು. ಒಂದೆಡೆ ಯುದ್ಧದ ಹುಚ್ಚು, ಮತ್ತೊಂದೆಡೆ ವಿಲಾಸಾಕಾಂಕ್ಷೆ. ಇವುಗಳಲ್ಲಿ ಲೀನನಾಗಿರುವ ಮುರಾದನಿಗೆ ಮನೋರಾಜ್ಯವೆಂದರೆ ಒಂದು ಅನಾವಿಷ್ಕೃತದೇಶವೆ. ಇದೋ ಆ ಒರಟು ಮನುಷ್ಯನು ಹೀಗೆಯೇ ಬರುತ್ತಿ ರುವನು.

[ಮುರಾದನು ಬರುವನು.]

**ಮುರಾದ್**-ದಿಲ್ದಾರ್, ಇಂದಿನ ಯುದ್ಧದಲ್ಲಿ ನಮಗೆ ಜಯ! ಆನಂದಿತನಾಗು. ಇನ್ನು ಕೆಲ ದಿನದಲ್ಲೇ ತಂದೆಯನ್ನು ಸಿಂಹಾಸನದಿಂದ ಕೆಳಗಿಳಿಸಿ ನಾನು ಕುಳಿತುಕೊಳ್ಳುವೆನು. ಏನು ಚಿಂತೆ, ದಿಲ್ದಾರ್? ಏಕೆ ತಲೆದೂಗುವೆ?

**ದಿಲ್ದಾರ್**-ಜಹಪನಾ, ಇಂದು ನಾನೊಂದು ನೂತನ ತತ್ವದ ಆವಿಷ್ಕಾರವನ್ನು ಮಾಡಿರುವೆನು.

**ಮುರಾದ್**-ಅದೇನು? ಕೇಳುವ.

**ದಿಲ್ದಾರ್**-ಹಿಂಸ್ರ ಜಂತುಗಳಲ್ಲಿ ತಂದೆಯು ತನ್ನ ಸಂತಾನವನ್ನು ಭಕ್ಷಿಸುವುದು ವಾಡಿಕೆ! ನಿನಗೆ ತಿಳಿಯದೇ?

**ಮುರಾದ್**-ಹೌದು; ಅದಕ್ಕೇನು?

**ದಿಲ್ದಾರ್**-ಆದರವುಗಳಲ್ಲಿ ಸಂತಾನವು ತಂದೆಯನ್ನು ಭಕ್ಷಿಸುವ ರೂಢಿಯಿಲ್ಲ.

**ಮುರಾದ್**-ಇಲ್ಲ.

**ದಿಲ್ದಾರ್**-ಹುಂ! ಈಶ್ವರನು ಅಂಥ ರೂಢಿಯನ್ನು ಮಾನವವರ್ಗಕ್ಕೆ ಕೊಟ್ಟಿರುವನು. ಎರಡು ವಿಧವೂ ಉಂಟು; ಎಂತ ಬುದ್ಧಿ ದೇವರದು?

**ಮುರಾದ್**-ಬಹಳ ಬುದ್ಧಿ; ಹಾ! ಹಾ!! ಎಂತ ವಿನೋದದ ಮಾತು ದಿಲ್ದಾರ್!

**ದಿಲ್ದಾರ್**-ಆದರೂ ಮಾನವನ ಬುದ್ಧಿಯ ಮುಂದೆ ಈಶ್ವರನ ಬುದ್ಧಿಯು ಏನೇನೂ ಅಲ್ಲ. ಬುದ್ಧಿಬಲದಿಂದ ಮನುಷ್ಯನು ಈಶ್ವರನ ಮೇಲೂ ಅಧಿಕಾರ ಮಾಡುವನು.

**ಮುರಾದ್**-ಅದು ಹೇಗೆ?

**ದಿಲ್ದಾರ್**-ನೋಡು ಜಹಾಪನಾ, ದೇವರು ಮನುಷ್ಯನಿಗೆ ಹಲ್ಲುಗಳನ್ನು ಕೊಟ್ಟಿರುವುದೇಕೆ? ಅಗಿಯುವುದಕ್ಕೋಸುಗವಲ್ಲದೆ, ಹೊರಗೆ ತೋರಿಸುವುದಕ್ಕಾಗಲ್ಲ. ಆದರೆ ಮನುಷ್ಯನು ಅದೇ ಹಲ್ಲುಗಳಿಂದ ಅಗಿಯುವನು ಮತ್ತು ನಗುವನು. ಈಶ್ವರನ ಮೇಲೂ ಅಧಿಕಾರಮಾಡುತ್ತಿರುವನೆಂದು ಹೇಳಲಾಗದೊ?

**ಮುರಾದ್**-ಅದೇನೋ ಸರಿಯೇ, ಆದರೆ—

**ದಿಲ್ದಾರ್**-ಕೇವಲ ನಗುವುದೇ ಅಲ್ಲ-ಅನೇಕರು ನಗುವುದಕ್ಕೂ ಸಮಯಾಸಮಯಗಳನ್ನು ನೋಡುವರು. ಅದಕ್ಕೇನು ಹಣ ಕೊಡಬೇಕೆ?

**ಮುರಾದ್**-ಹಾ! ಹಾ! ಹಾ!

**ದಿಲ್ದಾರ್**-ದೇವರು ಮನುಷ್ಯನಿಗೆ ನಾಲಿಗೆಯನ್ನು ಕೊಟ್ಟಿರುವನು—ರುಚಿ ನೋಡುವ ಸಲುವಾಗಿ. ಆದರೆ ಮನುಷ್ಯನು ತದ್ವಾರಾ ಭಾಷೆಗಳನ್ನೇ ಸೃಷ್ಟಿಸಿಬಿಟ್ಟಿರುವನು. ದೇವರು ಮೂಗನ್ನು ಕೊಟ್ಟಿರುವನೇಕೆ? ಉಚ್ಛ್ವಾಸ ನಿಶ್ವಾಸಗಳ ಸಲುವಾಗಲ್ಲವೆ?

**ಮುರಾದ್**-ಮತ್ತು ವಾಸನೆ ನೋಡುವುದಕ್ಕೆ.

**ದಿಲ್ದಾರ್**-ಮನುಷ್ಯನಿಗೆ ಅದರ ಮೇಲೆಂತಹ ಅಧಿಕಾರ! ಅದೇ ಮೂಗಿನ ಮೇಲೆ ಉಪನೇತ್ರಗಳನ್ನು ಹತ್ತಿಸಿಬಿಟ್ಟಿರುವನು. ದೇವರಿಗೆ ಆ ಉದ್ದೇಶವು ಖಂಡಿತ ಇರಲಿಲ್ಲ. ಅಲ್ಲದೆ ಅನೇಕರ ಮೂಗು ನಿದ್ರೆಯ ಜೋಂಪಿನಲ್ಲಿ ಒಂದು ವಿಧವಾಗಿ ಕೂಗಹತ್ತುವುದು.

**ಮುರಾದ್**-ಹೌದು. ನನ್ನ ಮೂಗು ಮಾತ್ರ ಕೂಗುವುದಿಲ್ಲ.

**ದಿಲ್ದಾರ್**-ಕೂಗದೆ ಏನು? ಎಲ್ಲರ ಮೂಗೂ ದಿನಕ್ಕೊಂದುವೇಳೆ ಕೂಗಿದರೆ ನಿನ್ನ ಮೂಗು ಎರಡು ವೇಳೆ!

**ಮುರಾದ್**-ಈ ಬಾರಿ ಅದು ಕೂಗಲು ಮೊದಲಿಟ್ಟಾಗ ನನಗೆ ತೋರಿಸು.

**ದಿಲ್ದಾರ್**-ಅದೊಂದು ವಿಚಿತ್ರ ವಸ್ತು ಜಹಪನಾ. ನಿರಾಕಾರನಾದ ಈಶ್ವರನಂತೆ ಚನ್ನಾಗಿ ನೋಡಲು ಬರುವದಿಲ್ಲ. ಏಕಂದರೆ ಅದನ್ನು ತಿಳಿಯುವ ಅವಸ್ಥೆಯನ್ನು ಹೊಂದುವ ಮೊದಲೆ ಅದು ಪಲಾಯನವಾಗಿ ಹೋಗುವುದು.

**ಮುರಾದ್**-ಒಳ್ಳೇದು; ದಿಲ್ದಾರ್, ಈಶ್ವರನು ಮನುಷ್ಯರಿಗೆ ಕಿವಿಗಳನ್ನು ಕೊಟ್ಟಿರುವನಷ್ಟೆ. ಅವರದರಮೇಲೆ ಏನು ಅಧಿಕಾರ ಮಾಡಿರುವರು?

**ದಿಲ್ದಾರ್**-ಯಾ ಅಲ್ಲಾ! ಅದರ ವಿಷಯದಲ್ಲಿ ದೊಡ್ಡದೊಂದು ದಾರ್ಶನಿಕ ತತ್ವದ ಆವಿಷ್ಕಾರವೇ ಆಗಿರುವದಲ್ಲಾ—ಕಿವಿಯನ್ನೆಳೆದರೆ ತಲೆಯೂ ಸಂಗಡ ಬರುವುದೆಂದು—ಆ ಕಿವಿಯ ಪಾರ್ಶ್ವದಲ್ಲಿ ಒಂದು ತಲೆಯಿದ್ದರೆ. ಆದರನೇಕರಿಗೆ ಅದೇ ಶೂನ್ಯ !

**ಮುರಾದ್**-ಶೂನ್ಯವಲ್ಲವೆ? ಹಾ! ಹಾ! ಹಾ! ಇದೋ ಅಣ್ಣನು ಬರುತ್ತಿರುವನು. ನೀನಿನ್ನು ಹೊರಡು.

**ದಿಲ್ದಾರ್**--ಜೀ ಹುಕುಂ. (ಹೋಗುವನು)

[ಬೇರೊಂದು ಕಡೆಯಿಂದ ಔರಂಗಜೇಬನು ಬರುವನು.]

**ಮುರಾದ**-ಬಾ ಅಣ್ಣ, ನನ್ನನ್ನು ಆಲಿಂಗಿಸು. ನಿನ್ನ ಬುದ್ಧಿಬಲದಿಂದಲೇ ನಮಗೀ ಯುದ್ಧದಲ್ಲಿ ಜಯಲಾಭ.

**ಔರಂಗಜೇಬ**--ನನ್ನ ಬುದ್ಧಿಬಲದಿಂದಲ್ಲ, ನಿನ್ನ ಶೌರ್ಯಬಲದಿಂದ. ಮೃತ್ಯುವನ್ನು ಒಮ್ಮೆಗೇ ಹೆದರಿಸಿಬಿಟ್ಟೆಯಲ್ಲ.

**ಮುರಾದ**-ಅಸಫ್‌ಖಾನನು ಒಂದು ಮಾತು ಹೇಳುತ್ತಿದ್ದುದು ಜ್ಞಾಪಕವಿದೆ—ಯಾರು ಮರಣಕ್ಕೆ ಹೆದರುವರೊ ಅವರು ಜೀವಿಸಲು ಯೋಗ್ಯರಲ್ಲವೆಂದು. ಅದಿರಲಿ, ನೀನಾವ ಮಂತ್ರಬಲದಿಂದ ಯಶೋವಂತಸಿಂಹನ ೪೦,೦೦೦ ಮೊಗಲ್‌ಸೈನ್ಯವನ್ನು ವಶಮಾಡಿಕೊಂಡೆ? ಕೊನೆಗವರು ಯಶೋವಂತಸಿಂಹನ ರಾಜಪೂತ ಸೈನ್ಯದಮೇಲೆ ಬಂದೂಕನ್ನು ಗುರಿಹಿಡಿದು ನಿಂತುಬಿಟ್ಟರು. ಎಂತಹ ವಿಚಿತ್ರ ವ್ಯಾಪಾರ !

**ಔರಂಗಜೇಬ**-ಯುದ್ಧಕ್ಕೆ ಹಿಂದಿನದಿನ ಕೆಲವು ಜನ ಗೂಢಚಾರರನ್ನು ನಾನಲ್ಲಿಗೆ ಕಳುಹಿಸಿದ್ದೆನು. ಅವರು ಮೊಗಲ್ ಸೈನಿಕರಿಗೆ ಕಾಫರನ ಅಧೀನದಲ್ಲಿ ಕಾಫರರೊಡನೆ ಕಾಪರನಾದ ದಾರನ ಪಕ್ಷವಾಗಿ ಯುದ್ಧ ಮಾಡುವುದು ಅತಿ ತುಚ್ಛಕಾರ್ಯವೆಂದೂ, ಖುರಾನಿಗೆ ವಿರುದ್ಧವೆಂದೂ ಬೋಧೆ ಮಾಡತೊಡಗಿದರು. ಸೈನಿಕರೂ ಅದನ್ನು ನಂಬಿದರು.

**ಮುರಾದ**-ನಿನ್ನ ಕೌಶಲವು ಬಹು ಆಶ್ಚರ್ಯಕರವಾದುದು.

**ಔರಂಗಜೇಬ**-ಕಾರ್ಯಸಿದ್ಧಿಯಾಗಬೇಕಾದರೆ ಯಾವದಾವರೊಂದು ಉಪಾಯದ ಮೇಲೆ ನಿರ್ಭರರಾಗುವುದು ಉಚಿತವಲ್ಲ. ನಾನಾವಿಧ ಉಪಾಯಗಳನ್ನು ಹೂಡಬೇಕು.

[ಮಹಮುದನು ಪ್ರವೇಶಿಸುವನು.]

**ಔರಂಗಜೀಬ**-ಏನು ಸಮಾಚಾರ ಮಹಮುದ್?

**ಮಹಮುದ್**-ತಂದೆಯೇ, ಮಹಾರಾಜ ಯಶೋವಂತಸಿಂಹನು ಸೈನ್ಯ ಸಮೇತನಾಗಿ ನಮ್ಮ ಶಿಬಿರವನ್ನು ಪ್ರದಕ್ಷಿಣ ಮಾಡುತ್ತಿರುವನು. ಆಕ್ರಮಣ ಮಾಡು ವನೋ ಏನೋ?

**ಔರಂಗಜೀಬ**-ಇಲ್ಲ.

**ಮಹಮುದ್**-ಹಾಗಾದರೆ ಅವನ ಉದ್ದೇಶವೇನು?

**ಔರಂಗಜೀಬ**-ರಾಜಪೂತ ಜಾತಿಯ ದರ್ಪ. ಆ ದರ್ಪವೇ ಮಹಾರಾಜನ ಪರಾಜಯಕ್ಕೆ ಕಾರಣವಾಗುವುದು. ನಾನು ಸೈನ್ಯದೊಡನೆ ನರ್ಮದಾತೀರಕ್ಕೆ ಬಂದೊಡ ನೆಯೇ ಅವನೆನ್ನನ್ನು ಆಕ್ರಮಣ ಮಾಡಿದ್ದರೆ ಆಗೆನ್ನ ಪರಾಜಯವು ಸ್ವತಃ ಸಿದ್ಧವಾಗಿತ್ತು. ಏಕೆಂದರೆ ಆಗ ನೀನಿನ್ನೂ ಇಲ್ಲಿಗೆ ಬಂದಿರಲಿಲ್ಲ. ನನ್ನ ಸೈನ್ಯವೂ ದಾರಿ ನಡೆದು ಆಯಾಸಗೊಂಡಿತ್ತು. ನಾನು ಕೇಳಿದ್ದರಲ್ಲಿ ಆ ರೀತಿ ಆಕ್ರಮಣ ಮಾಡುವುದು ವೀರೋಚಿತವಲ್ಲವೆಂದು ಯಶೋವಂತ ಸಿಂಹನು ನಿನ್ನ ಆಗಮ ನವನ್ನು ನಿರೀಕ್ಷಿಸುತ್ತಿದ್ದನಂತೆ. ಅತಿಯಾದ ದರ್ಪಕ್ಕೆ ಪತನವು ಸಿದ್ಧವಾಗಿಯೇ ಇರುವುದು.

**ಮಹಮುದ್**-ಹಾಗಾದರೆ ನಾವು ಅವರನ್ನು ಆಕ್ರಮಣ ಮಾಡುವುದು ಬೇಡವೆ?

**ಔರಂಗಜೀಬ**-ಇಲ್ಲ ಮಹಮುದ್, ನಮ್ಮ ಶಿಬಿರವನ್ನು ಪ್ರದಕ್ಷಿಣ ಮಾಡುವುದರಿಂದ ಮಹಾರಾಜನಿಗೇನಾದರೂ ಸಮಾಧಾನವಾಗುವ ಪಕ್ಷದಲ್ಲಿ ಒಂದಾವರ್ತಿಯಲ್ಲ, ಹತ್ತಾವರ್ತಿ ಪ್ರದಕ್ಷಿಣ ಮಾಡಲಿ. ನೀನು ಹೋಗು. (ಮಹಮುದ್ ಹೋಗು ವನು)

**ಔರಂಗಜೀಬ**-ನನ್ನ ಸರಳ ಉದಾರ ನಿರ್ಭೀಕ ಮಹಮುದ್, ನಿನಗೆ ಯುದ್ಧದ ಕನಸು ಹತ್ತಿರುವದು. ಮುರಾದ್ ನಾನಿನ್ನು ಹೊರಡುವೆನು ನೀನು ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊ.

**ಮುರಾದ್**-ಒಳ್ಳೇದು, ಎಲ್ಲಿ ನನ್ನ ಸಿತಾರ್ ಮತ್ತು ನರ್ತಕಿಯರು? (ಹೋಗು ವರು.)

---

## ಮೂರನೆಯ ನೋಟ.

ಸ್ಥಾನ—ಕಾಶಿಯಲ್ಲಿ ಷೂಜನ ಸೈನ್ಯ ಶಿಬಿರ. ಕಾಲ—ರಾತ್ರಿ. ಸೂಜನೂ ಮತ್ತು ಪಿಯಾರಳೂ.

**ಷೂಜಾ**—ಕೇಳಿದೆಯ ಪಿಯಾರಾ, ದಾರನ ಮಗ ಸುಲೇಮಾನನು ಈ ಯುದ್ಧದಲ್ಲಿ ನಮ್ಮ ಪ್ರತಿಕಕ್ಷಿ.

**ಪಿಯಾರಾ**—ಸುಲೇಮಾನನು ಡಿಲ್ಲಿಯಿಂದ ಬಂದಿರುವನಲ್ಲವೆ? ಸಂಗಡ ನಿಶ್ಚಯ ವಾಗಿಯೂ ಡಿಲ್ಲಿಯ ಲಡ್ಡುವನ್ನು ತಂದಿರುವನು. ಜಾಗ್ರತೆಯಾಗಿ ಅಲ್ಲಿಗೆ ಆಳುಗಳನ್ನು ಕಳುಹಿಸು. ಹಾ! ಎಂದು ಬಾಯಿಬಿಡುವೆಯೇಕೆ? ಜಾಗ್ರತೆಯಾಗಿ ಕಳುಹಿಸು.

**ಷೂಜಾ**-ಲಡ್ಡು -ಅವನ ಸಂಗಡ ಯುದ್ಧವು ಒದಗಿರುವದು.

**ಪಿಯಾರಾ**-ಬೇಲದ ಹಣ್ಣಿನ ಮುರಬ್ಬಾ ಇದ್ದರೆ ಮತ್ತು ಉತ್ತಮ. ಅದೂ ನನಗೆ ಇಷ್ಟವೆ. ಆದರೆ ಡಿಲ್ಲಿಯಲಡ್ಡು! ಯಾವದನ್ನು ಕುರಿತು ಡಿಲ್ಲಿಯ ಲಡ್ಡನ್ನು ತಿಂದು ಸಾಯಿ ಎಂದು ಹೇಳಿರುವರೋ ಅಂತಹ ದಿವ್ಯವಸ್ತು; ಜಾಗ್ರತೆ ಜನ ರನ್ನು ಕಳುಹಿಸಿ ತರಿಸು.

**ಷೂಜಾ**-ಒಂದೇ ತಡವೆಗೆ ಇಷ್ಟೊಂದು ಮಾತಾಡಿದರೆ ನಾನೇನು ಹೇಳಲಿ?

**ಪಿಯಾರಾ**-ನೀನೇನು ಹೇಳುವೆ? ಕೇವಲ ಯುದ್ಧ ಮಾಡಬಲ್ಲೆ.

**ಷೂಜಾ**-ಮಾತಾಡಲು ಅವಕಾಶವನ್ನು ಕೊಟ್ಟರಲ್ಲವೆ ಹೇಳುವುದು?

**ಪಿಯಾರಾ**-ಎಷ್ಟೊಂದು ಅವಕಾಶವನ್ನು ಕೊಡುವುದು? ನನ್ನಹಾಗೆ ಸರಳವಾಗಿ ಸಂಕ್ಷೇಪವಾಗಿ ನೀನು ಹೇಳಬಲ್ಲೆಯ? ನೀನು ಮಾತಾಡತೊಡಗಿದರೆ ವಿಷಯಗಳು ಒಂದಕ್ಕೊಂದು ಬೆರತು ಹೋಗುವುವು. ಅಲ್ಲದೆ ನಿನ್ನ ವ್ಯಾಕರಣವೊ!

**ಷೂಜಾ**-ಏನು ನನ್ನ ವ್ಯಾಕರಣ?

**ಪಿಯಾರಾ**-ಭಾಷೆಯ ಅರ್ಧಾಂಶ ಹೆಸರುಗಳನ್ನು ನೀನು ಕಲಿತಿಲ್ಲ. ಮಾತಾಡತೊಡಗಿದರೆ ಹಾಗೂಹೀಗೂ ಅರ್ಧ ಪಾರ್ಶಿ, ಅರ್ಧ ಅರಾಬೀ, ಅರ್ದ ಹಿಂದೂಸ್ತಾನಿ ಶಬ್ದಗಳನ್ನು ಪ್ರಯೋಗಿಸುತ್ತಾ ಒಂದುವಿಚಿತ್ರ ಭಾಷೆಯನ್ನೇ ಸೃಷ್ಟಿಸಿಬಿಡುವಿರಿ. ಯಾರಿಂದ ಸಾಧ್ಯ ಅದಕ್ಕೆ ಅರ್ಥಮಾಡುವುದು?

**ಷೂಜಾ**-ನಿನ್ನ ಪ್ರಯೋಗಗಳು ಮಾತ್ರ ಬಹು ಸಾಧುವೆಂದು ತಿಳಿದಿರುವೆಯೇನು?

**ಪಿಯಾರಾ**-ಹೌದು. ನನ್ನ ಭಾಷೆಯನ್ನು ಚನ್ನಾಗಿ ತಿಳಿದುಕೊಳ್ಳುವ ಸಹನೆಯೂ ನಿಮ್ಮಲ್ಲಿಲ್ಲ. ಹಾ! ಈಶ್ವರ, ಇಂತ ಬುದ್ಧಿವಂತ ಸ್ತ್ರೀಜಾತಿಯನ್ನು ಈ ನಿರ್ಬೋಧ

ಪುರುಷರ ಉಡಿಯಲ್ಲಿ ಹಾಕಬಹುದೆ ! ಅದರ ಬದಲಾಗಿ ಕಾದ ಎಣ್ಣೆಯಲ್ಲಿ ಹಾಕಿದ್ದರೆಷ್ಟು ಸುಖಿಗಳಾಗಿರುತ್ತಿದ್ದರು !

**ಷೂಜಾ**-ಹೋಗಲಿ, ನೀನು ಗೆದ್ದೆ; ನೀನೇ ಬಲವಂತಳು.

**ಪಿಯಾರಾ**-ಸಿಂಹದ ಬಲವು ದವಡೆಗಳಲ್ಲಿ, ಆನೆಯ ಬಲವು ಸೊಂಡಲಿನಲ್ಲಿ, ಮಹಿಷದ ಬಲವು ಕೊಂಬಿನಲ್ಲಿ, ಕುದುರೆಯ ಬಲವು ಕಾಲುಗಳಲ್ಲಿ, ಹಿಂದೂಗಳ ಬಲವು ಪಲಾಯನದಲ್ಲಿ. ನಾರಿಯರ ಬಲವು ನಾಲಿಗೆಯಲ್ಲಿ!

**ಷೂಜಾ**-ಇಲ್ಲ, ನಾರಿಯರ ಬಲವು ಅಪಾಂಗದಲ್ಲಿ!

**ಪಿಯಾರಾ**-ಓಹೊ! ಮೊದಲು ಮೊದಲು ಅಪಾಂಗವು ಸ್ವಲ್ಪ ಕಾರ್ಯಕಾರಿಯಾಗಬಹುದು. ಆದರೆ ಆಜೀವವೂ ಸ್ವಾಮಿಯನ್ನು ಅಂಕೆಯಲ್ಲಿಟ್ಟುಕೊಂಡಿರಬಲ್ಲುದೆಂದರೆ ನಾಲಿಗೆಯೇ.

**ಷೂಜಾ**-ನೀನೆನಗೆ ಮಾತಾಡಲು ಅವಕಾಶ ಕೊಡುವುದೇ ಇಲ್ಲ. ನಾನು ಏನು ಹೇಳಲು ಬಂದಿರುವೆನು ಗೊತ್ತುಂಟೆ?

**ಪಿಯಾರ**-ಅದು ನಿನ್ನ ದೋಷ. ಇಷ್ಟೊಂದು ದೊಡ್ಡ ಭೂಮಿಕೆಯನ್ನು ರಚಿಸುವ ಅವಕಾಶದಲ್ಲಿ ಹೇಳತಕ್ಕದ್ದನ್ನು ಮರೆತು ಕುಳಿತಿರುವಹಾಗಿದೆ.

**ಷೂಜಾ**-ನೀನೀ ರೀತಿ ಹುಡುಗಾಟವಾಡ ತೊಡಗಿದರೆ ನಿಶ್ಚಯವಾಗಿ ಮರತೇ ಹೋಗುವೆನು.

**ಪಿಯಾರಾ**-ಹಾಗಾದರೆ ಹೇಳು. ಸಂಕ್ಷೇಪವಾಗಿ ಒಂದೇ ಉಸಿರಿನಲ್ಲಿ ಹೇಳಬೇಕು; ನೆನಪಿರಲಿ.

**ಷೂಜಾ**-ದಾರನ ಕುಮಾರ ಸುಲೇಮಾನನು ನನ್ನ ಮೇಲೆ ಯುದ್ಧಕ್ಕೆ ಬಂದಿರುವನು. ಅವನ ಸಂಗಡ ಬಿಕನೀರ್ ಮಹಾರಾಜ ಜಯಸಿಂಹ ಮತ್ತು ಸೇನಾಧಿಪತಿ ದಿಲೀರಖಾ೯.

**ಪಿಯಾರಾ**-ಅವರೆಲ್ಲರಿಗೂ ಒಂದುದಿನ ಔತಣ ಮಾಡಿಸು.

**ಷೂಜಾ**-ನಿನಗಿನ್ನೂ ಹುಡುಗಾಟ. ಭೀಷಣ ಯುದ್ಧದ ಪ್ರಸಂಗ ಬಂದಿರುವದು. ಈಗಲೂ ನೀನು ..... ........

**ಪಿಯಾರಾ**-ಯುದ್ಧವಾದರೇನು? ಬಂದವರಿಗೊಂದಾವರ್ತಿ .... ಹೋಗಲಿ ಬಿಡು. ನನ್ನ ಮಾತಿನಲ್ಲಿ ನಿನಗೆ ಅಪಹಾಸ್ಯ. ನೀನು ಹೇಳುವುದೆನ್ನು ಮುಗಿಸು.

**ಷೂಜಾ**-ಇಂದು ಮಹಾರಾಜಾ ಜಯಸಿಂಹನು ನಮ್ಮ ಶಿಬಿರಕ್ಕೆ ಬಂದಿದ್ದನು. ಸಮ್ರಾಟನು ಮೃತನಾಗಿಲ್ಲವಂತೆ. ವಿಶ್ವಾಸವನ್ನು ಹುಟ್ಟಿಸಲು ಸಮ್ರಾಟನು

ಸ್ವಹಸ್ತದಿಂದ ಬರೆದ ಒಂದು ಪತ್ರವನ್ನು ತೋರಿದನು. ಪತ್ರದಲ್ಲಿ .....

**ಪಿಯಾರಾ**-ಪತ್ರದಲ್ಲೇನು? ಬೇಕೆಂತ ನನ್ನನ್ನು ಭಯಪಡಿಸುತ್ತಿರುವ ಹಾಗಿದೆ..

**ಷೂಜಾ**-ತಂದೆಯು ಹೀಗೆಂದು ಬರೆದಿರುವನು: 'ನೀನು ಯುದ್ಧಮಾಡದೆ ಬಂಗಾಳಕ್ಕೆ ಹಿಂದಿರುಗಿದರೆ ನಿನ್ನನ್ನಾ ಸುಬೆಯ ಅಧಿಕಾರದಿಂದ ತೆಗೆದುಹಾಕುವುದಿಲ್ಲವೆಂದು' ಇಲ್ಲವೆ........

**ಪಿಯಾರಾ**-ಇಲ್ಲವೇ ತೆಗೆದುಹಾಕುವೆನು ಎಂದು. ಸರಿ, ನಿನ್ನಮಾತು ಮುಗಿಯಿತಷ್ಟೆ. ಈಗ ನಾನೊಂದು ಹಾಡು ಹಾಡಲೆ?

**ಷೂಜಾ**-ಅದಕ್ಕೆ ನಾನೇನು ಉತ್ತರಕೊಟ್ಟೆ ಬಲ್ಲೆಯ? 'ಯುದ್ಧವಿಲ್ಲದೆ ನಾನುಬಂಗಾಳಕ್ಕೆ ಹಿಂದಿರುಗುವೆನು. ತಂದೆಯ ಆಜ್ಞೆಯನ್ನು ಶಿರಸಾ ವಹಿಸಿ ನಡೆಯುವುದು ನನಗೆ ಸಮ್ಮತ. ಆದರೆ ದಾರನ ಪ್ರಭುತ್ವವನ್ನು ಮಾತ್ರ ಎಂದಿಗೂ ಒಪ್ಪಲಾರೆ' ಎಂದು.

**ಪಿಯಾರಾ**-ನಾನು ಹಾಡಲೂ ಬೇಡವೊ? ಅಷ್ಟೇಕೆ ನೀನೇ ಮಾತನಾಡಿಕೊ, ನಾನು ಹೋಗುವೆನು.

**ಷೂಜಾ**-ಬೇಡ ಬೇಡ; ನಾನು ಸುಮ್ಮನಾದೆನು ಈಗ ಹಾಡು.

**ಪಿಯಾರಾ**-ಪ್ರತಿಜ್ಞೆಯನ್ನು ಮರೆತೀಯೆ ಜೋಕೆ! ಯಾವದನ್ನು ಹಾಡಲಿ?

**ಷೂಜಾ**-ನಿನ್ನ ಇಷ್ಟಬಂದದ್ದು; ಬೇಡ; ಒಂದು ಪ್ರಣಯದ ಹಾಡನ್ನು ಹಾಡು. ಭಾಷೆಯಲ್ಲಿ ಪ್ರೇಮ, ಭಾವದಲ್ಲಿ ಪ್ರೇಮ, ಭಂಗಿಯಲ್ಲಿ ಪ್ರೇಮ, ಅಂತ ಹಾಡನ್ನು ಹಾಡು. (ಪಿಯಾರಳು ಹಾಡುವಳು.)

**ಷೂಜಾ**-ಅದೇನು ದೂರದಲ್ಲಿ ಶಬ್ದ? ಮೇಘಗರ್ಜನೆಯಂತೆ ಗಂಭೀರವಾದ ಶಬ್ದ! ಇದೋ ಮತ್ತೆ ಕೇಳುತ್ತಿರುವದು.

**ಪಿಯಾರಾ**-ಓ! ನೀನೆನ್ನನ್ನು ಹಾಡಗೊಡಿಸುವುದಿಲ್ಲ; ನಾನು ಹೋಗುವೆನು.

**ಷೂಜಾ**-ಅದಿರಲಿ, ನೀನು ಹಾಡು ಪಿಯಾರಾ.

**ಪಿಯಾರಳ ಹಾಡು.**

ಮನದಾಸೆ ಮುಗಿಯದೀ ಜನ್ಮದಲ್ಲಿ ||
ಹೃದಯವಿದು ಬಹುಸಣ್ಣ ಅಕಟ ಧರಿಸುವುದೆಂತು?
ಈ ಆಕುಲ ಅಸೀಮ ಪ್ರೇಮವನ್ನು ||
ಈ ನಿನ್ನ ಹೃದಯಮಂ ಎನ್ನ ವಕ್ಷದಲಿ ತಂ-
ದಿಡಲು ಬೇಡಿಕೊಂಡು ಸನಿಹದಲ್ಲಿ ||

ಸೇರಿಸಲು ಮನವೆರಡು ವಿರಹವೆಂತೈದಿದುದು?
ಎಂತು ಪೋಗಡಿಹುದೀ ಅಭಾವವಿನ್ನು ||
ಈ ಎನ್ನ ಕ್ಷುದ್ರ ಜೀ- ವನ ಮೆನ್ನ ಕ್ಷುದ್ರ ಜಗ-
ಮೆನಿತು ಪ್ರೀತಿಯನೆನಗೆ ಕೊಡಲು ಬಹುದು? ||
ಮನದೊಲ್ಮೆಗಂತ್ಯ ವಿ- ಲ್ಲೆನಗೆ ಶಾಂತಿಯುಮಿಲ್ಲ
ಮತ್ತೆ ಪ್ರೀತಿಸುವೆನೆಂಬಾಸೆ ಪಿರಿದು ||
ಅಮರರಾಗುತಲೆಮ್ಮ ಬಾಳುವೆಯನಂತಮೆನೆ
ಕಳೆಯೆ ಮುಸುಕಿರುವೆಲ್ಲ ಅಂತರಗಳು ||
ಎನ್ನಾಸೆ ಪೂರ್ಣವಹು ದೊಲ್ಮೆ ಸ್ವತಂತ್ರಮುಹು-
ದೀ ಜನ್ಮ ಋಣವಲ್ಲ ತೀರಿಸುವೆನು ||

**ಷೂಜಾ**-ಈ ಜೀವನವು ಒಂದು ವಿಧವಾದ ಗಾಢನಿದ್ರೆ; ಮಧ್ಯೆ ಮಧ್ಯೆ ಸ್ವಪ್ನದಂತೆ ಸಂಮೋಹನಕಾರಿಯಾದ ಸ್ವರ್ಗೀಯವಾದ ಅಪೂರ್ವಭಂಗಿ! ಒಂದು ಸೌಖ್ಯ ಮಯ ಸಂಕೇತವು ಭೂಮಿಗಿಳಿದು ಬಂದಂತೆ! ಈ ನಿದ್ರಾಲಾಲಸ ಜಾಗರಣವು ಎಷ್ಟೊಂದು ಮಧುರ! ಸಂಗೀತವು ಸ್ವರ್ಗಲೋಕದ ಝುಂಕಾರದ ಪ್ರತಿ ಧ್ವನಿ ಮಾತ್ರ. ಅನ್ಯಥಾ ಆದರಲ್ಲಿ ಅಷ್ಟೊಂದು ಮಾಧುರ್ಯವೆಲ್ಲಿಯದು

[ಪಿರಂಗಿಯ ಶಬ್ದ.]

(ಚಮಕಿತನಾಗಿ) ಅದೇನು?

**ಪಿಯಾರಾ**-ಹೌದು ಪ್ರಿಯತಮ. ಈ ಸರಿರಾತ್ರಿಯಲ್ಲಿ ಗುಂಡನ್ನು ಹಾರಿಸುವ ಶಬ್ದ! ಅದೂ ಕೇವಲ ಸಮಿಪದಲ್ಲಿ. ಶತ್ರುಸೈನ್ಯವು ನದಿಯ ಆಚೆ ದಡದಲ್ಲಿರುವದು.

**ಷೂಜಾ**-ಇದೊ ಮತ್ತೆ ಕೇಳಿಬರುತ್ತಿರುವದು. ಪಿಯಾರಾ, ನಾನು ಹೋಗಿ ನೋಡುವೆನು. (ಹೋಗುವನು)

**ಪಿಯಾರಾ**-ಬಾರಿಬಾರಿಗೂ ಪಿರಂಗಿಗಳ ಧ್ವನಿ, ಸೈನ್ಯದ ಕೋಲಾಹಲ, ಅಸ್ತ್ರಗಳ ಆಸ್ಫಾಲನ! ರಾತ್ರಿಯ ಈ ಗಭೀರ ಶಾಂತಿಯಲ್ಲಿ ಹಠಾತ್ತಾಗಿ ವಜ್ರಪಾತವಾದಂತೆ ಕಿವಿಗಳನ್ನು ತಟ್ಟುವ ಆರ್ತಧ್ವನಿ. (ಷೂಜನು ಬರುವನು.)

**ಷೂಜಾ**-ಪಿಯಾರಾ, ಸಮ್ರಾಟನ ಸೈನ್ಯವು ಶಿಬಿರವನ್ನು ಮುತ್ತಿರುವದು.

**ಪಿಯಾರಾ**-ಮುತ್ತಿರುವದೇ! ಅದೇಕೆ?

**ಷೂಜಾ**-ವಿಶ್ವಾಸ ಘಾತಕನಾದಾ ರಜಪೂತ! ನಾನು ಯುದ್ಧಕ್ಕೆ ಹೋಗುವೆನು, ನೀನು ಶಿಬಿರದೊಳಹೊಗು. ಪಿಯಾರಾ, ಭಯವೇನೂ ಇಲ್ಲ. (ಹೋಗುವನು)

ಪಿಯಾರಾ—ಕೋಲಾಹಲವು ಕ್ರಮೇಣ ಹೆಚ್ಚುತ್ತಿರುವುದು. ಓಹೊ ಇದೇನು?
(ಹೋಗುವಳು.)

[ನೇಪಥ್ಯದಲ್ಲಿ ಕೋಲಾಹಲ.]

(ಸುಲೇಮಾನ್ ಮತ್ತು ದಿಲೀರ್‌ಖಾನರು ಬೇರೆ ಬೇರೆ ದಿಕ್ಕಿನಿಂದ ಪ್ರವೇಶಿಸುವರು.)

ಸುಲೇಮಾನ್-ಸುಬಾದಾರರೆಲ್ಲಿ ?

ದಿಲೀರ್ ಖಾನ್-ನದಿಯ ಕಡೆ ಓಡಿಹೋದಂತಿದೆ.

ಸುಲೇಮಾನ್-ಓಡಿಹೋದರೆ? ಅವರನ್ನು ಬೆನ್ನಟ್ಟು, ಹೋಗು ದಿಲೀರಖಾನ್.
(ದಿಲೀರ್‌ಖಾನನು ಹೋಗುವನು. ಜಯಸಿಂಹನು ಬರುವನು.)

ಸುಲೇಮಾನ್-ಮಹಾರಾಜರೆ, ನಮಗಿಂದು ಜಯಲಾಭ!

ಜಯಸಿಂಹ-ನೀವು ರಾತ್ರಿಯೇ ನದಿಯನ್ನು ದಾಟಿ ಶತ್ರು ಶಿಬಿರವನ್ನು ಆಕ್ರಮಣ ಮಾಡಿದಿರೇಕೆ?

ಸುಲೇಮಾನ್-ಏಕಾಗಬಾರದು? ಆದರಿಷ್ಟೊಂದು ಬೇಗ ಜಯಲಾಭವಾಗುವುದೆಂದು ನಾನು ಯೋಚಿಸಿರಲಿಲ್ಲ.

ಜಯಸಿಂಹ-ಸುಲ್ತಾನ ಷೂಜನ ಸೈನ್ಯವು ಯುದ್ಧಕ್ಕನುವಾಗಿರಲಿಲ್ಲ; ಅವರು ನಿದ್ರೆಯಿಂದೆಚ್ಚರವಾಗುವ ಹೊತ್ತಿಗೆ ಅರ್ಧಾಂಶ ಸೈನ್ಯವೇ ಹತವಾಗಿ ಹೋಯಿತು.

ಸುಲೇಮಾನ್-ಅದಕ್ಕೆ ಕಾರಣ? ಚಿಕ್ಕ ತಂದೆಯು ಯುದ್ಧವನ್ನು ಬಲ್ಲವನಲ್ಲವೆ, ಆತನಿಗೆ ರಾತ್ರಿ ಆಕ್ರಮಣ ಮಾಡುವ ಸಂಭವವುಂಟೆಂದು ತಿಳಿಯದೆ?

ಜಯಸಿಂಹ-ನಾನು ಸಮ್ರಾಟನ ಪರವಾಗಿ ಆತನೊಡನೆ ಸಂಧಿ ಮಾಡಿದ್ದೆನು. ಆತನು ಯುದ್ಧವಿಲ್ಲದೆ ವಂಗದೇಶಕ್ಕೆ ಹಿಂತಿರುಗಲು ಸಮ್ಮತನಾಗಿದ್ದನು. ಹೆಚ್ಚೇನು ? ಪ್ರಯಾಣದ ಸಲುವಾಗಿ ಹಡಗುಗಳೂ ಸಿದ್ಧಮಾಡಲ್ಪಟ್ಟಿದ್ದವು.

(ದಿಲೀರಖಾನನು ಬರುವನು.)

ದಿಲೀರ್ ಖಾನ್-ಷಹಜಾದ, ಸುಲ್ತಾನ್‌ಷೂಜನು ಪರಿವಾರ ಸಮೇತನಾಗಿ ಹಡಗನ್ನು ಹತ್ತಿ ಓಡಿಹೋದನು.

ಜಯಸಿಂಹ-ಸರಿ, ಸಿದ್ಧವಾಗಿದ್ದಾ ಹಡಗಿನಲ್ಲಿಯೇ ಹೋಗಿರಬೇಕು.

ಸುಲೇಮಾನ್-ಬೆನ್ನಟ್ಟುವಂತೆ ಒಡನೆ ಆಜ್ಞೆಮಾಡು. (ದಿಲೀರಖಾನ್ ಹೋಗುವನು.)

ಸುಲೇಮಾನ್-ಮಹಾರಾಜರೆ, ತಾವು ಯಾರ ಆಜ್ಞೆಯಿಂದ ಈ ಸಂಧಿಯ ಪ್ರಸ್ತಾಪ ಮಾಡಿದಿರಿ?

**ಜಯಸಿಂಹ**-ಸಮ್ರಾಟನ ಆಜ್ಞೆಯಿಂದ.

**ಸುಲೇಮಾನ್**-ತಂದೆಯು ಈ ವಿಷಯವಾಗಿ ನನಗೇನೂ ಬರೆಯಲಿಲ್ಲ. ನೀವೂ ಹೇಳಲಿಲ್ಲವೇಕೆ?

**ಜಯಸಿಂಹ**-ಸಮ್ರಾಟನ ನಿಷೇಧವಿತ್ತು.

**ಸುಲೇಮಾನ್**-ಇಷ್ಟಾದಮೇಲೀ ಸುಳ್ಳುಕಥೆ ! ನೀವಿನ್ನು ಹೊರಡಿ. (ಜಯಸಿಂಹನು ಹೋಗುವನು.)

**ಸುಲೇಮಾನ್**-ಸಮ್ರಾಟನದೊಂದು ಆಜ್ಞೆ, ತಂದೆಯಿಂದ ಮತ್ತೊಂದು ಆಜ್ಞೆ. ಇದು ಸಂಭವವೆ? ಯಥಾರ್ಥವಾದರೆ ಅನ್ಯಾಯವಾಗಿ ಮಹಾರಾಜನನ್ನು ಭರ್ತ್ಸನೆ ಮಾಡಿದಂತಾಗುವುದು. ಸಮ್ರಾಟನ ಆಜ್ಞೆಯು ಈ ರೀತಿಯಾಗಿದ್ದರೆ ತಂದೆಯು ಸಪರಿವಾರವಾಗಿ ಷೂಜನನ್ನು ಸೆರೆ ಹಿಡಿದುಕೊಂಡು ಬಾ, ಎಂದು ಬರೆಯುತ್ತಿದ್ದನೆ?—ಇಲ್ಲ—ನಾನು ತಂದೆಯ ಆಜ್ಞೆಯನ್ನು ಪಾಲಿಸುವೆನು. ತಂದೆಯ ಆಜ್ಞೆಯು ನನಗೆ ಈಶ್ವರನ ಆಜ್ಞೆಯಂತೆ (ಹೋಗುವನು.)

## ನಾಲ್ಕನೆಯ ನೋಟ.

ಸ್ಥಾನ—ಜೋಧಪುರದ ದುರ್ಗಪ್ರಾಸಾದ. ಕಾಲ—ಪ್ರಭಾತ.

(ಮಹಾಮಾಯೆ ಮತ್ತು ಚಾರಣ ಬಾಲಿಕೆಯರು.)

[ಚಾರಣ ಬಾಲಿಕೆಯರ ಹಾಡು.]

|| ೧ ||

ಕರೆದೊಯ್ದರಾತನಂ ಜಯಸಿರಿಯ ಕೈಹಿಡಿಯೆ;
ಕರೆದುದಾತನನೆಮ್ಮ ತಾಯ್ನಾಡು; ಗೌರವದ
ಚರಣದೋಳ್ ಪ್ರಾಣಗಳ ಬಲಿಗೊಡಲು ಪೋಗಿಹನು
ಸುರರ ಮರಣದ ಸಿಂಧುವಂ ಕೂಡೆ ಕಡೆವೆನೆಂದು;
ಸಧವೆಯೋ ವಿಧವೆಯೋ ಜಗದೆತಲೆಯೆತ್ತಿನಡೆಯುವೆಸತತಮುಂ ನೀನು;
ಮುದದೊಳೀಳಮ್ಮ ವೀರಜಾಯೆ,
ಕಟ್ಟಿಕೋ ಹೆರಳನೊರೆಸಿಕೋ ಕಣ್ಣೀರ್ವನಿಗಳನ್ನು ||

|| ೨ ||

ಅರಿಗಳಾಮಂತ್ರಣವ ಪಾಲಿಸಲು ಪೋಗಿಹನು;
ಅರಿವರವರೋರೋರ್ವರನು ವಜ್ರಕವಚದಿಂ;

ಮೆರೆವಸಿಗಳಿಂದವರ ಪರಿಚಯಂ ಪೇರ್ಚುವುದು;
ತರಳ ಭ್ರುಕುಟಿಗಳವರನುಡಿ, ನೆಡೆಯೆ ರಕ್ತಧಾರೆ;
ಸಧವೆಯೋ ವಿಧವೆಯೋ ಜಗದೆ--ಇತ್ಯಾದಿ.

|| ३ ||

ಸಂಧಿ ಸೋಲುಗಳಿಲ್ಲ; ಭೀಮ ಸಮರದ ನಡುವೆ
ನಿಂದಿಹನು ರುಧಿರಾಕ್ತದೇಹದಿಂ ಶೋಭಿಸುತೆ;
ಬಂದು ಕುಣಿವಳು ಮೃತ್ಯುದೇವಿ; ಕೇಳುತಲಿಹುದು
ಒಂದುಗೂಡುತೆ ಜಯಧ್ವನಿಯಾರ್ತನಾದದಿಂದೆ ;
ಸಧವೆಯೋ ವಿಧವೆಯೋ ಜಗದೆ--ಇತ್ಯಾದಿ.

|| ೪ ||

ಘೋರ ಸಂಗ್ರಾಮಕಿಂದಾತನೈದಿಹನಮ್ಮ,
ಸಾರುವನು ಮರಳಿ ಜಯಲಕ್ಷ್ಮಿಯಂ ಕೈಪಿಡಿದು;
ಬಾರದೊಡೆ ಮೃತನಾಗಿ ಅಮರರಂತೆಸೆವನಾ
ಭೂರಿ ಮಹಿಮನ ತಳೆದು ಕ್ರೋಡದಲಿ ಸಾಯ್ವೆ ನೀನು;
ಸಧವೆಯೋ ವಿಧವೆಯೋ ಜಗದೆ--ಇತ್ಯಾದಿ.

[ದುರ್ಗದ ಪ್ರಹರಿಯು ಪ್ರವೇಶ.]

**ಪ್ರಹರೀ**-ಮಹಾರಾಣಿಯವರೇ -

**ಮಹಾಮಾಯಾ**-ಸಮಾಚಾರವೇನು ಪ್ರಹರಿ ?

**ಪ್ರಹರೀ**-ಮಹಾರಾಜರು ಹಿಂದಿರುಗಿ ಬಂದಿರುವರು.

**ಮಹಾಮಾಯಾ**-ಬಂದಿರುವರು! ಯುದ್ಧದಲ್ಲಿ ಜಯಲಾಭವನ್ನು ಹೊಂದಿ ಬಂದಿರುವರೇ ?

**ಪ್ರಹರೀ**-ಇಲ್ಲ ರಾಜ್ಞಿ, ಈ ಯುದ್ಧದಲ್ಲವರು ಸೋತು ಬಂದಿರುವರು.

**ಮಹಾಮಾಯಾ**-ಸೋತು ಹಿಂತಿರುಗಿರುವರು! ಏನು ಹೇಳಿದೆ ಪ್ರಹರಿ? ಯಾರು ಸೋತು ಬಂದವರು ?

**ಪ್ರಹರೀ**-ಮಹಾರಾಜರು.

**ಮಹಾಮಾಯಾ**-ಏನು? ಮಹಾರಾಜ ಯಶೋವಂತ ಸಿಂಹರು ಸೋತು ಹಿಂದಿರುಗುವರೆ! ಎಂಥ ಸಮಾಚಾರವಿದು ಪ್ರಹರಿ ? ಯೋಧಪುರದ ಮಹಾರಾಜರು, ನನ್ನ ಸ್ವಾಮಿಯು ಯುದ್ಧದಲ್ಲಿ ಸೋತು ಹಿಂದಿರುಗುವರೆ ? ರಾಜಪೂತರ

ಶೌರ್ಯವು ಇಷ್ಟೊಂದು ದುರ್ಗತಿಗಿಳಿಯಿತೆ? ಅಸಂಭವ! ಕ್ಷತ್ರಿಯ ವೀರನು ಯುದ್ಧದಲ್ಲಿ ಪರಾಜಿತನಾಗಿ ಹಿಂದಿರುಗುವುದಿಲ್ಲ. ಮಹಾರಾಜ ಯಶೋವಂತ ಸಿಂಹರು ಕ್ಷಾತ್ರಕುಲ ಚೂಡಾಮಣಿ! ಯುದ್ಧದಲ್ಲಿ ಪರಾಜಯವಾಗಿರಬಹುದು. ಹಾಗಿದ್ದಲ್ಲಿ ನನ್ನ ಸ್ವಾಮಿಯು ಯುದ್ಧಕ್ಷೇತ್ರದಲ್ಲಿ ಹತನಾಗಿ ಬಿದ್ದಿರುವನು. ಮಹಾರಾಜ ಯಶೋವಂತ ಸಿಂಹರಾವಾಗಲೂ ರಣದಲ್ಲಿ ಸೋತು ಹಿಂದಿರುಗುವರಲ್ಲ. ಈಗ ಬಂದಿರುವವರು ಮಹಾರಾಜ ಯಶೋವಂತ ಸಿಂಹರಲ್ಲ. ಅವರ ರೂಪವನ್ನು ಧರಿಸಿರುವ ಯಾವನೋ ಒಬ್ಬ ಛದ್ಮವೇಷಿಯು! ಅವನನ್ನು ದುರ್ಗದೊಳಗೆ ಬಿಡಲಾಗದು. ದುರ್ಗದ್ವಾರವು ಬಂಧಿಸಲ್ಪಡಲಿ— ಹಾಡಿ; ಚಾರಣ ಬಾಲಕಿಯರೆ.

(ಚಾರಣ ಬಾಲಿಕೆಯರು ಹಾಡುವರು.)

## ಐದನೆಯ ನೋಟ.

ಸ್ಥಾನ—ಅಲಹಾಬಾದಿನಲ್ಲಿ ಸುಲೇಮಾನನ ಶಿಬಿರ. ಕಾಲ—ಮುಂಜಾವು.

(ಜಯಸಿಂಹ ಮತ್ತು ದಿಲೀರ್‌ಖಾನ್.)

**ದಿಲೀರ್ ಖಾನ್**-ಅವರಂಗಜೇಬನಿಗೆ ಕಳೆದ ಯುದ್ಧದಲ್ಲೂ ಜಯಲಾಭ! ಕೇಳಿದಿರಾ ಮಹಾರಾಜ್.

**ಜಯಸಿಂಹ**-ನನಗದು ಮೊದಲೇ ತಿಳಿದಿತ್ತು.

**ದಿಲೀರ್ ಖಾನ್**-ಷಯಸ್ತಾಖಾನನು ದ್ರೋಹ ಮಾಡಿದನಂತೆ; ಆಗ್ರದ ಸಮೀಪದಲ್ಲಿ ಯುದ್ಧವಾಗಿ ದಾರನು ಸೋತು ಹರಿದ್ವಾರದ ಕಡೆ ಓಡಿಹೋದನಂತೆ; ಸಂಗಡ ನೂರು ಜನ ಸೈನಿಕರು, ೩೦ ಲಕ್ಷ ಸ್ವರ್ಣ ಮುದ್ರೆ!

**ಜಯಸಿಂಹ**-ಅವನು ಓಡಿಹೋಗಲೇ ಬೇಕಾಗಿತ್ತು. ನನಗದು ಮೊದಲೇ ತಿಳಿದಿತ್ತು.

**ದಿಲೀರ್ ಖಾನ್**-ನಿಮಗೆಲ್ಲಾ ಗೊತ್ತು. ದಾರನು ಓಡಿಹೋಗುವಾಗ ಒಳ್ಳೆ ಗಂಟನ್ನು ತೆಗೆದುಕೊಂಡು ಹೋದನಲ್ಲವೆ? ಅಲ್ಲದೆ ಹೇಳಿಕೊಳ್ಳುತ್ತಿರುವರು:—ವೃದ್ಧ ಸಮ್ರಾಟನು ೭೦ ಕುದುರೇ ಹೇರು ಸ್ವರ್ಣಮುದ್ರೆಗಳನ್ನು ದಾರನ ಫಲವಾಗಿ ಕಳುಹಿಸಿದ್ದನಂತೆ—ದಾರಿಯಲ್ಲದನ್ನು ಝಾಠರು ಡಕಾಯತಿಮಾಡಿ ತೆಗೆದುಕೊಂಡು ಹೋದರಂತೆ.

**ಜಯಸಿಂಹ**-ಅವನು ದುರಾದೃಷ್ಟವಂತ—ಅದು ನನಗೆ ಮೊದಲೇ ಗೊತ್ತು.

**ದಿಲೀರ್ ಖಾನ್**-ಔರಂಗಜೀಬನೂ ಮುರಾದನು ವಿಜಯ ಗರ್ವದಿಂದ ಆಗ್ರಾವನ್ನು ಪ್ರವೇಶ ಮಾಡಿದರಂತೆ—ಈಗ ಫಲತಃ ಔರಂಗಜೀಬನೇ ಸಮ್ರಾಟನು.

**ಜಯಸಿಂಹ**-ಅದೆಲ್ಲ ನನಗೆ ಮೊದಲೇ ಗೊತ್ತು.

**ದಿಲೀರ್ ಖಾನ್**-ಔರಂಗಜೀಬನು ನನಗೆ ಪತ್ರವನ್ನು ಬರೆದಿರುವನು: ನಾನು ಸೈನ್ಯ ಸಮೇತನಾಗಿ ಸುಲೇಮಾನನನ್ನು ಪರಿತ್ಯಾಗ ಮಾಡಿದರೆ ನಿನಗೆ ದೊಡ್ಡ ಪುರಸ್ಕಾರವನ್ನು ಕೊಡುವೆನೆಂದು. ನಿನಗೂ ಬರೆದಿರುವಂತೆ ತೋರುತ್ತೆ. ಅಲ್ಲವೆ ಮಹಾರಾಜ್ ?

**ಜಯಸಿಂಹ**-ಹೌದು.

**ದಿಲೀರ್ ಖಾನ್**-ಯುದ್ಧದ ಭವಿಷ್ಯತ್ತದಲ್ಲಿ ತಮ್ಮ ಅಭಿಪ್ರಾಯವೇನು?

**ಜಯಸಿಂಹ**-ನಾನಿಂದು ಒಬ್ಬ ಜ್ಯೋತಿಷ್ಕನಿಂದ ಯುದ್ಧದ ಫಲಾಫಲಗಳನ್ನು ನಿರ್ಣಯ ಮಾಡಿಸಿದೆನು. ಜ್ಯೋತಿಷ್ಕನು ಹೇಳುವುದು: ಭಾರತ ವರ್ಷದ ಭಾಗ್ಯಾಕಾಶದಲ್ಲಿ ಈಗ ಔರಂಗಜೇಬನ ನಕ್ಷತ್ರಕ್ಕೆ ಅಭ್ಯುದಯ, ದಾನನ ನಕ್ಷತ್ರಕ್ಕೆ ಪತನ ಎಂದು.

**ದಿಲೀರ್ ಖಾನ್**-ಹಾಗಾದರೆ ಈಗ ನಮ್ಮ ಕರ್ತವ್ಯವೇನು ಮಹಾರಾಜ್ ?

**ಜಯಸಿಂಹ**-ನಾನು ಏನು ಮಾಡುವೆನೋ ಅದನ್ನು ನೋಡುತ್ತಿರು.

**ದಿಲೀರ್ ಖಾನ್**-ಒಳ್ಳೇದು. ಈ ವಿಷಯಗಳಲ್ಲಿ ನನ್ನ ಬುದ್ಧಿಗೇನೂ ತೋರುವುದಿಲ್ಲ. ಆದರೊಂದು ಮಾತು.

**ಜಯಸಿಂಹ**-ಸುಮ್ಮನಿರು, ಸುಲೇಮಾನನು ಬರುತ್ತಿರುವನು.

(ಸುಲೇಮಾನನ ಪ್ರವೇಶ )

**ಜಯಸಿಂಹ ಮತ್ತು ದಿಲೀರ್ ಖಾನ್**-ಒಂದೆದಗಿ ಷಹಜಾದಾ.

**ಸುಲೇಮಾನ್**-ಮಹಾರಾಜ್, ತಂದೆಯು ಸೋತು ಓಡಿಹೋದನು. ಇದೋ ಸಮ್ರಾಟನ ಪತ್ರ-(ಪತ್ರವನ್ನು ಕೊಡುವನು.)

**ಜಯಸಿಂಹ**-(ಓದಿ) ಹೌದು, ಕುಮಾರ.

**ಸುಲೇಮಾನ್**-ತಂದೆಯ ಸಹಾಯಾರ್ಥವಾಗಿ ವಿಳಂಬದೊಡನೆ ಸೈನ್ಯವನ್ನು ತೆಗೆದು ಕೊಂಡು ಹೋಗುವಂತೆ ಸಮ್ರಾಟನು ಬರೆದಿರುವನು. ನಾನೀಕ್ಷಣವೇ ಹೋಗಬೇಕೆಂದಿರುವೆನು. ಶಿಬಿರವನ್ನೆತ್ತುವಂತೆ ಸೈನ್ಯಕ್ಕೆ ಆಜ್ಞೆ ಮಾಡಿರಿ.

**ಜಯಸಿಂಹ**-ನನ್ನ ವಿವೇಚನೆಯಲ್ಲಿ ಕುಮಾರನು ಸರಿಯಾದ ಸಮಾಚಾರವು ಬರುವವರಿಗೂ ತಡೆಯುವುದು ಒಳ್ಳೆಯದು. ಏನು ಹೇಳುವಿರಿ, ಖಾನ್ ಸಾಹೇಬರೇ ?

**ದಿಲೀರ್ ಖಾನ್**-ನನ್ನ ಅಭಿಪ್ರಾಯವೂ ಅದೇ.

**ಸುಲೇಮಾನ್**-ಇದಕ್ಕಿಂತಲೂ ಸರಿಯಾದ ಸಮಾಚಾರವು ಹೇಗೆ ಸಾಧ್ಯ? ಸ್ವಯಂ ಸಮ್ರಾಟನ ಹಸ್ತಾಕ್ಷರ!

**ಜಯಸಿಂಹ**-ಇದರಲ್ಲೇನೋ ಜಾಲವಿದೆಯೆಂದು ನನ್ನ ನಂಬುಗೆ. ಅಲ್ಲದೆ ಸಮ್ರಾಟನು ವೃದ್ಧ; ಆತನ ಆಜ್ಞೆಯು ಆಜ್ಞೆಯಲ್ಲ. ನಿಮ್ಮ ತಂದೆಯ ಆಜ್ಞೆಯು ಹೊರತಾಗಿ ಇಲ್ಲಿಂದ ಒಂದು ಹೆಜ್ಜೆಯನ್ನು ಮುಂದಿಡಲಾರೆವು. ಏನು ಹೇಳುವಿರಿ ದಿಲೀರ್ ಖಾನ್ ?

**ದಿಲೀರ್ ಖಾನ್**-ಅದು ಸರಿಯಾದ ಮಾತು.

**ಸುಲೇಮಾನ್**-ತಂದೆಯು ಓಡಿಹೋಗಿರುವನು, ಆತನು ಆಜ್ಞೆ ಮಾಡುವ ಬಗೆ ಹೇಗೆ ?

**ಜಯಸಿಂಹ**-ಹಾಗಾದರೆ ನಾವು ಪ್ರಕೃತದಲ್ಲಿ ನಿಮ್ಮ ತಂದೆಯು ಸ್ಥಾನದಲ್ಲಿರುವ ಔರಂಗಜೇಬನ ಆಜ್ಞೆಯ ಸಲುವಾಗಿ ನಿರೀಕ್ಷಿಸಬೇಕಾಗುವದು.

**ಸುಲೇಮಾನ್**-ಏನು ! ಔರಂಗಜೇಬನ ಆಜ್ಞೆಯ ಸಲುವಾಗಿ, ನಮ್ಮ ತಂದೆಯ ಶತ್ರುವಿನ ಆಜ್ಞೆಯ ಸಲವಾಗಿ......ನಾ......ನು .....ನಿರೀಕ್ಷಣ ಮಾಡಬೇಕೆ?

**ಜಯಸಿಂಹ**-ಕುಮಾರನು ಮಾಡದೇ ಹೋದರೂ ನಾವು ಅಗತ್ಯವಾಗಿ ಮಾಡಲೇ ಬೇಕು. ಏನು ಹೇಳುವೆ ದಿಲೀರ್ ಖಾನ್ ?

**ದಿಲೀರ್ ಖಾನ್**-ಮಾಡಲೇಬೇಕು.

**ಸುಲೇಮಾನ್**-ಜಯಸಿಂಹ, ದಿಲೀರ್ ಖಾನ್, ನೀವಿಬ್ಬರೂ ಸೇರಿ ಮುಸಲತ್ತು ಮಾಡಿರುವಿರೊ ?

**ಜಯಸಿಂಹ**-ನಮ್ಮ ದೋಷವೇನು ? ಸರಿಯಾದ ಆಜ್ಞೆಯಿಲ್ಲದೆ ನಾವೇನು ಮಾಡಲಾಗುವುದು ? ಯುವರಾಜ ದಾರನ ಸಹಾಯಾರ್ಥವಾಗಿ ಲಾಹೋರಿಗೆ ಹೋಗಲು ಸರಿಯಾದ ಆಜ್ಞೆಯಿನ್ನೂ ಬಂದಿಲ್ಲ.

**ಸುಲೇಮಾನ್**-ನಾನು ಆಜ್ಞೆ ಮಾಡುವೆನು.

**ಜಯ ಸಿಂಹ**-ನಿನ್ನ ಆಜ್ಞೆಯನ್ನು ಹೊಂದಿದೆ ಮಾತ್ರಕ್ಕೆ ನಿಮ್ಮ ತಂದೆಯ ಆಜ್ಞೆಯನ್ನು ಅವಹೇಳನ ಮಾಡಲಾಗುವುದೆ ? ಅದು ಸಾಧ್ಯವೇ ಖಾನ್‌ಸಾಹೇಬ ?

**ದಿಲೀರ್‌ಖಾನ್**-ಎಂದಿಗೂ ಇಲ್ಲ.

**ಸುಲೇಮಾನ್**-ಕೇಳಿದೆನು. ನೀವೇನೋ ದ್ರೋಹವನ್ನು ಚಿಂತಿಸುತ್ತಿರುವಿರಿ. ಒಳ್ಳೇದು, ನಾನೇ ಸೈನ್ಯಕ್ಕೆ ಆಜ್ಞೆಮಾಡುವೆನು. (ಸುಲೇಮಾನನು ಹೋಗುವನು.)

**ದಿಲೀರ್‌ಖಾನ್**-ಈಗೇನು ಮಾಡುವಿರಿ ಮಹಾರಾಜ್ ?

**ಜಯ ಸಿಂಹ**-ಭಯವೇನು ಇಲ್ಲ ಖಾನ್‌ಸಾಹೇಬ, ನಾನು ಸೈನ್ಯವೆಲ್ಲವನ್ನು ವಶಮಾಡಿಕೊಂಡಿರುವೆನು.

**ದಿಲೀರ್‌ಖಾನ್**-ನಿಮ್ಮಂತ ವಿಚಕ್ಷಣ ಕರ್ಮಠ ವ್ಯಕ್ತಿಯನ್ನು ನಾನೆಲ್ಲಿಯೂ, ಯಾವಾಗಲೂ ನೋಡಿಲ್ಲ. ಆದರೀ ಕಾರ್ಯವು ಯುಕ್ತವಾದುದೆ ?

**ಜಯ ಸಿಂಹ**-ಸುಮ್ಮನಿರು. ಈಗೆನ್ಮ ಕೆಲಸವು ಸುಮ್ಮನೆ ನಿಂತು ನೋಡುವುದೆ; ಇನ್ನೂ ಔರಂಗಜೀಬನ ಪಕ್ಷವನ್ನು ಒಂದೇ ಬಾರಿಗೆ ವಹಿಸಲಾಗದು. ಏಕೆಂದರೆ .. (ಸುಲೇಮಾನನು ಮತ್ತೆ ಬಂದನು.)

**ಸುಲೇಮಾನ್**-ಸೈನ್ಯದವರೂ ಈ ಮುಸಲತ್ತಿನಲ್ಲಿ ಸೇರಿರುವರು. ನಿಮ್ಮ ಆಜ್ಞೆಯಿಲ್ಲದೆ ಒಂದು ಹೆಜ್ಜೆಯನ್ನು ಮುಂದಿಡುವುದಿಲ್ಲವಂತೆ.

**ಜಯ ಸಿಂಹ**-ಅದು ಸಂಭವವೇ.

**ಸುಲೇಮಾನ್**-ಮಹಾರಾಜ, ಸಮ್ರಾಟನು ತಂದೆಯ ಸಹಾಯಕ್ಕೆ ಹೋಗುವಂತೆ ಪತ್ರವನ್ನು ಬರೆದಿರುವನು. ತಂದೆಯ ಬಳಿಗೆ ಹೋಗುವ ಸಲುವಾಗಿ ನನ್ನ ಪ್ರಾಣಗಳೂ ಬಹಳ ವ್ಯಾಕುಲಗೊಂಡಿರುವುವು ನಾನು ನಿಮ್ಮನ್ನು ಬೇಡಿಕೊಳ್ಳುವೆನು: ದಿಲೀರ್‌ಖಾನ್, ದಾರನ ಪುತ್ರನಾದ ನಾನು ನಿಮ್ಮೆದುರಿಗೆ ಕೈಜೋಡಿಸಿ ಈ ಭಿಕ್ಷೆಯನ್ನು ಬೇಡುವೆನು. ನಿಮಗೆ ಹೋಗುವುದಕ್ಕೆ ಇಷ್ಟವಿಲ್ಲದಿದ್ದರೆ ಹೋಗಲಿ, ಸೈನ್ಯಕ್ಕೆ ಆಜ್ಞೆಯನ್ನು ಮಾಡಿ; ನಾನದನ್ನು ಕರೆದುಕೊಂಡು ಲಾಹೋರಿಗೆ ತಂದೆಯ ಬಳಿಗೆ ಹೋಗುವೆನು. ಈ ರಾಜ್ಯಾಪಹಾರಿಯಾದ ಔರಂಗಜೀಬನ ಶೌರ್ಯವೆಷ್ಟೆಂಬುದನ್ನು ನೋಡುವೆನು. ಈ ದಿಗ್ವಿಜಯೀ ಸೈನ್ಯವನ್ನು ಕರೆದುಕೊಂಡು ಒಮ್ಮೆ ಕರ್ಮಕ್ಷೇತ್ರದಲ್ಲಿ ಇಳಿಯಲು ಅವಕಾಶ ಕೊಡಿ. ಮಹಾರಾಜ್ ದಿಲೀರ್‌ಖಾನ್, ಆಜ್ಞೆಯನ್ನು ಕೊಡಿರಿ. ಈಯೊಂದು

ಉಪಕಾರದ ಸಲುವಾಗಿ ನಾನು ನಿಮ್ಮ ಬಳಿಯಲ್ಲಿ ಆಜನ್ಮವೂ ಋಣಿಯಾಗಿರುವೆನು.

**ಜಯಸಿಂಹ**-ಸಮ್ರಾಟನ ಆಜ್ಞೆಯ ಹೊರತು ನಾವಿಲ್ಲಿಂದ ಒಂದು ಹೆಜ್ಜೆಯನ್ನೂ ಮುಂದಿಡಲಾರೆವು.

**ಸುಲೇಮಾನ್**-ದಿಲೀರ್‌ಖಾನ್, ನಾನು ಮೊಣಕಾಲೂರಿ-ಯುವರಾಜ ದಾರನ ಪುತ್ರನಾದ ನಾನು-ಮೊಣಕಾಲೂರಿ ಈ ಬಿಕ್ಷೆಯನ್ನು ಬೇಡುವೆನು. (ಹಾಗೆಯೇ ಮಾಡುವೆನು.)

**ದಿಲೀರ್‌ಖಾನ್**-ಏಳು ಷಹಜಾದಾ, ಮಹಾರಾಜನು ಆಜ್ಞೆಯನ್ನು ಕೊಡದೆ ಹೋದರೆ, ನಾನು ಕೊಡುವೆನು. ನಾನು ದಾರನ ಉಪ್ಪುತಿಂದಿರುವೆನು. ಮುಸಲ್ಮಾನ್ ಜಾತಿಯು ಸ್ವಾಮಿ ದ್ರೋಹದ ಜಾತಿಯಲ್ಲ. ಬಾ ಷಹಜಾದಾ, ನಾನೆನ್ನ ಅಧೀನಸ್ಥವಾದ ಸೈನ್ಯವೆಲ್ಲವನ್ನು ತೆಗೆದುಕೊಂಡು ನಿನ್ನ ಸಂಗಡ ಲಾಹೋರಿಗೆ ಬರುವೆನು, ಮತ್ತು ಶಪಥ ಮಾಡುವೆನು. ಎಲ್ಲಿಯವರೆಗೆ ಷಹಜಾದನನ್ನು ತ್ಯಜಿಸುವುದಿಲ್ಲವೆಂದು ನಾನು ಯುವರಾಜ ದಾರನ ಮಗನ ಸಲುವಾಗಿ ಪ್ರಯೋಜನವಿದ್ದಲ್ಲಿ ಪ್ರಾಣಗಳನ್ನೂ ಕೊಡಬಲ್ಲನು. ಬಾ ಷಹಜಾದಾ, ನಾನೀಕ್ಷಣದಲ್ಲೇ ಆಜ್ಞೆಮಾಡುವೆನು. (ಸುಲೇಮಾನ್ ಮತ್ತು ದಿಲೀರ್‌ಖಾ಼ ಹೋದರು.)

**ಜಯಸಿಂಹ**-ಸರಿಹೋಯಿತು. ಒಮ್ಮೆಗೆ ನೀರಿನಲ್ಲಿ ಜಾರಿ ಬಿದ್ದೆಯಲ್ಲವೆ? ಖಾನಸಾಹೇಬಾ. ನಿನ್ನ ಮಂಗಳವನ್ನು ನೀನು ತಿಳಿದುಕೊಳ್ಳಲಾರದೆ ಹೋದೆ. ನಾನೇನು ಮಾಡಲಿ? ನನ್ನ ಅಧೀನಸ್ಥವಾದ ಸೈನ್ಯವನ್ನು ತೆಗೆದುಕೊಂಡು ಆಗ್ರಾಭಿಮುಖನಾಗಿ ಪ್ರಯಾಣ ಮಾಡುವೆನು. (ಹೋದನು.)

---

## ಆರನೆಯ ನೋಟ.

ಸ್ಥಾನ—ಆಗ್ರಾದ ದುರ್ಗಪ್ರಸಾದ; ಕಾಲ—ಮುಂಜಾವು; ಷಾಜಹಾನ್ ಮತ್ತು ಜಹನಾರಾ.

**ಷಾಜಹಾನ್**-ಜಹನಾರಾ, ನಾನು ಆತುರದಿಂದ ಅವರಂಗಜೀಬನನ್ನು ಎದುರುನೋಡುತ್ತಿರುವೆನು. ಅವನು ನನ್ನ ಪುತ್ರ; ಜಯಶಾಲಿಯಾದ ಉದ್ಧತನಾದ ನನ್ನ ಪುತ್ರ; ನನ್ನ ಲಜ್ಜೆ ಮತ್ತು ನನ್ನ ಗೌರವಸ್ವರೂಪನು.

**ಜಹನಾರಾ**-ಗೌರವವೇ ತಂದೆಯೇ? ಎಂತ ಧೂರ್ತ, ಎಂತ ಮಿಥ್ಯಾವಾದಿಯವನು! ಅಂದು ನಾನವನ ಶಿಬಿರಕ್ಕೆ ಹೋಗಿದ್ದಾಗ ನಿನ್ನಲ್ಲಿ ಎಷ್ಟೊಂದು ಭಕ್ತಿಯನ್ನು ತೋರಿದನು! ತಾನು ಮಹಾ ಪಾಪಿಷ್ಠನೆಂದೂ, ದೊಡ್ಡದೊಂದು ಪಾಪವನ್ನು ಮಾಡಿದೆನೆಂದೂ ಹೇಳಿಕೊಂಡನು; ಕಣ್ಣುಗಳಲ್ಲಿ ಫಳಫಳ ನೀರು ಸುರಿಸಿದನು! ದಾರನ ಅನುಯಾಯಿಗಳಾದ ಸರದಾರರ ಹೆಸರನ್ನು ಹೇಳಿದರೆ ತಂದೆಯ ಆಜ್ಞೆಯಂತೆ ಮುರಾದನ ಪಕ್ಷವನ್ನು ಬಿಟ್ಟು ದಾರನಕಡೆ ಸೇರುವೆನೆಂದು ನಂಬಿಸಿದನು. ನಾನು ಸರಳಹೃದಯಳಾಗಿ ಅವನ ಮಾತುಗಳನ್ನು ನಂಬಿ, ಅಭಾಗ್ಯ ದಾರನ ಹಿತೈಷಿಗಳ ಹೆಸರನ್ನು ಹೇಳಿದೆನು. ಈಗವರೆಲ್ಲರನ್ನು ಸೆರೆಹಿಡಿದಿರುವನು. ನಾನು ದಾರನಿಗೆ ಪತ್ರವನ್ನು ಬರೆದೆನು. ಅದನ್ನು ಮಧ್ಯದಾರಿಯಲ್ಲಿ ಅಪಹರಿಸಿರುವನು. ಎಷ್ಟೊಂದುದ್ರೋಹ! ಎಷ್ಟೊಂದು ಕಪಟ!!

**ಷಾಜಹಾನ್**-ಇಲ್ಲ ಜಹನಾರಾ, ಅವನು ಹಾಗೆಮಾಡುವವನಲ್ಲ; ನಾನಿದನ್ನು ನಂಬಲಾರೆನು.

**ಜಹನಾರಾ**--ಅವನೊಮ್ಮೆ ಈ ದುರ್ಗದೊಳಗೆ ಬರಲಿ, ಕೌಶಲದಿಂದ ಸೆರೆ ಹಿಡಿಯುವೆನು. ಈ ಮಂದಿರದಲ್ಲಿ ನೂರುಜನ ಸಶಸ್ತ್ರರಾದ ಸೈನಿಕರನ್ನು ಬಚ್ಚಿಟ್ಟಿರುವೆನು. ಆ ಭಂಡ ಅವರಂಗಜೇಬನನ್ನು ನಿನ್ನ ಕಣ್ಣೆದುರಿಗೆ ಸೆರೆಹಿಡಿಯುವೆನು, ನೋಡು.

**ಷಾಜಹಾನ್**--ಇದೇನು ಜಹನಾರಾ, ಅವನು ನನ್ನ ಪುತ್ರ! ನಿನ್ನ ಸೋದರ! ಇದು ಯುಕ್ತವಲ್ಲ ಜಹನಾರಾ. ಅವನೆಂತವನೇ ಆಗಲಿ, ನಾನು ಸ್ನೇಹದಿಂದ ವಶಪಡಿಸಿಕೊಳ್ಳುವೆನು. ಹಾಗವನು ವಶನಾಗದೇ ಹೋದರೆ ಅವನ ತಂದೆಯಾದ ನಾನು ಅವನ ಸಮ್ಮುಖದಲ್ಲಿ ಮೊಣಕಾಲೂರಿ ಪ್ರಾಣಭಿಕ್ಷೆಯನ್ನು ಬೇಡುವೆನು. "ನಮಗೆ ಮತ್ತೇನೂ ಬೇಡ, ನಮ್ಮನ್ನು ಜೀವದಿಂದುಳಿಸು, ಒಬ್ಬರನ್ನೊಬ್ಬರು ಪ್ರೀತಿಸುವ ಅವಕಾಶವನ್ನು ಕೊಡು" ಎಂದು ಕೇಳಿಕೊಳ್ಳುವೆನು.

**ಜಹನಾರಾ**--ತಂದೆಯೇ, ನಿನ್ನನ್ನಿಂತಹ ಅಪಮಾನದಿಂದ ರಕ್ಷಿಸುವೆನು.

**ಷಾಜಹಾನ್**--ಅಪಮಾನವಲ್ಲ, ಪುತ್ರಿ. ತಂದೆಯು ಮಗನನ್ನು ಬೇಡುವದು ಅಪಮಾನವೆ?

[ಮಹಮ್ಮದನ ಪ್ರವೇಶ.]

**ಷಾಜಹಾನ್**--ಬಾ ಮಹಮುದ್, ಎಲ್ಲಿ ನಿಮ್ಮ ತಂದೆ?

**ಮುಹಮುದ್**--ನನಗೆ ತಿಳಿಯದು ತಾತ.

**ಷಾಜಹಾನ್**--ಅದೇನು! ಇಲ್ಲಿಗೆ ಬರುವ ನಿಮಿತ್ತ ಅಶ್ವಾರೂಢನಾದನೆಂದು ಯಾರೋ ಹೇಳಿದರಲ್ಲ.

**ಮುಹಮುದ್**--ಯಾರು ಹೇಳಿದರು? ತಂದೆಯು ಅಶ್ವಾರೂಢನಾಗಿ ಅಕ್ಬರನ ಮಸಜೀದಿಗೆ ನಮಾಜುಮಾಡಲು ಹೋದನು. ನನಗೆ ತಿಳಿದಮಟ್ಟಿಗೆ ಆತನಿಗೆ ಇಲ್ಲಿ ಬರುವ ಅಭಿಪ್ರಾಯವು ಕೂಡಾ ಇರಲಿಲ್ಲ.

**ಜಹನಾರಾ**-ಹಾಗಾದರೆ ನೀನೇಕೆ ಇಲ್ಲಿಗೆ ಬಂದೆ, ಮುಹಮ್ಮದ್ ?

**ಮುಹಮುದ್**-ಈ ದುರ್ಗಪ್ರಾಸಾದವನ್ನು ಆಳುವುದಕ್ಕೆ.

**ಷಾಜಹಾನ್**--ಇದೇನು, ಪರಿಹಾಸ ಮಾಡುವೆಯೋ, ಮುಹಮುದ್?

**ಮುಹಮುದ್**-ಇಲ್ಲ ತಾತ, ನಿಜವಾದ ಮಾತು.

**ಜಹನಾರಾ**--ಹಾಗಾದರೆ ನಾನು ನಿನ್ನನ್ನೇ ಖೈದು ಮಾಡುವೆನು.

[ಸಿಳ್ಳು ಹಾಕುವಳು; ಐದುಜನ ಸಶಸ್ತ್ರಪ್ರಹರಿಗಳು ಪ್ರವೇಶಿಸುವರು]

**ಜಹನಾರಾ**--ನಿನ್ನ ಅಸ್ತ್ರಗಳನ್ನು ಕೊಡು, ಮುಹಮುದ್.

**ಮುಹಮುದ್**-ಅದೇಕೆ?

**ಜಹನಾರಾ**-ನೀನೆನ್ನ ಬಂದಿ. ಪ್ರಹರಿಗಳೇ, ಅಸ್ತ್ರಗಳನ್ನು ಕಿತ್ತುಕೊಳ್ಳಿ.

**ಮುಹಮುದ್**--ಹಾಗಾದರೆ ನಾನು ನನ್ನ ಪ್ರಹರಿಗಳನ್ನು ಕರೆಯುವನು.

[ಸಿಳ್ಳು ಹಾಕುವನು; ಹತ್ತುಜನ ಪ್ರಹರಿಗಳು ಪ್ರವೇಶಿಸುವರು.]

**ಮುಹಮುದ್**-ನನ್ನ ನೂರುಜನ ಸೈನಿಕರನ್ನು ಬರುವಂತೆ ಹೇಳು.

**ಜಹನಾರಾ**--ನೂರುಜನ ಸೈನಿಕರು! ಅವರು ದುರ್ಗದೊಳಗೆ ಪ್ರವೇಶಿಸಲು ಯಾರು ಅನುಜ್ಞೆಯನ್ನು ಕೊಟ್ಟರು ?

**ಷಾಜಹಾನ್**--ನಾನು ಜಹನಾರಾ, ಎಲ್ಲಾ ದೋಷವು ನನ್ನದು. ನಾನು ಸ್ನೇಹ ಪರವಶನಾಗಿ ಅವರಂಗಜೇಬನು ಪತ್ರದಲ್ಲಿ ಏನೇನನ್ನು ಕೇಳಿಕೊಂಡನೋ, ಎಲ್ಲಕ್ಕೂ ಸಮ್ಮತಿಸಿದೆನು. ಹಾ! ಹೀಗಾಗುವುದೆಂದು ಸ್ವಪ್ನದಲ್ಲಿಯೂ ಭಾವಿಸಿರಲಿಲ್ಲ, ಮುಹಮುದ್.

**ಮುಹಮುದ್**-ತಾತ.........

**ಷಾಜಹಾನ್**-ಹಾಗಾದರೆ ಈಗ ತಿಳಿಯಬೇಕಾದುದೇನು ಮಹಮುದ್ ? ನಾನು ನಿನ್ನ ಬಂದಿ ?

**ಮಹಮುದ್**--ಬಂದಿಯಲ್ಲ ತಾತಾ. ಈ ಮಹಲಿನಿಂದ ಹೊರಗೆ ಹೋಗುವ ಅಪ್ಪಣೆ ಮಾತ್ರ ಇಲ್ಲ. ಅಷ್ಟೇ.

**ಷಾಜಹಾನ್**--ನನಗೇನೂ ತಿಳಿಯಲೊಲ್ಲದು. ಇದೇನು ಸತ್ಯವಾದ ಘಟನೆಯೋ, ಇಲ್ಲವೆ ಕನಸೋ? ನಾನು ಯಾರು, ಸಮ್ರಾಟ್ ಷಾಜಹಾನನೇ? ನೀನು ನನ್ನ ಪೌತ್ರ, ನನ್ನ ಸಮ್ಮುಖದಲ್ಲಿ ಕತ್ತಿಯನ್ನು ಹಿಡಿದು ನಿಂತಿರುವೆಯಾ? ಇದೇನು ಒಂದು ದಿನದಲ್ಲಿ ಇಹಸಂಸಾರವು ಇನ್ನೊಂದು ತಳಕೆಳಗಾಗಿ ಹೋಯಿತೇ? ಯಾರ ರೋಷಕಷಾಯಿತ ದೃಷ್ಟಿಯನ್ನು ನೋಡಿದ ಮಾತ್ರಕ್ಕೆ ಅವರಂಗಜೀಬನು ಭಯಗ್ರಸ್ತನಾಗಿ ಮುಖವನ್ನು ಮುಚ್ಚಿಕೊಂಡು ಓಡಿಹೋಗುತ್ತಿದ್ದನೋ ಆ ಪಾಷಂಡನ ಮಗನ ಕೈಯಲ್ಲಿ ನಾನು ಬಂದಿಯೇ ! ಜಹನಾರಾ, ಇದೆಂತ ವಿಚಿತ್ರ? ಹೀಗೇ ಬಾ. ಇದೇನು ಪುತ್ರಿ: ನಿನ್ನ ತುಟಿಗಳು ಅಲುಗಾಡುತ್ತಿರುವವು, ಮಾತುಗಳು ಹೊರಡವೇಕೆ? ಕಣ್ಣುಗಳಲ್ಲಿ ಅರ್ಥಹೀನವಾದ ನಿಷ್ಪ್ರಭವಾದ ಈ ಸ್ಥಿರ ಶೂನ್ಯದೃಷ್ಟಿಯೇಕೆ? ಕೆನ್ನೆಗಳೆರಡು ರಕ್ತಹೀನವಾಗಿ ಜಪಾಕುಸುಮದಂತೆ ಬೆಳ್ಳಗಾಗಿರುವವಲ್ಲ ! ಏನಾಯಿತಮ್ಮ ?

**ಜಹನಾರಾ**-ಇಲ್ಲ ಅಪ್ಪ, ನಾನು ಅದನ್ನೇ ಚಿಂತಿಸುತ್ತಿದ್ದೆನು. ಪ್ರಪಂಚದಲ್ಲಿ ಹೀಗೂ ಉಂಟೆ ಎಂದು ಚಿಂತಿಸುತ್ತಿದ್ದೆನು.

**ಷಾಜಹಾನ್**--ಮಹಮುದ್, ನಾನಿಂತ ಕಾಠಿಣ್ಯವನ್ನು, ಇಂತ ಅತ್ಯಾಚಾರವನ್ನು ಈ ರೀತಿ ನಿಸ್ಸಹಾಯಕನಾಗಿ ಸಹಿಸುವೆನೆಂದು ಭಾವಿಸಿದೆಯಾ ? ಸಿಂಹವು ಮುದಿಯಾಯಿತೆಂದು ಧೈರ್ಯದಿಂದ ಪದಾಘಾತ ಮಾಡುವೆನೆಂದು ಯೋಚಿಸಿದೆಯಾ? ಕೇಳು ಮಹಮುದ್: ನಾನು ವೃದ್ಧನು—ಆದರೆ ನಾನು ಷಾಜಹಾನನು. ಯಾರಲ್ಲಿ ? ತೆಗೆದುಕೊಂಡುಬನ್ನಿ ನನ್ನ ಖಡ್ಗವನ್ನು. ಏನು? ಯಾರೂ ಇಲ್ಲವೇ ?

**ಮಹಮುದ್**-ತಾತಾ, ನಿಮ್ಮ ದೇಹರಕ್ಷಕರು ದುರ್ಗದಿಂದ ಹೊರಗೆ ಕಳುಹಿಸಲ್ಪಟ್ಟರು

**ಷಾಜಹಾನ್**--ಕಳುಹಿಸಿದವರು ಯಾರು ?

**ಮಹಮುದ್**-(ಹೆಮ್ಮೆಯಿಂದ) ನಾನು.

**ಷಾಜಹಾನ್**-ಯಾರ ಆಜ್ಞೆಯಿಂದ ?

**ಮುಹಮುದ್**-ನಮ್ಮ ತಂದೆಯ ಆಜ್ಞೆಯಿಂದ. ಇನ್ನುಮುಂದೆ ಈ ನೂರು ಜನ ಸೈನಿಕರೇ ಜಹಾಪನಾಯವರ ದೇಹರಕ್ಷಕರ ಕೆಲಸ ಮಾಡುವರು.

**ಷಾಜಹಾನ್**--ಮುಹಮುದ್, ವಿಶ್ವಾಸಘಾತಕ!

**ಮುಹಮುದ್**-ಜಹಾಪನಾ, ನನ್ನನ್ನು ಕ್ಷಮಿಸಬೇಕು. ನಾನು ಕೇವಲ ಪಿತನ ಆಜ್ಞಾಧಾರಕನು.

**ಷಾಜಹಾನ್**-ಔರಂಗಜೀಬ ಇಲ್ಲ. ಈಗ ಅವನೆಲ್ಲಿ, ನಾನೆಲ್ಲಿ? ಆದರೂ ಜಹನಾರಾ, ಇಂದು ನಾನೊಮ್ಮೆ ಈ ದುರ್ಗಪ್ರಸಾದದಿಂದ ಹೊರಗೆ ಹೋಗಬಲ್ಲೆನಾದರೆ, ಒಮ್ಮೆ ನನ್ನ ಸೈನ್ಯದ ಸಮ್ಮುಖದಲ್ಲಿ ನಿಲ್ಲಬಲ್ಲೆನಾದರೆ, ಈಗಲೂ—ಈ ಕ್ಷಣದಲ್ಲೂ ವೃದ್ಧ ಷಾಜಹಾನನ ಜಯಧ್ವನಿಯನ್ನು ಕೇಳಿ ಔರಂಗಜೀಬನು ಮಣ್ಣಿನಲ್ಲಿ ಉರುಳಾಡಬೇಕಾದೀತು. ಆದರೆ ಹೋಗುವ ಬಗೆ ಹೇಗೆ, ಹೋಗುವ ಬಗೆ ಹೇಗೆ? ಮುಹಮುದ್ ನನ್ನನ್ನೊಂದು ಬಾರಿ ಮುಕ್ತನನ್ನಾಗಿ ಮಾಡು—ಒಂದು ಸಲಮಾತ್ರ, ಒಂದೇವೊಂದುಸಲ ಮಾತ್ರ. (ದೈನ್ಯದಿಂದ ಪ್ರಾರ್ಥಿಸುವನು.)

**ಮುಹಮುದ್**--ನಾನು ದೋಷಿಯಲ್ಲ; ಕೇವಲ ತಂದೆಯ ಆಜ್ಞಾವಹನು.

**ಷಾಜಹಾನ್**-ನಾನು ನಿಮ್ಮ ತಂದೆಯ ತಂದೆಯಲ್ಲವೇ? ನಿಮ್ಮ ತಂದೆಯು ತನ್ನ ತಂದೆಯ ವಿಷಯದಲ್ಲಿ ಇಷ್ಟೊಂದು ಅತ್ಯಾಚಾರವನ್ನು ನಡೆಸಿರುವಾಗ ನೀನು ಹೇಗೆ ತಂದೆಯ ಆಜ್ಞೆಯನ್ನು ಪಾಲಿಸುವೆ? ಮುಹಮುದ್ ಬಾ, ದುರ್ಗದ್ವಾರವನ್ನು ತೆರೆ.

**ಮುಹಮುದ್**-ಕ್ಷಮಿಸಬೇಕು ತಾತ, ನಾನು ನಮ್ಮ ತಂದೆಯ ಆಜ್ಞೆಯನ್ನು ಮೀರಿ ನಡೆಯಲು ಶಕ್ತನಲ್ಲ.

**ಷಾಜಹಾನ್**-ತೆರೆಯುವದಿಲ್ಲವೇ, ತೆರೆಯುವದಿಲ್ಲವೇ? ನೋಡು: ನಾನು ನಿನ್ನ ವೃದ್ಧ ಪಿತಾಮಹನು—ರೋಗಗ್ರಸ್ತನೂ, ಜೀರ್ಣನೂ, ವೃದ್ಧನೂ ಆದ ನಿನ್ನ ಪಿತಾಮಹನು. ಒಂದೇ ಒಂದಾವರ್ತಿ ಮಾತ್ರ ಈ ದುರ್ಗದಿಂದ ಹೊರಗೆ ಹೋಗಲಿಚ್ಛಿಸುವೆನು; ಮತ್ತೆ ಹಿಂತಿರುಗಿ ಬರುವೆನೆಂದು ಈಗಲೇ ಶಪಥವನ್ನೂ ಮಾಡುವೆನು. ತೆರೆಯುವದಿಲ್ಲವೇ, ತೆರೆಯುವದಿಲ್ಲವೇ? (ದೈನ್ಯದೃಷ್ಟಿಯಿಂದ ನೋಡುವನು.) [ನಾಗುವನು.)

**ಮುಹಮುದ್**-ಕ್ಷಮಿಸಬೇಕು ತಾತ, ನನ್ನಿಂದದು ಸಾಧ್ಯವಲ್ಲ. (ಹೊರಡಲು ಸಿದ್ಧ

**ಷಾಜಹಾನ್**--ನಿಲ್ಲು ಮಹಮದ್, (ಸ್ವಲ್ಪಹೊತ್ತು ಚಿಂತೆಮಾಡಿ ರಾಜಮುಕುಟವನ್ನು ತಂದು, ಹಾಸಿಗೆಯ ಮೇಲಿದ್ದ ಖುರಾನನ್ನು ಕೈಗೆ ತೆಗೆದುಕೊಂಡು) ನೋಡು ಮಹಮದ್, ಇದು ನನ್ನ ಮಕುಟ, ಇದು ನನ್ನ ಖುರಾನ್. ಈ ಖುರಾನನ್ನು ಮುಟ್ಟಿ ಶಪಥ ಮಾಡುವೆನು. ಹೊರಗೆ ನೆರೆದಿರುವ ಸಮಸ್ತ ಪ್ರಜರ ಸಮ್ಮುಖದಲ್ಲಿ ಈ ಕಿರೀಟವನ್ನು ನಿನ್ನ ಶಿರವಲ್ಲಿ ಧರಿಸುವೆನು. ಯಾರು ಆಡ್ಡಿಮಾಡುವರೋ, ನೋಡುವ? ಇಂದು ನಾನು ವೃದ್ಧನೂ, ಶೀರ್ಣನೂ, ಪಕ್ಷಗಳನ್ನು ಕಳೆದುಕೊಂಡ ಹಕ್ಕಿಯಂತೆ ಪಂಗುವೂ ಆಗಿರಬಹುದು. ಆದರೂ ಯಾವ ಷಾಜಹಾನನು ಈ ಭಾರತ ವರ್ಷವನ್ನು ಇಷ್ಟೊಂದು ದಿನಗಳು ಅಂಗೈಯಲ್ಲಿಟ್ಟುಕೊಂಡು ಶಾಸನ ಮಾಡಿದನೋ, ಆತನು ತನ್ನ ಸೈನ್ಯದ ಸಮ್ಮುಖದಲ್ಲೊಮ್ಮೆ ಮೂರ್ತಿಮತ್ತಾಗಿ ನಿಲ್ಲಬಲ್ಲನಾದರೆ ಅವರ ಸಂಮಿಳಿತ ಅಗ್ನಿಮಯ ದೃಷ್ಟಿಯಿಂದ ನೂರು ಜನ ಔರಂಗಜೀಬರು ಭಸ್ಮೀಭೂತರಾಗಿ ಹೋಗುವರು. ಮಹಮದ್, ನನ್ನನ್ನು ಬಿಟ್ಟು ಬಿಡು. ನೀನು ಭಾರತ ವರ್ಷದ ಅಧೀಶ್ವರನಾಗುವೆ. ನಾನು ಶಪಥಮಾಡುವೆನು, ಮಹಮದ್; ಶಪಥ ಮಾಡುವೆನು. ಒಮ್ಮೆ ಆ ಕಪಟಿ ಔರಂಗಜೀಬನನ್ನು ನೋಡುವೆನು.

**ಮಹಮದ್** –ಕ್ಷಮಿಸಬೇಕು, ಜಹಪನಾ.

**ಷಾಜಹಾನ್**-ನೋಡು, ಇದು ಮಕ್ಕಳ ಆಟವಲ್ಲ. ನಾನು--ಸ್ವಯಂ ಸಮ್ರಾಟ್ ಷಾಜಹಾನನು ಶಪಥಮಾಡುತ್ತಿರುವನು, ಇದುಉನ್ಮತ್ತನ ವ್ಯರ್ಥಾಲಾಪವಲ್ಲ. ಒಂದುಕಡೆ ನಿಮ್ಮ ತಂದೆಯ ಆಜ್ಞೆ; ಮತ್ತೊಂದು ಕಡೆ ಅಖಂಡ ಭಾರತ ಸಾಮ್ರಾಜ್ಯ! ಯೋಚಿಸಿ ನೋಡು, ಮಹಮದ್!

**ಮಹಮದ್**-ತಾತಾ, ತಂದೆಯ ಆಜ್ಞೆಯನ್ನು ಮೀರಿ ನಡೆಯುವುದು ನನ್ನಿಂದ ಸಾಧ್ಯವಿಲ್ಲ

**ಷಾಜಹಾನ್**-ಒಂದು ಸಾಮ್ರಾಜ್ಯದ ಸಲುವಾಗಿಯೂ ಸಾಧ್ಯವಿಲ್ಲವೇ?

**ಮಹಮದ್**-ಸಮಗ್ರ ಪೃಥುವಿಯ ಸಲುವಾಗಿಯೂ ಸಾಧ್ಯವಿಲ್ಲ.

**ಷಾಜಹಾನ್**-ನೋಡು ಮಹಮದ್, ಚನ್ನಾಗಿ ಯೋಚಿಸಿ ನೋಡು. ಭಾರತ ಸಾಮ್ರಾಜ್ಯ ಪದವಿ!

**ಮಹಮದ್**-ಇನ್ನು ಇಲ್ಲಿ ನಿಂತು ಈ ಮಾತುಗಳನ್ನು ಕೇಳಲಾರೆನು. ಪ್ರಲೋ

ಭವು ಬಹು ದೊಡ್ಡದು; ಹೃದಯವು ಅತಿ ದುರ್ಬಲವು. ಜಹನಾರಾ, ಕ್ಷಮಿಸಬೇಕು. (ಹೋಗುವನು.)

**ಷಾಜಹಾನ್**-ಹೊರಟು ಹೋಗುವನು; ಹೊರಟು ಹೋದನು! ಜಹನಾರಾ, ಏಕೆ ಮಾತನಾಡುವುದಿಲ್ಲ?

**ಜಹನಾರಾ**-ಔರಂಗಜೇಬ, ನಿನಗಿಂತ ಮಗನೆ! ಇವನು ತನ್ನ ತಂದೆಯ ಆಜ್ಞೆಯನ್ನು ಪಾಲನಮಾಡುವ ಸಲುವಾಗಿ ಒಂದು ಸಾಮ್ರಾಜ್ಯವನ್ನು ತ್ಯಜಿಸಲು ಸಿದ್ಧನಿರುವನು. ಮತ್ತು ನೀನು? ನಿನ್ನ ತಂದೆಯನ್ನು ಆಪ್ತೋಂದು ಪ್ರೀತಿಗೆ ಬದಲಾಗಿ ಮೋಸದಿಂದ ಬಂದಿಯಾಗಿ ಮಾಡಿದೆ.

**ಷಾಜಹಾನ್**–ನೀನು ಹೇಳುವುದು ಸತ್ಯ. ಮಗಳೇ, ತಂದೆ ತಾಯಿಗಳು ತಾವು ಉಣ್ಣುವ ಮೊದಲು ಮಕ್ಕಳಿಗೆ ಉಣಿಸುವರು; ತೊಡೆಯ ಮೇಲೆ ಮಲಗಿಸಿಕೊಂಡು ನಿದ್ರೆಮಾಡಿಸುವರು; ಅವರ ಮಿದುನಗೆಯನ್ನು ನೋಡುವಸಲುವಾಗಿ ಪ್ರೇಮದಿಂದ ಮುದ್ದಾಡುವರು. ಆದರವು ಕೃತಘ್ನತೆಯ ಅಂಕುರಗಳೇ! ಸಯ್ತಾನನ ಮಕ್ಕಳೇ ಅವು! ಅರ್ಧಹೊಟ್ಟೆಗೆ ಹಾಕಿ ಅವರನ್ನು ಬೆಳೆಸಬೇಕು; ಸಮಯಾಸಮಯವಿಲ್ಲದೆ ಕೊರಡೆಯಿಂದ ಹೊಡೆಯುತ್ತಿರಬೇಕು; ಆಜೀವವೂ ಕಣ್ಣುಗಳನ್ನು ಕೆಂಪೇರಿಸಿಕೊಂಡು, ನಿರ್ದಯನಾಗಿ ಆಳಬೇಕು; ಹೀಗೆ ಮಾಡಿದರೆ ಮಾತ್ರ ಅವರು ಮಹಮದನಂತೆ ಪಿತೃಭಕ್ತರಾಗುವರೆಂದು ತೋರುವುದು. ಈರೀತಿ ಅವರನ್ನು ಸಾಕುವದರಿಂದ ಯಾವ ತಂದೆಯ ಹೊಟ್ಟೆಯಲ್ಲಿ ಸಂಕಟವಾಗುವುದೋ, ಯಾರು ನೀರವವಾಗಿ ಕಣ್ಣೀರು ಸುರಿಸುವರೋ, ಅವರ ಹೊಟ್ಟೆಯು ಉರಿದುಹೋಗಲಿ! ಅವರ ಕಣ್ಣು ಇಂಗಿಹೋಗಲಿ! ಹಾ! ಜಹನಾರಾ—

**ಜಹನಾರಾ**--ಅಪ್ಪ, ಈ ಕಾರಾಗಾರದ ಒಂದು ಮೂಲೆಯಲ್ಲಿ ಕುಳಿತು ಅಸಹಾಯಕವಾದ ಮಗುವಿನಂತೆ ಅಳುವುದರಿಂದಾಗುವುದೇನು? ಪದಾಹತನಾದ ಕುಂಟನಂತೆ ಕುಳಿತಲ್ಲಿ ಹಲ್ಲುಗಳನ್ನು ಕಡಿಯುತ್ತಾ ವ್ಯರ್ಥ ಅಭಿಶಾಪಗಳನ್ನು ಕೊಡುವುದರಿಂದಾಗುವುದೇನು? ಪಾಪಿಯಾದ ಮುಮೂರ್ಷುವಿನಂತೆ ಕೊನೆಗೊಂದು ಸಾರಿ ದೇವರನ್ನು ದಯಾಮಯನೆಂದು ಕರೆದಮಾತ್ರಕ್ಕೆ ಆಗುವದೇನು? ಏಳು, ದಳಿತ ಭುಜಂಗಮದಂತೆ ಹೆಡೆಯನ್ನು ವಿಸ್ತಾರಮಾಡಿ ಏಳು; ಮರಿಯನ್ನು ಕಳೆದುಕೊಂಡ ವ್ಯಾಘ್ರಿಯಂತೆ ಪ್ರಮತ್ತ ವಿಕ್ರಮದಿಂದ ಘರ್ಜಿಸುತ್ತಾ ಏಳು, ಅತ್ಯಾಚಾರದಿಂದ ಪೀಡಿತವಾದ ರಾಷ್ಟ್ರದಂತೆ ಬೆದರಿ ಏಳು. ನಿಯತಿಯಂತೆ

ಕಠಿಣನಾಗು, ಹಿಂಸೆಯಂತೆ ಅಂಧನಾಗು, ಸೈತಾನನಂತೆ ಕ್ರೂರನಾಗು. ಆಗವ ನೊಡನೆ ಹೋರಾಡಲು ಶಕ್ತನಾಗುವೆ.

ಷಾಜಹಾನ್--ಒಳ್ಳೆಯದು, ಹಾಗೆಯೇ ಆಗಲಿ. ಬಾ ಮಗಳೇ, ನೀನೂ ನನ್ನ ಸಹಾಯಕ್ಕೆ ಬಾ. ನಾನು ಬೆಂಕಿಯಂತೆ ಉರಿಯುತ್ತ ಏಳುವೆನು; ನೀನು ಗಾಳಿಯಂತೆ ಬೀಸುತ್ತ ಬಾ. ನಾನು ಭೂಕಂಪದಂತೆ ಸಮಸ್ತ ರಾಜ್ಯವನ್ನು ನಾಶ ಮಾಡಿ ಹೋಗುವೆನು; ನೀನುಸಮುದ್ರದ ಜಲೋಚ್ಛ್ವಾಸದಂತೆ ಅದನ್ನು ಮುಳುಗಿಸಿಬಿಡು. ನಾನು ಘೋರ ಯುದ್ಧವನ್ನು ಸಂಗಡ ತರುವೆನು; ನೀನು ಮರಣವನ್ನು ಸಂಗಡ ಕರೆದುಕೊಂಡು ಬಾ. ಬರಬಾರದೆ? ಒಮ್ಮೆಗೆ ಸಮಸ್ತ ಸಾಮ್ರಾಜ್ಯವನ್ನೂ ಭಸ್ಮೀಭೂತವನ್ನಾಗಿ ಮಾಡಿ ಹೊರಟುಹೋಗುವ! ಹೋಗುವುದು?—ಇಷ್ಟಾದಮೇಲೆ ಎಲ್ಲಿಗೆ ಹೋಗುವುದು! ಹೋಗಲು ಸ್ಥಳವಾದರೂ ಎಲ್ಲಿ? ಪ್ರಚಂಡ ಅಗ್ನಿಜ್ವಾಲೆಯಿಂದ ಹೊರಹುಗುವ ಕರಿಯ ಧೂಪದಂತೆ ನೀಲಕ್ಕೆ ಹಾರಿಬಿದ್ದು, ಶೂನ್ಯತೆಯ ವಿರಾಟ ಹಾಹಾಕಾರದಲ್ಲಿ ಲೀನವಾಗುವ.

ಮೊದಲನೆಯ ಅಂಕದ ಕೊನೆ.

---

# ದ್ವಿತೀಯಾಂಕ

## ಒಂದನೆಯ ನೋಟ.

[ಸ್ಥಾನ—ಮಧುರೆಯಲ್ಲಿ ಔರಂಗಜೇಬನ ಶಿಬಿರ; ಕಾಲ—ರಾತ್ರಿ.]

[ದಿಲ್ದಾರ್ ಒಬ್ಬಂಟಿಗನಾಗಿ ಪ್ರವೇಶಿಸುವನು]

ದಿಲ್ದಾರ್-ಮೂರಾದ, ಮೆಲ್ಲಮೆಲ್ಲನೆ ಒಂದೊಂದಾಗಿ ನಿನ್ನ ಅಧಃಪತನದ ಸೋಪಾನವನ್ನು ಇಳಿಯುತ್ತಿರುವೆ. ಮಧ್ಯದ ಕಾಲುವೆಯಲ್ಲಿ ಈಸುತ್ತಿರುವೆ. ನರ್ತಕಿಯರ ಹಾವಭಾವಗಳು ಅದರಮೇಲೆ ತಮ್ಮ ಮುಗ್ಧತೆಯನ್ನು ಚೆಲ್ಲುತ್ತಿರುವವು. ಮುರಾದ, ನೀನು ನಿಶ್ಚಯವಾಗಿಯೂ ಮುಳುಗುವೆ; ಇನ್ನು ಸಾವಕಾಶವಿಲ್ಲ. ಮುರಾದ, ನಿನ್ನನ್ನು ನೋಡಿದರೆ ನನಗೇನೋ ಬಹು ದುಃಖವಾಗುತ್ತಿರುವುದು. ಎಷ್ಟೊಂದು ಸರಳತೆ, ಸಹಜಾದಿಯಿಂದ ಪ್ರೇರಿತನಾಗಿ ಔರಂಗಜೇಬನನ್ನು ಮೋಸದಿಂದ ಸೆರೆಹಿಡಿಯಲು ಪ್ರಯತ್ನ ಮಾಡಿದೆಯ? ನೀರಿನಲ್ಲಿಳಿದೇ ಮೊಸಳೆಯೊಡನೆಯೆ ತರ್ಕಿಸುವುದು? ಇಂದವನ ಸರದಿ. ನೀನು ಹೇಗೆ ಊರ್ಜಿತನಾಗುವೆಯೋ ನೋಡುವ?--ಇದೋ ಬಂದನು.

[ ಮುರಾದನ ಪ್ರವೇಶ ]

**ಮುರಾದ**-ಅಣ್ಣನು ಇನ್ನೂ ನಮಾಜಿನಲ್ಲಿರುವನು. ಆತನಾವಾಗಲೂ ಪರಲೋಕ ವನ್ನೇ ಚಿಂತಿಸುತ್ತಿರುವನು. ಇಹಲೋಕವು ಅವನ ಭಾಗಕ್ಕೆ ಇಲ್ಲವೆಂದೇ ತೋರುವದು. ದಿಲ್ದಾರ್, ಏನು ಯೋಚನೆ ?

**ದಿಲ್ದಾರ್**-ಜಹಪನಾ, ಮೀನುಗಳಿಗೆ ಬಾಲಕ್ಕೆ ಬದಲಾಗಿ ರಕ್ಕೆಗಳಿದ್ದಿದ್ದರೆ ಅವು ಹಾರು ತ್ತಿದ್ದುವೆ ಎಂದು ಯೋಚಿಸುತ್ತಿದ್ದೆನು.

**ಮುರಾದ**-ಮೂಢಾ, ಮೀನುಗಳಿಗೆ ರಕ್ಕೆಗಳಿದ್ದ ಪಕ್ಷದಲ್ಲಿ ಅವು ಹಕ್ಕಿಗಳೇ ಆಗುತ್ತಿದ್ದವು

**ದಿಲ್ದಾರ್**--ಅದು ಸರಿ; ನನಗದು ತೋರಲಿಲ್ಲ; ಆದುದರಿಂದಲೇ ಗೊಂದಲದಲ್ಲಿ ಬಿದ್ದೆನು. ಈಗದು ಪರಿಷ್ಕಾರವಾಯಿತು. ಒಳ್ಳೇದು ಜಹಪನಾ, ಹಂಸೆಯಂತೆ ವಿಚಿತ್ರವಾದ ಬೇರೊಂದು ಪ್ರಾಣಿಯನ್ನು ನೋಡಿರುವಿರಾ ? ನೀರಿನಲ್ಲಿ ಈಸಾ ಡುವುದು; ಆಕಾಶದಲ್ಲಿ ಹಾರುವುದು.

**ಮುರಾದ**--ಅಯ್ಯೋ! ಹುಚ್ಚ, ಅದಕ್ಕೂ, ಪ್ರಕೃತವಿಷಯಕ್ಕೂ ಏನು ಸಂಬಂಧ ?

**ದಿಲ್ದಾರ್**--ದೇವರು ಕಾಲುಗಳನ್ನು ಕೊಟ್ಟಿರುವನು, ನಿಲ್ಲುವ ಸಲವಾಗಿ. ಹೌದೋ, ಅಲ್ಲವೋ ?

**ಮುರಾದ**--ಹೌದು.

**ದಿಲ್ದಾರ್**--ಆದರೆ ಕಾಲುಗಳು ಸರಿಯಾಗಿ ನಿಲ್ಲಲು ಅಸಮರ್ಥವಾದರೆ ಅದನ್ನು ಸರಿ ಪಡಿಸುವ ಭಾರವು ತಲೆಗೆ ಸೇರಿದ್ದಲ್ಲವೊ ? ಈಗ ನೋಡಿರಿ--ಈಶ್ವರನು ಪಶು ಗಳಿಗೆ ತಲೆಯನ್ನು ಮುಂಭಾಗದಲ್ಲಿಯೂ, ಬಾಲವನ್ನು ಹಿಂಭಾಗದಲ್ಲಿಯೂ ಮಾಡಿರುವನೇಕೆ ?

**ಮುರಾದ**--ಎಲವೋ ಮೂರ್ಖ, ಅವುಗಳ ಮುಖವು ಹಿಂಭಾಗದಲ್ಲಿದ್ದಿದ್ದರೆ ಅದೇ ಮುಂಭಾಗವಾಗುತ್ತಿತ್ತು.

**ದಿಲ್ದಾರ್**-ಸರಿಯಾಗಿ ಹೇಳಿದಿರಿ ಜಹಪನಾ. ನಾಯಿಯು ಬಾಲವನ್ನಾಡಿಸುವುದೇಕೆ? ಅದರ ಕಾರಣ?—ಮುಖ್ಯ ಕಾರಣವಾವುದು?

**ಮುರಾದ**--ನೀನೇ ಹೇಳು.

**ದಿಲ್ದಾರ್**--ನಾಯಿಯು ಬಾಲವನ್ನು ಆಡಿಸಲು ಕಾರಣವೇನೆಂದರೆ, ಬಾಲಕ್ಕಿಂತ ನಾಯಿಯ ಪ್ರತಾಪವು ಹೆಚ್ಚು. ಒಂದುವೇಳೆ ನಾಯಿಗಿಂತ ಬಾಲದ ಪ್ರತಾ ಪವು ಹೆಚ್ಚಾಗಿದ್ದಿದ್ದರೆ ಬಾಲವೇ ನಾಯಿಯನ್ನು ಆಡಿಸುತ್ತಿತ್ತೆಂದು ತೋರುತ್ತೆ.

ಮುರಾದ್-ಹಾ! ಹಾ! ಹಾ! ಇದೋ ಅಣ್ಣನು ಬಂದನು.

(ಔರಂಗಜೀಬನ ಪ್ರವೇಶ.)

ಔರಂಗಜೀಬ-ಇಲ್ಲಿರುವೆಯಾ ಸಹೋದರ? ಸಂಗಡ ನಿನ್ನ ವಿದೂಷಕನೂ ಇರುವನು?

ಮುರಾದ್-ಹೌದು ಅಣ್ಣಾ. ನಮಗೆ ಸ್ನೇಹಿತರೂ ಬೇಕು; ಸುಂದರಿಯರೂ ಬೇಕು.

ಔರಂಗಜೀಬ-ಸುಂದರಿಯರೇ, ಈ ದಿನ ಪ್ರಾತಃಕಾಲ ಅಸಾಧಾರಣ ಸುಂದರಿಯರಾದ ಕೆಲವರು ನರ್ತಕಿಯರು ಶಿಬಿರಕ್ಕೆ ಬಂದಿದ್ದರು. ನನಗಂತ ವಿಷಯಗಳಲ್ಲಿ ಅಭಿರುಚಿಯಿಲ್ಲವೆಂಬುದನ್ನು ಬಲ್ಲೆಯಷ್ಟೆ. ಕೆಲವು ದಿನಗಳಲ್ಲಿ ನಾನು ಮಕ್ಕಾಯಾತ್ರೆ ಹೋಗಬೇಕೆಂದಿರುವೆನು. ಆದರೂ ಅವರು ನಿನ್ನ ಮನೋರಂಜನೆಗೆ ಒದಗಿಬಂದಾರೆಂದು ಯೋಚಿಸಿ ಶಿಬಿರದಲ್ಲೆ ಇರಹೇಳಿದೆನು. ಮತ್ತೆ ನೋಡು, ನಿನ್ನ ಸಲುವಾಗಿ ಆ ಗೌರಾಂಗ ಫಿರಂಗಿಗಳ ಕಡೆಯಿಂದ ಕೆಲವು ಸೀಸೆ ಮದ್ಯವನ್ನು ತರಿಸಿರುವೆನು. ಸ್ವಲ್ಪ ರುಚಿನೋಡು (ಕೊಡುವನು.)

ಮುರಾದ್-ಎಲ್ಲಿ? (ತೆಗೆದು ಕುಡಿದು) ವಹವ್ವಾ! ತೋಬಾ ದಿಲ್ದಾರ್, ಏನುಯೋಚನೆ? ನೀನಿಷ್ಟು ಕುಡಿಯಬಾರದೆ?

ದಿಲ್ದಾರ್-ನಾನೊಂದು ಗಹನವಾದ ಯೋಚನೆಯಲ್ಲಿದ್ದೆನು, ಜಹಪನಾ. ಮೃಗಗಳು ತಮ್ಮ ಮುಖವಿರುವಕಡೆ ತಿರುಗಿಕೊಂಡೇ ಓಡಾಡುವುದೇಕೆ?

ಮುರಾದ್-ಮತ್ತೇನು? ಅವು ಬಾಲದಕಡೆ ತಿರುಗಿಕೊಂಡು ಓಡಾಡಬೇಕೆ?

ದಿಲ್ದಾರ್-ಅವಕ್ಕೆ ಮುಖದ ಮೇಲೆ ಕಣ್ಣಿರುವುದೇ ಹಾಗೆ ಮಾಡಲು ಕಾರಣವಿರಬೇಕು. ಆದರೆ ಯಾವ ಪ್ರಾಣಿಗೆ ಕಣ್ಣಿಲ್ಲವೋ ಅವು ಕೂಡಾ ಮುಖದ ಕಡೆಯೇ ಹೋಗುವ ಅವಶ್ಯವೇನು, ಹಿಂದಿಂದಕ್ಕೇಕೆ ಹೋಗಬಾರದು?

ಮುರಾದ್-ತೋಬಾ, ಈ ಫಿರಂಗಿಗಳು ಮದ್ಯವನ್ನು ಬಹಳ ಚನ್ನಾಗಿ ತಯಾರಿಸುವರು. (ಕುಡಿದು) ಅಣ್ಣಾ ನೀನು ಸ್ವಲ್ಪ ರುಚಿ ನೋಡಬಾರದೆ?

ಔರಂಗಜೀಬ-ಇಲ್ಲ. ನಾನು ಕುಡಿಯುವುದಿಲ್ಲವೆಂಬುದನ್ನರಿಯೆಯಾ? ಖುರಾನಿನ ನಿಷೇಧ.

ದಿಲ್ದಾರ್-ಕಣ್ಣಿಲ್ಲದ ಪ್ರಾಣಿಗೆ ರಾತ್ರಿಯೇನು, ಹಗಲೇನು?

ಔರಂಗಜೀಬ-ಖುರಾನಿನ ನಿಷೇಧಗಳನ್ನೆಲ್ಲ ಗಮನಿಸುತ್ತ ಹೋದರೆ ಸಂಸಾರವು ನಡೆಯುವುದಿಲ್ಲ (ಕುಡಿಯುವನು.)

**ದಿಲ್ದಾರ್**-ಆನೆಗೆಷ್ಟು ಬಲವಿರುವದೋಅದಕ್ಕೆ ಸಮನಾದ ಬುದ್ಧಿಯೂ ಇದ್ದಿದ್ದರೆ, ಅದು ನಿಶ್ಚಯವಾಗಿಯೂ ಬಲಿಷ್ಟವಾದ ಪ್ರಾಣಿಯಾಗುತ್ತಿತ್ತು. ಆಗ ಆನೆಯ ಮೇಲೆ ಮಾಹುತನು ಕೂಡುವ ಬದಲಾಗಿ, ಮಾವಟಿಗನ ಮೇಲೆ ಆನೆಯು ಕೂಡುತ್ತಿತ್ತು. ಬೆಟ್ಟದಂತ ಮೈ, ಸಿಂಹದಂತ ಬಲ. ಒಂದು ಅಂಕುಶದ ಪೆಟ್ಟಿಗೆ ಬೆದರಿ ಹೇಗಂದರೆ ಹಾಗೆ ಹೋಗುವುದು. ಓ!

**ಔರಂಗಜೇಬ**-ನಿನ್ನ ವಿದೂಷಕನು ಒಳ್ಳೆ ರಸಿಕ.

**ಮುರಾದ್**-ಅವನೊಂದು ರತ್ನ. ಎಲ್ಲಿರುವರು ಆ ನರ್ತಕಿಯರು?

**ಔರಂಗಜೇಬ**-ಅದೋ, ಆ ಶಿಬಿರದಲ್ಲಿ. ನೀನೆ ಹೋಗಿ ಕರೆದುಕೊಂಡು ಬರಬಾರದೆ?

**ಮುರಾದ್**-ಯುದ್ಧದಲ್ಲಾಗಲಿ, ಭೋಗದಲ್ಲಾಗಲಿ, ಮುರಾದನಾವಾಗಲೂ ಹಿಂದೆಗೆಯುವನಲ್ಲ (ಹೋಗುವನು.)

**ದಿಲ್ದಾರ್**-ಕುರುಡನಾದ ಮೇಲೆ ರಾತ್ರಿಯೇನು, ಹಗಲೇನು? (ಎಂದು ಹೇಳುತ್ತಾ ಹೊರಟನು.)

**ಔರಂಗಜೇಬ**-(ತಡೆದು) ನಿಲ್ಲು, ಸ್ವಲ್ಪ ಮಾತಿದೆ.

**ದಿಲ್ದಾರ್**-ನನ್ನನ್ನು ಹೊಡೆಯಬೇಡಣ್ಣಾ. ನನಗೆ ಸಿಂಹಾಸನವೂ ಬೇಡ; ಮಕ್ಕಾಯಾತ್ರೆಯೂ ಬೇಡ.

**ಔರಂಗಜೇಬ**-ನೀನು ಯಾರು? ಸರಿಯಾಗಿ ಹೇಳು? ನೀನು ಕೇವಲ ವಿದೂಷಕನಲ್ಲ.

**ದಿಲ್ದಾರ್**-ನಾನೊಬ್ಬ ಧೂರ್ತ, ಧಗಾಕೋರ್ ಮನುಷ್ಯ. ನನ್ನ ಸ್ವಭಾವೆಂದರೆ- ಖೋಸಾಮುದೀ, ದಗಲ್ಬಾಜೀ, ಬಾಂದ್ರಾಮಿ, ಜುವಾಖೋರ್, ಇವುಗಳೆಲ್ಲದರ ಒಂದಪೂರ್ವ ಸಂಮೇಳನ, ತಿಳಿಯಿತೆ? ನನ್ನ ಆಶೆಯು ಚೆನ್ನಾಗಿ ಬೆಂದ ಬಿರಿಯಾನಿಯಲ್ಲಿ, ಸುಖವು ಅರ್ಥವಿಲ್ಲದ ಕಾಡುಹರಟೆಯಲ್ಲಿ, ಸಂತೋಷವು ಧನ ದೌಲತ್ತಿನಿಂದ ಮೆರೆಯುವ ನಿಂಮ್ಮಂತವರ ಸೇವೆಯಲ್ಲಿ.

**ಔರಂಗಜೇಬ**-ಕೇಳು, ನಾನು ಪರಿಹಾಸ ಪ್ರಿಯನಲ್ಲ. ನಿನಗೇನು ಕೆಲಸ ಮಾಡಲು ಬರುವುದು ?

**ದಿಲ್ದಾರ್**-ಏನೂ ಬರುವುದಿಲ್ಲ. ಹಾಯೆಂದು ಬಾಯಿಬಿಡುವುದಕ್ಕೆ ಬರುವುದು. ಏನಾದರೂ ಕೆಲಸ ಹೇಳಿದರೆ ಮಾಡದಿರುವುದಕ್ಕೆ ಬರುವುದು. ಯಾರಾದರೂ ಬೈದರೆ ಪ್ರತಿಯಾಗಿ ಬಯ್ಯುವುದಕ್ಕೆ ಬರುವುದು. ಮತ್ತು-ಮತ್ತು-ಮತ್ತೇನೂ ಬರುವುದಿಲ್ಲ, ಜಹಾಪನಾ.

**ಔರಂಗಜೀಬ**-ಸಾಕು ತಿಳಿಯಿತು; ನಿನ್ನನ್ನು ಬಳಿಕ ವಿಚಾರಿಸಿಕೊಳ್ಳುವೆನು. ಏನೂ ಭಯವಿಲ್ಲ.

**ದಿಲ್ದಾರ್**-ಸ್ವಲ್ಪವೂ ಇಲ್ಲ.

(ನರ್ತಕಿಯರೊಡನೆ ಮುರಾದನು ಬರುವನು.)

**ಮುರಾದ್**-ವಹವ್ವಾ! ತೋಬಾ ಎಷ್ಟೊಂದು ಸುಂದರಿಯರು!

**ಔರಂಗಜೀಬ**-ಹಾಗಾದರೆ ನೀನಿಲ್ಲಿ ವಿನೋದವಾಗಿರು; ನಾನು ಹೋಗುವೆನು. ನಿನ್ನ ವಿದೂಷಕನನ್ನೂ ಕರೆದುಕೊಂಡು ಹೋಗುವೆನು. ಅವನ ಮಾತು ಕಥೆಗಳಲ್ಲಿ ನನಗೆ ಬಹಳ ಆನಂದವಾಗುತ್ತಿದೆ.

**ಮುರಾದ್**-ಒಹೋ! ಹಾಗೋ; ಆಗಬಹುದು. ನಾನು ಮೊದಲೇ ಹೇಳಲಿಲ್ಲವೇ ಅವನೊಂದು ರತ್ನವೆಂದು. ಕರೆದುಕೊಂಡು ಹೋಗು; ಅಗತ್ಯವಾಗಿ ಕರೆದು ಕೊಂಡು ಹೋಗು. ನನಗೆ ಅವನಿಗಿಂತ ಉತ್ತಮರಾದವರ ಸಂಗವು ದೊರೆ ತಿರುವುದು. (ಔರಂಗಜೀಬನು ದಿಲ್ದಾರ್‌ನೊಡನೆ ಹೋಗುವನು)

**ಮುರಾದ್**-ಹಾಡಿರಿ; ನರ್ತನಮಾಡಿರಿ.

## ನೃತ್ಯಗೀತ.

ಬಂದೆನಿಂದು ನಿನ್ನೆಡೆಗೆ ಪ್ರಣಯಾರ್ಥಿಯಾಗಿ ||ಪಲ್ಲವಿ||

ಈ ರೂಪು! ಈ ಬೆಡಗು! ಈ ಸೊಬಗಿನೊಯ್ಯಾರ |
ಈ ರಮ್ಯತನುವೀ ವಿಲಾಸವಿಭ್ರಮವು ||
ಈ ಸರಸ ಸಂಗೀತವಿದ ನಿನ್ನ ಚರಣಸರ- |
ಸೀರುಹದೊಳರ್ಪಿಸಲು ತಂದೆ ನಾನು ||

ಇಂದೆನ್ನದೆಂದೆನಿಸಿ ಜಗದೊಳೇನೇನಿಹುದೊ |
ತಂದಿರುವೆನದನೆಲ್ಲ ನಿನಗೆ ಕೊಡಲು ||
ನಂದನಂದನ ಚಲ್ವ ಗೋವಿಂದ ನೀನಿದನು |
ಚಂದದಲಿ ಸ್ವೀಕರಿಸೆ ಧನ್ಯಳಹೆನು ||

ಪರಿಮಳದ ಭರದೆ ಪೊಳೆವೀ ಕುಸುಮ ಭಾರವನು |
ಪರಿಮಳಾಂಗನೆ ನಿನ್ನ ಚರಣತಲಕೆ ||

ಸರಸದಲಿ ಸಿಂಗರಿಸುತೀ ಮಲ್ಲಿಗೆಯ ಮುಗುಳ |
ಸರವ ಹಾಕುವೆ ನಿನ್ನ ಕಂಠ ದೇಶಕ್ಕೆ ||

ಹೃದಯವನು ಕಳ್ವ ಸುಧೆಗಾಧಾರವೆನಿಸಿದೀ |
ಅಧರ ಯುಗಳವ ನಿನ್ನ ತುಟಿಯೊಳಿಡುವೆ ||
ಹೃದಯೇಶ ಅದನುಂಡು ತಣಿವುದಿಂದೀ ಮನದ |
ಮುದದಾಶೆಗಳ್ ನಿನ್ನೊಳಂತ್ಯವಹುವು ||

ಶರಣು ನೀನೆನಗೆಂದು ಚರಣ ನಳಿನಪೊಳಿಂದು |
ಉರುಳೆ ಕರುಣಾಳು ಮನವಾಶಿಸುವುದು ||
ಅರಿಯೆ ನಿನ್ನೀ ಪ್ರಣಯ ಪೂರ್ಣಾಬ್ಧಿಯಲಿ ಮುಳುಗಿ |
ಹರಣಗಳ ಕಳೆವೆನೆಂಬಿಷ್ಟವಹುದು ||

(ಮುರಾದನು ಕೇಳುತಾ, ಕೇಳುತಾ ಸುರಾಪಾನ ಮಾಡುತ್ತಿರುವನು. ಕ್ರಮೇಣ ನಿದ್ರೆ ಹೋಗುವನು.)

ನರ್ತಕಿಯರು ಹೊರಟುಹೋಗುವರು. ಸಶಸ್ತ್ರರಾದ ಪ್ರಹರಿಗಳೊಡನೆ ಔರಂಗಜೀಬನು ಪ್ರವೇಶಿಸುವನು.

**ಔರಂಗಜೀಬ**-ಕಟ್ಟಿರಿ.

**ಮುರಾದ್**-ಯಾರು? ಅಣ್ಣ, ಇದೇನು ವಿಶ್ವಾಸ ಘಾತಕತನ (ಏಳುವನು.)

**ಔರಂಗಜೀಬ**-ಒದ್ದಾಡಿದರೆ ವಧೆಮಾಡಲು ಹಿಂದೆಗೆಯಬೇಡಿ. (ಪ್ರಹರಿಗಳು ಮುರಾದನನ್ನು ಬಂಧಿಸುವರು.)

**ಔರಂಗಜೀಬ**-ಆಗ್ರಾಕ್ಕೆ ಕರೆದುಕೊಂಡು ಹೋಗಿ; ನನ್ನ ಪುತ್ರ ಮಹಮುದ್ ಮತ್ತು ಷಯಸ್ತಾಖಾನನ ಅಧೀನದಲ್ಲಿರಿಸಿ; ನಾನು ಪತ್ರವನ್ನು ಬರೆದು ಕೊಡುವೆನು.

**ಮುರಾದ್**-ಇದಕ್ಕೆ ಪ್ರತಿಫಲವನ್ನು ಹೊಂದುವೆ, ದುಷ್ಟ ನಾನು ನಿನ್ನನ್ನು ಮತ್ತೊಮ್ಮೆ ನೋಡುವೆನು.

**ಔರಂಗಜೀಬ**-ಎಳೆದುಕೊಂಡು ಹೋಗಿ (ಹೋದರು.)

**ಔರಂಗಜೀಬ**-ಹಾ! ದೇವರೇ, ನನ್ನ ಕೈಹಿಡಿದು ಎಲ್ಲಿಗೆ ಕರೆದೊಯ್ಯುವೆ? ನಾನೀ ಸಿಂಹಾಸನವನ್ನು ಅಪೇಕ್ಷಿಸಲಿಲ್ಲ. ನೀನು ನನ್ನ ಕೈಹಿಡಿದು ಅದರ ಮೇಲೆ ಕುಳ್ಳಿರಿಸುವೆಯೇಕೆ? ಅದು ನಿನಗೇ ಗೊತ್ತು. (ಹೋಗುವನು.)

## ಎರಡನೆಯ ನೋಟ.

---

[ಸ್ಥಾನ—ಆಗ್ರಾದ ದುರ್ಗಪ್ರಾಸಾದ.   ಕಾಲ—ಪ್ರಭಾತ.]
(ಷಾಜಹಾನ್ ಒಬ್ಬಂಟಿಗನು.)

**ಷಾಜಹಾನ್**-ಸೂರ್ಯನು ಹುಟ್ಟುತ್ತಿರುವನು; ನಿನ್ನೆಯ ದಿನ ಯಾವ ರೀತಿಯಾಗಿದ್ದನೋ, ಅದೇ ಉಜ್ವಲ-ರಕ್ತವರ್ಣ; ಆಕಾಶದಲ್ಲಿ ಅದೇ ನೀಲಿಮಾ; ಈಯಮುನೆಯು ಅದೇ ರೀತಿಯಾಗಿ ಕ್ರೀಡಾಮಯಿ-ಕಲಕಲನಿನಾದಿನೀ; ತೀರದಲ್ಲಿರುವ ಮರದ ಸಾಲುಗಳಲ್ಲೂ ಅದೇ ರೀತಿಯಾದ ಶ್ಯಾಮಲ-ಪತ್ರರಾಜಿ-ಬಹುವರ್ಣದ ಹೂವುಗಳು; ನಾನು ಚಿಕ್ಕಂದಿನಿಂದ ನೋಡುತ್ತಿರುವ ರಮ್ಯವಾದ ಅದೇ ನೋಟ. ಎಲ್ಲವೂ ಅದೇ; ಕೇವಲ ನಾನು ಬದಲಾಗಿರುವೆನು. (ಗಂಭೀರವಾದ ಧ್ವನಿಯಿಂದ) ಇಂದು ನಾನು ನನ್ನ ಮಗನ ಕೈಲಿ ಬಂದಿ; ನಾರಿಯರ ಹಾಗೆ ಅಸಹಾಯಕನು; ಮಕ್ಕಳಂತೆ ದುರ್ಬಲನು; ಮಧ್ಯೆ ಮಧ್ಯೆ ಕ್ರೋಧದಿಂದ ಘರ್ಜನ ಮಾಡುತ್ತಿರುವೆನು; ಆದರಾ ಘರ್ಜನೆಯು ನಿಷ್ಫಲ! ಶರತ್ಕಾಲದ ಮೇಘಗಳ ಘರ್ಜನದಂತೆ ವ್ಯರ್ಥವಾದೊಂದು ನಿಷ್ಫಲ ಹಾಹಾಕಾರ ಮಾತ್ರ! ಈ ನನ್ನ ಪ್ರತೀಕಾರ ಶೂನ್ಯವಾದ ನಿರ್ವಿಷ ಆಸ್ಫಾಲನದಿಂದ ನಾನೇ ಕ್ಷಯ ಹೊಂದುತ್ತಿರುವೆನು. ಓ! ಭಾರತಸಮ್ರಾಟ, ಷಾಜಹಾನನಿಗೆ ಇಂದೇನೀ ಅವಸ್ಥೆ? (ಒಂದು ಕಂಬದ ಮೇಲೆ ಕೈಯೂರಿ ದೂರದಲ್ಲಿಯ ಯಮುನೆಯನ್ನು ನೋಡುತ್ತಾ ನಿಂತಿರುವನು.) ಇದೇನು ಶಬ್ದ! ಯಾರದು? ಬಾ, ತಾಯೀ ಜಹನಾರ.

(ಜಹನಾರಳ ಪ್ರವೇಶ.)

**ಷಾಜಹಾನ್**-ಅದೇನು ಸದ್ದು ಜಹನಾರಾ, ಇದೋ ಮತ್ತೆ ಕೇಳುತ್ತಿರುವುದು. (ಔತ್ಸುಕ್ಯದಿಂದ) ದಾರನು ವಿಜಯಶಾಲಿಯಾಗಿ ಸೈನ್ಯದೊಂದಿಗೆ ಆಗ್ರಾವನ್ನು ಪ್ರವೇಶಿಸುತ್ತಿರುವನೊ? ಬಾ ಮಗನೇ, ಈ ಅನ್ಯಾಯದ ಅವಿಚಾರ ಪೂರ್ಣವಾದ ನೃಶಂಸತೆಯನ್ನು ಒಮ್ಮೆಗೆ ನಾಶಮಾಡು—ಏನು ಜಹಾನಾರಾ, ಕಣ್ಣುಗಳಿಂದ ನೀರು ಸುರಿಸುತ್ತಿರುವೆ?—ತಿಳಿಯಿತು ಪುತ್ರಿ, ಇದು ದಾರನ ವಿಜಯಯಾತ್ರೆಯಲ್ಲ, ಮತ್ತೇನೋ ಕೆಟ್ಟ ಸುದ್ದಿ. ಹೌದೋ ಜಹಾನಾರಾ?

**ಜಹಾನಾರಾ**-ಹೌದು ತಂದೆಯೇ.

**ಷಾಜಹಾನ್**-ತಿಳಿದೆನು; ದುರ್ಭಾಗ್ಯವು ಒಂಟಿಯಾಗಿ ಬರುವುದೇ ಇಲ್ಲ. ಒಮ್ಮೆಗೆ ಪ್ರಾರಂಭವಾಯಿತೆಂದರೆ: ತಮ್ಮ ಆಷ್ಟೂ ಸೇಡನ್ನು ತಿರಿಸಿಕೊಂಡೇ ಹೋಗುವದು. ಮಗಳೆ, ಆ ಕೆಟ್ಟ ಸುದ್ದಿಯೇನು ಹೇಳು. ಇದಾರ ಶಬ್ದ ?

**ಜಹಾನಾರಾ**-ಇಂದು ಔರಂಗಜೀಬನು ಸಮ್ರಾಟನಾಗಿ ಡಿಲ್ಲಿಯ ಸಿಂಹಾಸನವನ್ನೇರುವನು; ಇದಾ ಉತ್ಸವಧ್ವನಿ.

**ಷಾಜಹಾನ್**-(ಕೇಳದವನಂತೆ) ಏನು, ಔರಂಗಜೀಬನು ಏನುಮಾಡುವನು ?

**ಜಹಾನಾರಾ**-ಡಿಲ್ಲಿಯ ಸಿಂಹಾಸನವನ್ನೇರುವನು.

**ಷಾಜಹಾನ್**-ಜಹಾನಾರಾ, ಏನುಹೇಳುವೆ? ನಾನಿನ್ನೂ ಜೀವಿತನಾಗಿರುವೆನು ಸತ್ತಿಲ್ಲ. ಔರಂಗಜೀಬನು-ಇಲ್ಲ; ಅದು ಅಸಂಭವ—ಜಹಾನಾರಾ, ನಿನಗಾರೋ ಸುಳ್ಳು ಹೇಳಿರುವರು. ಹೀಗಾಗುವುದುಂಟೆ? ಔರಂಗಜೀಬನು ಇಂತ ಕಾರ್ಯವನ್ನು ಮಾಡಲಾರ. ಅವನ ತಂದೆಯಾದ ನಾನಿನ್ನು ಜೀವಿಸಿರುವೆನು. ಅವನಿಗೇನು ವಿವೇಕವಿಲ್ಲವೆ, ಜನರೇನೆಂದುಕೊಂಡಾರೆಂಬ ಲಜ್ಜೆಯಿಲ್ಲವೆ?

**ಜಹಾನಾರಾ**-(ಕಂಪಿತ ಸ್ವರದಿಂದ) ಯಾವನು ವೃದ್ಧನೂ, ಮುಮೂರ್ಷುವೂ ಆದ ತಂದೆಯನ್ನು ಮೋಸದಿಂದ ಸೆರೆಹಿಡಿದು ಇಂತ ಜೀವಂತ ಸಮಾಧಿಯಲ್ಲಿ ಸೆರೆಹಾಕಬಲ್ಲನೊ, ಅವನಿಗೆ ಯಾವದು ತಾನೇ ಸಾಧ್ಯವಿಲ್ಲ ತಂದೆಯೇ ?

**ಷಾಜಹಾನ್**-ಹಾಗಾದರೂ ಇಲ್ಲ. ಅಥವಾ ಆಗಕೂಡದೇಕೆ? ಅವರಲ್ಲಿ ಆಶ್ಚರ್ಯವೇನು? ಭೂಮಿಯಿಂದ ಕಾಳರಾತ್ರಿಯಂತೆ ಕಪ್ಪಾದ ಧೂಳು ಆಕಾಶಕ್ಕೇಳುತ್ತಿದೆ. ಆಕಾಶವು ಕಾರ್ಗತ್ತಲು; ಜಗತ್ತು ಇಂದು ಬದಲಾಯಿಸುವುದೋ, ಅಥವಾ ನನಗೆ ಬುದ್ಧಿ ಭ್ರಮಣೆಯಾಗಿರುವುದೊ? ಅದೇ ನೀಲಾಕಾಶ; ಅದೇ ಉಜ್ವಲ ಶಾಂತಿಮಯ ಪ್ರಭಾತ. (ಸ್ವಲ್ಪಹೊತ್ತು ಸುಮ್ಮನಿದ್ದು) ಜಹನಾರಾ,

**ಜಹಾನಾರಾ**-ಅಪ್ಪ.

**ಷಾಜಹಾನ್**-(ಗದ್ಗದ ಸ್ವರದಿಂದ) ನೀನು ಹೊರಗೆ ಏನನ್ನು ನೋಡಿ ಬಂದೆ? ಪ್ರಪಂಚದ ವ್ಯವಹಾರಗಳು ಹಿಂದಿನ ಹಾಗೆಯೇ ನಡೆಯುತ್ತಿರುವುವೆ? ತಾಯಿಯು ಮಗುವಿಗೆ ಸ್ತನಪಾನ ಮಾಡಿಸುವಳೆ? ಹೆಂಡತಿಯು ಗಂಡನೊಡನೆ ಸಂಸಾರ ಮಾಡುವಳೆ? ಭೃತ್ಯನು ಪ್ರಭುವಿನ ಸೇವೆಯಲ್ಲಿ ನಿರತನಾಗಿರುವನೆ? ಗೃಹಸ್ಥರು ಭಿಕ್ಷುಕರಿಗೆ ಭಿಕ್ಷೆಯನ್ನು ಕೊಡುವರೆ? ನೀನಿವುಗಳನ್ನು ನೋಡಿ

ಬಂದೆಯಾ? ಮನೆಯಲ್ಲಿ ಮನುಷ್ಯರು ವಾಸಮಾಡುತ್ತಿರುವರೇ? ಪೇಟೆಗಳಲ್ಲಿ ಜನಗಳು ಓಡಾಡುವರೆ? ವನ್ಯಮೃಗಗಳಂತೆ ಮನುಷ್ಯರು ಒಬ್ಬರನ್ನೊಬ್ಬರು ಭಕ್ಷಿಸುತ್ತಿಲ್ಲವೊ? ನೋಡಿಬಾ ಮಗಳೇ, ನೋಡಿಬಾ.

**ಜಹಾನಾರಾ**-ಈ ತುಚ್ಛ ಜಗತ್ತಿನಲ್ಲಿ ಎಲ್ಲವೂ ಹಿಂದಿನಂತೆಯೇ ನಡೆಯುತ್ತಿರುವುದಷ್ಟೆ. ಬಂದಿಯಾದ ಷಾಜಹಾನನ ಸಲುವಾಗಿ ಯಾರೂ ತಲೆಯನ್ನು ತೂಗುವುದು ಇಲ್ಲ.

**ಷಾಜಹಾನ್**-ಇಲ್ಲವೆ? ಇದು ನಿಜವೆ? ಇದೆಂತ ಘೋರ ಅತ್ಯಾಚಾರವೆಂದು ಯಾರೂ ಹೇಳುವುದಿಲ್ಲವೆ. ನಮ್ಮ ದಯಾಳು ಪ್ರಜಾವತ್ಸಲ ಸಮ್ರಾಟ ಷಾಜಹಾನನನ್ನು ಬಂದಿಯಾಗಿ ಕೂಡಿಡುವುದು ಯಾರಿಗೆ ಸಾಧ್ಯವೆಂದು ಯಾರೂಹೇಳುವುದಿಲ್ಲವೆ? 'ನಾವು ವಿದ್ರೋಹ ಮಾಡುವೆವು. ಔರಂಗಜೇಬನನ್ನು ಕಾರಾಗೃಹಕ್ಕೆ ಹಾಕುವೆವು. ಆಗ್ರಾದ ದುರ್ಗಪ್ರಾಸಾದವನ್ನು ಹೊಡೆದು, ನಮ್ಮ ಪ್ರಿಯ ಸಮ್ರಾಟ್ ಷಾಜಹಾನನನ್ನು ಕರತಂದು ಮತ್ತೊಮ್ಮೆ ಸಿಂಹಾಸನದ ಮೇಲೆ ಕೂಡಿಸುವೆವು' ಎಂದು ಯಾರೂ ಕೂಗುವುದಿಲ್ಲವೆ?

**ಜಹಾನಾರಾ**-ಇಲ್ಲ ಅಪ್ಪ. ಪ್ರಪಂಚವು ಯಾರಿಗೋಸುಗವೂ ದುಃಖಿಸುವುದಿಲ್ಲ; ಎಲ್ಲರೂ ತಮ್ಮ ತಮ್ಮ ಸುಖದುಃಖಗಳಲ್ಲಿಯೇ ವ್ಯಸ್ತರಾಗಿರುವರು. ಅವರು ಎಷ್ಟೊಂದು ಸ್ವಾರ್ಥ ಪರಾಯಣರೆಂದರೆ—ಪ್ರಭಾತದಲ್ಲಿ ಸೂರ್ಯನು ಹುಟ್ಟದೆ ಹೋದರೂ, ಪ್ರಚಂಡ ಅಗ್ನಿದಾಹವು ಆಕಾಶವನ್ನು ಸುಡುತ್ತ ಬರುತ್ತಿದ್ದರೂ, ಆ ಕಾಲಾಂತಕ ಅಗ್ನಿಯ ರಕ್ತಾಲೋಕದಲ್ಲಿ ಅವರು ತಮ್ಮ ಕಾರ್ಯವನ್ನು ಯಥಾರೀತಿ ಮಾಡುತ್ತ ಹೋಗುವರು.

**ಷಾಜಹಾನ್**-ಒಂದುಸಾರಿ ದುರ್ಗದಿಂದ ಹೊರಗೆ ಹೋಗಬಲ್ಲೆನಾದರೆ; ಒಮ್ಮೆ ಅಂಥ ಸುಯೋಗವು ದೊರಕುವುದಿಲ್ಲವೇ ಜಹನಾರಾ? ಯಾರಿಗೂ ತಿಳಿಯದಂತೆ ಬಂದು ಬಾರಿ ನನ್ನನ್ನು ದುರ್ಗದಿಂದ ಹೊರಗೆ ಕರಕೊಂಡು ಹೋಗುವುದು ನಿನಗೆ ಸಾಧ್ಯವೆ ?

**ಜಹಾನಾರಾ**-ಇಲ್ಲ ಅಪ್ಪ. ಹೊರಗೆ ಸಶಸ್ತ್ರರಾದ ಸಾವಿರ ಜನ ಪ್ರಹರಿಗಳು.

**ಷಾಜಹಾನ್**-ಆ ಸಾವಿರಜನ ಪ್ರಹರಿಗಳೂ ಒಂದುದಿನ ನನ್ನನ್ನು ಸಮ್ರಾಟನೆಂದು ತಿಳಿದಿದ್ದರು. ನಾನಾವಾಗಲೂ ಅವರೊಂದಿಗೆ ವೈರವನ್ನು ಮಾಡಿದವನಲ್ಲ;

ಹಾಗೂ ಅವರಲ್ಲಿಷ್ಟೋ ಮಂದಿಯನ್ನು ಉಪವಾಸದಿಂದ ರಕ್ಷಿಸಿರುವೆನು; ಕಾರಾಗಾರದಿಂದ ಬಿಡಿಸಿರುವೆನು; ವಿಪತ್ತಿನಿಂದ ಕಾಪಾಡಿರುವೆನು. ಅದಕ್ಕೆ ಬದಲಾಗಿ.. ......

**ಜಹಾನಾರಾ**-ಇಲ್ಲವಪ್ಪ. ಮನುಷ್ಯನು ಕೇವಲ ಅಧಿಕಾರ ಪ್ರಿಯನು, ನಾಯಿಯಂತೆ ಉದರಂಭರಿ—ಯಾರು ಒಂದು ತುಣುಕು ಮಾಂಸವನ್ನು ಹಾಕಬಲ್ಲರೋ, ಅವರ ಕಾಲಿನ ಹತ್ತಿರ ನಿಂತು ಬಾಲವನ್ನಾಡಿಸುವನು. ಇಷ್ಟೊಂದು ನೀಚ; ಇಷ್ಟೊಂದು ಹೇಯ.

**ಷಾಜಹಾನ್**-ಆದರೂ ನಾನೊಮ್ಮೆ ಈ ಬಂಧನದಿಂದ ಮುಕ್ತನಾಗಿ ಅವರ ಸಮ್ಮುಖದಲ್ಲಿ ನಿಲ್ಲಬಲ್ಲೆನಾದರೆ, ಈ ನರೆಗೂದಲನ್ನು ಬಿಚ್ಚಿಹಾಕಿ, ರೋಗದಿಂದ ದುರ್ಬಲವಾಗಿ ನಡುಗುತ್ತಿರುವ ಈ ಶೀರ್ಣ ದೇಹವನ್ನು ಈಯಷ್ಟಿಯ ಮೇಲೂರಿಕೊಂಡು ಅವರ ಸಂಮುಖದಲ್ಲಿ ನಿಲ್ಲಬಲ್ಲೆನಾದರೆ, ಆಗಲೂ ಅವರಿಗೆ ದಯೆ ಹುಟ್ಟುವುದಿಲ್ಲವೇ, ಜಹಾನಾರಾ ?

**ಜಹಾನಾರಾ**-ತಂದೆಯೇ, ಇಹಸಂಸಾರದಲ್ಲಿ ದಯದಾಕ್ಷಿಣ್ಯಗಳಿಗೆ ಅವಕಾಶವಿಲ್ಲ. ಎಲ್ಲವೂ ಭಯದಿಂದ ನಡೆಯುವುದು. ಷಾಜಹಾನನ ಸಂಪತ್ತಿನ ಸಮಯದಲ್ಲಿ ಯಾರು 'ಜಯ ಸಮ್ರಾಟ್ ಷಾಜಹಾನನಿಗೆ ಜಯ' ಎಂದು ಕೂಗುತ್ತಾ ತಮ್ಮ ಚೀತ್ಕಾರದಿಂದ ಆಕಾಶವನ್ನೇ ವಿದೀರ್ಣ ಮಾಡುತ್ತಿದ್ದರೋ, ಅವರೂ ಕೂಡ ಇಂದು ನಿನ್ನ ಈ ಸ್ಥವಿರ ಜೀರ್ಣಮೂರ್ತಿಯನ್ನು ನೋಡಿದರೆ ಅಸಹ್ಯಗೊಂಡು ಅದೇ ಬಾಯಿಂದ 'ಥೂ' ಎಂದು ಉಗುಳುವರು. ಹಾಗೊಂದುವೇಳೆ ಕೃಪಾಭರಿತರಾಗಿ ಉಗುಳದೆ ಹೋದರೆ ಘೃಣೆಯಿಂದ ಮುಖವನ್ನು ತಿರುಗಿಸಿ ಮರುಮಾತಾಡದೆ ಹೊರಟು ಹೋಗುವರು.

**ಷಾಜಹಾನ್**-ಹಾಗೆಯೇ! ಇಷ್ಟೊಂದು ನಿಷ್ಠುರತೆಯೇ! (ಗಂಭೀರ ಸ್ವರದಿಂದ) ಇಂದು ಪ್ರಪಂಚವು ಇಷ್ಟೊಂದು ನೀಚ ಗತಿಗಿಳಿದಿರುವುದಾದರೆ ಯಾವದೋ ಒಂದು ಮಹಾ ವ್ಯಾಧಿಯು ಅದರ ಸರ್ವಾಂಗಗಳನ್ನು ವ್ಯಾಪಿಸಿರಬೇಕು. ಹಾಗಲ್ಲದಿದ್ದರೆ ಮತ್ತೇನು ? ಈಶ್ವರನೆ, ಇನ್ನು ನೀನವರನ್ನು ಉಳಿಸಬೇಡ. ಈಕ್ಷಣವೇ ಅವರ ಕತ್ತುಗಳನ್ನು ಮುರಿದು ಸಂಹಾರ ಮಾಡಿಬಿಡು. ಹೀಗಾಗಿಯೂ ಈಗಲೂ ಹೇ! ಆಕಾಶ, ನೀನೇಕೆ ನೀಲವರ್ಣನಾಗಿರುವೆ? ಸೂರ್ಯನೆ, ನೀನೇಕೆ ಗಗನದಲ್ಲಿ ಸಂಚರಿಸುವೆ? ಲಜ್ಜಾಹೀನನೆ, **ಅಸ್ತನಾಗಿ** ಬಿಡು. ಒಂದು ಮಹತ್ಸಂಘಾ

ತದಿಂದ ನೀನು ಪುಡಿ ಚೂರ್ಣವಾಗಿ ಹೋಗು. ಭೂಮಿಕಂಪವೇ, ನೀನು ಭೀಷಣ ಹುಂಕಾರದಿಂದ ಉಗವಿುಸಿ, ಈ ಪಾಪಿ ಪೃಥ್ವಿಯ ವಕ್ಷವನ್ನು ಬೇಧಿಸಿ ನುಚ್ಚು ನೂರಾಗಿ ಮಾಡಬಾರದೆ? ಒಂದು ಪ್ರಕಾಂಡ ದಾವಾನಲವು ಹುಟ್ಟಿ, ತನ್ನ ಕೃಪಾಪೂರ್ಣವಾದ ಕರಾಳ ಜ್ವಾಲೆಗಳಿಂದ ಈ ಪ್ರಪಂಚವೆಲ್ಲವನ್ನು ಸುಟ್ಟು ಭಸ್ಮೀಭೂತವಾಗಿ ಮಾಡಬಾರದೆ? ಮತ್ತು ಒಂದು ಹಾಹಾಕಾರಮಯವಾದ ಬಿರುಗಾಳಿಯೆದ್ದು ಆ ಭಸ್ಮರಾಶಿಯನ್ನು ಈಶ್ವರನ ಮುಖಕ್ಕೆ ಹಾರಿಸಬಾರದೆ?

## ಮೂರನೆಯ ನೋಟ.

(ಸ್ಥಾನ—ರಾಜಪುತಾಣದ ಮರುಭೂಮಿಯ ಪ್ರಾಂತದೇಶ. ಕಾಲ—ಎರಡು ಘಂಟೆ ಮಧ್ಯಾಹ್ನ ಮರದಡಿಯಲ್ಲಿ ದಾರಾ, ನಾದಿರಾ ಮತ್ತು ಸಿಪಾರ್, ಮತ್ತೊಂದು ಕಡೆ ನಿದ್ರಿತಳಾದ ಜಹರತ್ ಉನ್ನೀಸಾ)

ನಾದಿರಾ-ಇನ್ನು ನನ್ನ ಕೈಲಾಗದು ಪ್ರಭು, ಇಲ್ಲಿ ಸ್ವಲ್ಪ ಹೊತ್ತು ವಿಶ್ರಮಿಸಿಕೊಳ್ಳುವ.

ಸಿಪಾರಾ—ಹೌದು ಅಪ್ಪ. ಓ! ಎಷ್ಟೊಂದು ಬಾಯಾರಿಕೆ?

ದಾರಾ-ವಿಶ್ರಾಂತಿಯೇ ನಾದಿರಾ? ಈ ಸಂಸಾರದಲ್ಲಿ ನಮಗೆ ವಿಶ್ರಾಂತಿಯಿಲ್ಲ. ಈ ಮರುಭೂಮಿಯನ್ನು ನೋಡಿದೆಯಾ? ಇದನ್ನು ನಾವು ದಾಟಹೋದರಲ್ಲವೇ?

ನಾದಿರಾ-ನೋಡುತ್ತಿರುವೆನು. ಅಯ್ಯೊ!

ದಾರಾ-ನಮ್ಮ ಹಿಂದೆ ಎಂತಹ ಮರುಭೂಮಿಯೋ, ಸಂಮುಖದಲ್ಲೂ ಅದೇ ಮರುಭೂಮಿ. ನೀರಿಲ್ಲ, ನೆರಳಿಲ್ಲ, ಅಂತ್ಯವಿಲ್ಲ.

ಸಿಪಾರಾ-ಅಪ್ಪ, ಬಹಳ ಬಾಯಾರಿಕೆ, ನೀರು! ನೀರು!!

ದಾರಾ-ಇಲ್ಲಿ ನೀರು ಸಿಕ್ಕುವುದಿಲ್ಲ, ಸಿಪಾರ.

ಸಿಪಾರಾ-ಅಪ್ಪ, ನೀರು! ನೀರನ್ನು ಕುಡಿಯದೆ ಹೋದರೆ ನಾನು ಉಳಿಯುವುದಿಲ್ಲ.

ದಾರಾ-(ಉಗ್ರ ಭಾವದಿಂದ) ಏನು?

ಸಿಪಾರಾ-ನೀರು! ನೀರು!!

ನಾದಿರಾ-ನೋಡು ಪ್ರಭು! ಎಲ್ಲಿಯಾದರೂ ಒಂದಿಷ್ಟು ನೀರು ಸಿಕ್ಕುವುದೇನೋ ಮಗುವು ಮೂರ್ಛೆ ಹೋಗುವ ಹಾಗೆ ಕಾಣುತ್ತೇ, ನನಗೂ ಕೂಡಾ ಬಹಳ ಬಾಯಾರುತ್ತಿದೆ.

ದಾರಾ-ಕೇವಲ ನಿಮಗೆ ಮಾತ್ರ ಹಾಗೆಂದು ತಿಳಿದೆಯಾ ನಾದಿರಾ, ನನಗಾವುದಿಲ್ಲವೇ? ಕೇವಲ ನಿಮ್ಮ ಸಂಕಟವನ್ನು ಹೇಳಿಕೊಳ್ಳುತ್ತಿರುವಿರಿ.

**ನಾದಿರಾ**-ನನಗೋಸ್ಕರ ಹೇಳುತ್ತಿಲ್ಲ ಪ್ರಾಣೇಶ್ವರ, ಈ ದಿಕ್ಕಿಲ್ಲದ ಮಕ್ಕಳಿಗೆ.........

**ದಾರಾ**-ನನ್ನ ಹೃದಯದಲ್ಲೂ ಭೀಷಣ ದಾಹ, ಸುಡುತ್ತಲಿರುವುದು. ಅದರ ಮೇಲೆ ಈ ಕಂದನ ಒಣಗಿದ ಗಂಟಲನ್ನು ನೋಡಿ-ನನಗೇನು ನಾದಿರಾ, ಪರಮ ಸುಖ ವೆಂದು ಕಂಡೆಯಾ? ಆದರೇನು ಮಾಡುವುದು? ಎಲ್ಲಿಯೂ ನೀರಿಲ್ಲ; ಒಂದು ಕ್ರೋಶದ ಸುತ್ತ ಎಲ್ಲಿ ನೋಡಿದರೂ ನೀರಿನ ಸುಳಿವಿಲ್ಲ. ಓ! ಈಶ್ವರ, ನನ್ನ ನ್ನೆಂತ ಪ್ರಸಂಗದಲ್ಲಿ ತಂದು ಹಾಕಿದೆ? ನಾನಿನ್ನು ಸಹಿಸಲಾರೆನು.

**ಸಿಪಾರಾ**-ಇನ್ನು ನನ್ನ ಕೈಲಾಗುವುದಿಲ್ಲ, ತಂದೆಯೇ.

**ನಾದಿರಾ**-ಅಯ್ಯೋ! ಕಂದ, ನಾನೂ ಸಾಯುವೆನು; ಇನ್ನು ನನ್ನಿಂದ ಸಹ್ಯವಿಲ್ಲ.

**ದಾರಾ**-ಸಾಯಿರಿ, ಅದು ಉತ್ತಮ; ನಾನೂ ಸಾಯುವೆನು. ಇಂದು ಈ ಸ್ಥಳದಲ್ಲಿ ನಮ್ಮೆಲ್ಲರ ಅವಸಾನವಾಗಿಹೋಗಲಿ.

**ಸಿಪಾರಾ**-ಅಮ್ಮ, ಗಂಟಲೊಣಗುತ್ತಿರುವುದು. ಒಂದು ತೊಟ್ಟು ನೀರೂ ಇಲ್ಲವೆ, ಅಮ್ಮ.

**ನಾದಿರಾ**-ಅಯ್ಯೋ! ಏನು ಗತಿ. (ಬೀಳುವಳು.)

**ದಾರಾ**-ಇಲ್ಲ; ಇನ್ನು ನೋಡುವುದಕ್ಕಾಗುವುದಿಲ್ಲ. ನಾನಿಂದು ಈಶ್ವರನ ಮೇಲೊಂದು ಘೋರಪಾಪದ ಹೊರೆಯನ್ನು ಹೊರಿಸುವೆನು. ಈ ಅಂತಃಸಾರಶೂನ್ಯವಾದ ದುಃಖಮಯವಾದ ಸೃಷ್ಟಿಯ ಕಠಿಣತೆಯು ಎಲ್ಲಿಯವರೆಗೂ ಹೋಗಬಲ್ಲು ದೆಂಬುದನ್ನು ನೋಡಿಬಿಡುವೆನು—ನಾನಿಂದು ಸಾಯುವೆನು; ಆದರೆ ಸಾಯುವ ಮೊದಲು ನನ್ನ ಕೈಯ್ಯಾರೆ ನಿಮ್ಮನ್ನು ಕೊಲ್ಲುವೆನು. ನಿಮ್ಮನ್ನು ಕೊಂದು ನಾನು ಸಾಯುವೆನು. (ಕಠಾರಿಯನ್ನು ಒರೆಗಳಚುವನು.)

**ಸಿಪಾರಾ**-(ಎದ್ದು) ಅಮ್ಮನನ್ನು ಹೊಡೆಯಬೇಡ; ನನ್ನನ್ನು ಹೊಡೆ.

**ನಾದಿರಾ**-ಇಲ್ಲ, ಇಲ್ಲ; ಮೊದಲು ನನ್ನನ್ನು ಹೊಡೆ. ನನ್ನ ಕಣ್ಣುಗಳ ಮುಂದೆ ನನ್ನ ಮಗುವನ್ನು ಕೊಲ್ಲುವೆಯಾ? ಮೊದಲು ನನ್ನನ್ನು ಹೊಡೆ.

**ಸಿಪಾರಾ**-ಬೇಡ; ನನ್ನನ್ನು ಮೊದಲು ಹೊಡೆಯಪ್ಪ.

**ದಾರಾ**-ಇದೇನು! ಈಶ್ವರ, ಮಧ್ಯೆ ಏನನ್ನು ತೋರುತ್ತಿರುವೆ? ಈ ಹೃದಯಭೇದಿ ಯಾದ ಕಾರ್ಗತ್ತಲೆಯಲ್ಲಿ ಈ ಆಲೋಕದ ಉಚ್ಛ್ವಾಸವೇಕೆ? ದಯಾಮ ಯನೇ, ನಿನ್ನ ಸೃಷ್ಟಿಯು ಒಮ್ಮೆಗೆ ಇಷ್ಟೊಂದು ಸುಂದರವೂ, ಇಷ್ಟೊಂದು ಕಠಿಣವೂ ಆಗಿರುವುದೆ! ಈ ತಾಯಿ ಮಕ್ಕಳು ಒಬ್ಬರನ್ನೊಬ್ಬರು ಉಳಿಸುವ

ಸಲುವಾಗಿ ಎಷ್ಟೊಂದು ಅಳುತ್ತಿರುವರು. ಆದರಾರಿಗೂ ಇಂದು ರಕ್ಷೆಯಿಲ್ಲ. ಇಷ್ಟೊಂದು ಪ್ರಬಲ ಹಾಗೂ ದುರ್ಬಲ, ಉಚ್ಚನೀಚಗಳೆಂಬ ವ್ಯತ್ಯಾಸವೇ ಇಲ್ಲ. ಆಕಾಶದ ಧೀಪ್ತಿಮಯವಾದ ಸುಂದರ ನಕ್ಷತ್ರವು ಮಣ್ಣು ಪಾಲಾದಂತೆ ಸ್ವರ್ಗವೂ, ನರಕವೂ ಒಮ್ಮೆಗೆ ಒಂದೇ ಆಸನದಲ್ಲಿ ! ದೇವರೇ, ಇದೇನು ನಿನ್ನ ಲೀಲೆ !

**ಸಿಪಾರ**-ಅಪ್ಪ; ಅಪ್ಪ-(ಮೂರ್ಛಿಸುವನು)

**ನಾದಿರಾ**-ಅಯ್ಯೋ ಮಗುವೇ, (ತೊಡೆಯಮೇಲೆ ಮಲಗಿಸಿಕೊಳ್ಳುವಳು)

**ದಾರಾ**-ಇದೊ ಮತ್ತೆ ನರಕ ! ಇಲ್ಲ, ಇಲ್ಲ; ಅದು ಕೇವಲ ಬೆಳಕಿನ ಭ್ರಾಂತಿ ಮಾತ್ರ; ಸೈತಾನನ ಮಾಯೆ, ಕುಹಕ. ಈ ಕಾರ್ಗತ್ತಲೆಯು ಎಷ್ಟೊಂದು ಪ್ರಗಾಢವಾ ದುದೆಂಬುದನ್ನು ತೋರುವ ಸಲವಾಗಿ ಕಾಣುವ ಕ್ಷಣಜೀವಿಯಾದ ಸೆಳೆಮಿಂಚು, ಮತ್ತೇನು ಅಲ್ಲ. ನಿಮ್ಮನ್ನು ಕೊಂದು ಬಳಿಕ ನಾನು ಸಾಯುವೆನು. (ಜಹರತಳ ಕಡೆ ನೋಡಿ) ಇವಳು ಮಲಗಿರುವಳು, ಹಾಗೆಯೇ ಕೊಲ್ಲುವೆನು; ಆಮೇಲೆ ನಿಮ್ಮ ಹೆಣಗಳನ್ನು ಅಪ್ಪಿಕೊಂಡು ನಾನೂ ಸಾಯುವೆನು. ಬನ್ನಿ ಒಬ್ಬೊಬ್ಬರಾಗಿ. (ನಾದಿರಳನ್ನು ಹೊಡೆಯಲು ಕೈಯೆತ್ತುವನು.)

**ಸಿಪಾರಾ**-ಹೊಡೆಯಬೇಡ; ಹೊಡೆಯಬೇಡ.

**ದಾರಾ**-(ಸಿಪಾರನನ್ನು ಒಂದು ಕೈಯಿಂದ ದೂರವಾಗಿ ನಿಲ್ಲಿಸಿಕೊಂಡು ಮತ್ತೆ ನಾದಿರಳನ್ನು ಹೊಡೆಯಲುದ್ಯುಕ್ತನಾಗುವನು.)

**ನಾದಿರಾ**-ಸಾಯುವ ಮೊದಲು ದೇವರನ್ನೊಮ್ಮೆ ಪ್ರಾರ್ಥಿಸಲು ಅವಕಾಶ ಕೊಡು.

**ದಾರಾ**-ಪ್ರಾರ್ಥನೆಯೆ? ಯಾರಲ್ಲಿ? ದೇವರಲ್ಲಿಯೆ? ದೇವರಿಲ್ಲ. ಎಲ್ಲವೂ ಸುಳ್ಳು, ಮೋಸ; ದೇವರಿಲ್ಲ. ಇರುವನೆಂದು ಯಾರು ಹೇಳಿದರು ? ಇರುವನೆ ? ಇರುವನೆ ? ಒಳ್ಳೇದು: ಹಾಗಾದರೊಮ್ಮೆ ಪ್ರಾರ್ಥನೆ ಮಾಡು.

**ನಾದಿರಾ**-ಬಾ ಮಗುವೇ, ಸಾಯುವ ಮೊದಲು ಒಮ್ಮೆ ಪ್ರಾರ್ಥನೆ ಮಾಡುವ.

(ಇಬ್ಬರೂ ಮೊಣಕಾಲೂರಿ ಕುಳಿತುಕೊಂಡು ಕಣ್ಣುಗಳನ್ನು ಮುಚ್ಚಿಕೊಂಡು ಪ್ರಾರ್ಥಿಸುವರು.)

**ನಾದಿರಾ**-ಹೇ! ಅಲ್ಲ; ಘೋರದುಃಖದಲ್ಲಿ ನಾನಿಂದು ನಿನ್ನನ್ನು ಕೂಗುತ್ತಿರುವೆನು. ಪ್ರಭು! ದುಃಖವನ್ನು ಕೊಟ್ಟಿರುವೆ, ಕೊಡು. ನೀನು ಕೊಟ್ಟುದನ್ನು ಪ್ರಸಾದ ವೆಂದು ತಲೆಯಲ್ಲಿ ಧರಿಸಿಕೊಳ್ಳುವೆನು. ಆದರೂ ಸಾಯುವ ಮೊದಲು ಈ

ನನ್ನ ಮಕ್ಕಳು, ನನ್ನ ಸ್ವಾಮಿ ಇವರು ಸುಖವಾಗಿರುವುದನ್ನು ನೋಡಿದರೆ ಸಂತೋಷದಿಂದ ಸಾಯುವೆನು.

**ದಾರಾ**-(ನೋಡುತ್ತಾ ತಾನೂ ಮೊಣಕಾಲೂರಿ ಕುಳಿತುಕೊಂಡು) ದೇವರೆ, ದಯಾಮಯ, ಸರ್ವಾಂತರ್ಯಾಮಿ, ಜಗದ್ರಕ್ಷಕ ನೀನು ಇರುವೆ; ನೀನಿಲ್ಲದೇ ಇದ್ದರೆ ಈ ವಿಶಾಲವಾದ ಜಗಚ್ಚಕ್ರವನ್ನು ನಡೆಸುವರಾರು? ಈ ತಾಯಿ ಮಕ್ಕಳಿಂಟ ಪವಿತ್ರ ಕುಸುಮಗಳೆರಡು ಪ್ರಫುಲ್ಲಿತವಾಗಿ ಈ ಮಮತಾಹೀನವಾದ ಶೂನ್ಯ ಜಗತ್ತನ್ನು ಬೆಳಗುವಂತೆ ಮಾಡಬಲ್ಲವರಾರು! ಈಶ್ವರ, ನಿನ್ನನ್ನು ಎಷ್ಟೋಬಾರಿ ಸ್ಮರಿಸಿರುವೆನು; ಆದರಿಂತ ದುಃಖದಲ್ಲಿ, ಇಷ್ಟೊಂದು ದೀನಭಾವದಿಂದ, ಇಷ್ಟೊಂದು ಕಾತರನಾಗಿ ಯಾವಾಗಲೂ ಕರೆದುದಿಲ್ಲ; ದಯಾಮಯನೆ ರಕ್ಷಿಸು.

(ದನ ಕಾಯುವವನೂ ಅವನ ಹೆಂಡತಿಯೂ ಪ್ರವೇಶಿಸುವರು )

**ಗೋರಕ್ಷಕ**-ನೀವು ಯಾರು?

**ದಾರಾ**-ಇದಾರ ದನಿ! (ಕಣ್ಣುಗಳನ್ನು ತೆರೆದು) ನೀವು ಯಾರು? ಸ್ವಲ್ಪ ನೀರು, ಸ್ವಲ್ಪ ನೀರು; ನನಗಲ್ಲ; ಈ ಹೆಂಗಸಿಗೂ ಮತ್ತು ಮಗುವಿಗೂ.

**ಅವನ ಹೆಂಡತಿ**-ಅಯ್ಯೋ ದುರ್ಭಾಗ್ಯರೇ, ನಾನು ನೀರು ತರುವೆನು; ಸ್ವಲ್ಪ ತಡೆಯಿರಪ್ಪ. (ಹೋಗುವಳು.)

**ಗೋರಕ್ಷಕ**-ಹುಡುಗನು ಮೂರ್ಛೆ ಹೋಗಿರುವನು.

**ದಾರಾ**-ಜಹರತ್, ಜಹರತ್.

**ಜಹರತ್**-(ಕ್ಷೀಣಸ್ವರದಿಂದ) ಏನಪ್ಪ?

(ದನ ಕಾಯುವವನ ಹೆಂಡತಿಯು ನೀರನ್ನು ತಂದು ಎಲ್ಲರಿಗೂ ಕುಡಿಸುವಳು.)

**ಹೆಂಡತಿ**-ಬನ್ನಿ ಅಪ್ಪ; ನಮ್ಮ ಮನೆಗೆ.

**ಗೋರಕ್ಷಕ**-ಹೌದಣ್ಣ, ನೀವೆಲ್ಲರೂ ಬನ್ನಿ.

**ದಾರಾ**-ಯಾರು ನೀವು? ಸ್ವರ್ಗದ ದೇವತೆಗಳೆ? ಈಶ್ವರನು ನಿಮ್ಮನ್ನು ಕಳುಹಿಸಿದನೆ?

**ಗೋರಕ್ಷಕ**-ಇಲ್ಲ ಅಣ್ಣ, ನಾನೊಬ್ಬ ಬಡವ; ಇವಳು ನನ್ನ ಹೆಂಡತಿ.

**ದಾರಾ**-ನಿಮಗಿಷ್ಟೊಂದು ದಯೆ! ಮನಷ್ಯರಿಗಿಷ್ಟೊಂದು ದಯೆ! ಅಸಂಭವ.

**ಗೋರಕ್ಷಕ**-ಏಕೆ ಅಣ್ಣ, ನೀವಾವಾಗಲೂ ಮನುಷ್ಯರನ್ನು ನೋಡಿಲ್ಲವೆ?

**ದಾರಾ**-ನೋಡಿರುವೆನು, ಆದರೆಲ್ಲರೂ ಸೈತಾನನ ಮಕ್ಕಳೆ.

**ಗೋರಕ್ಷಕ**-ಇದೆಲ್ಲ ಮನುಷರ ಕೆಲಸವಣ್ಣಾ. ದಿಕ್ಕಿಲ್ಲದವರಿಗೆ ನೆರಳು ಮಾಡಿಕೊಡೋದು; ಅನ್ನವಿಲ್ಲದವರ್ಗೆ ಅನ್ನ ಹಾಕೋದು: ಬಾಯಾರಿದವರ್ಗೆ ನೀರು ಕೊಡೋದು-ಇದೆಲ್ಲ ಮನುಷರ್ಕೆಲ್ಸವೇ ಅಣ್ಣಾ. ಸೈತಾನ್, ಪೀಡೆ, ಪಿಶಾಚಿಗಳಾದ್ರೆ ಮಾಡೋದಿಲ್ಲ. ಅವುಗಳ್ಗೂ ಒಂದೊಂದ್ಸಾರಿ ಮಾಡ್ಬೇಕೂಂತ ಆಸೆ ಆಗ್ತೈತೊ, ಏನೋಣ್ಣಾ. ಹೋಗ್ಲಿ, ಹೋಗೋಣ ಬಾಣ್ಣಾ. (ಹೋಗುವರು.)

## ನಾಲ್ಕನೆಯ ನೋಟ.

(ಸ್ಥಾನ—ಮಾಂಥ್ಯೈರಿನಲ್ಲಿ ದುರ್ಗಪ್ರಾಸಾದದ ಬಿಸಿಲು ಮಚ್ಚು,          ಕಾಲ—ಬೆಳದಿಂಗಳ ರಾತ್ರಿ.)
[ಪಿಯಾರಳು ತಿರುಗಾಡುತ್ತಾ ಹಾಡುತ್ತಿದ್ದಳು.]

ಸುಖದಸಾರವ ತಂದು ಕಟ್ಟಿದೀ ಮನೆಯಿಂದು |
ಅಕಟಕಟ ಬೆಂಕಿಯುಲಿ ಬೆಂದುದಾಯ್ತು ||
ಅಖಿಲರಲಿ ಬಲ್ಮೆಯಿಂ ಬಾಳ್ವೆನೆಂದಿರೆ ಛಿನ್ನ |
ಮುಕುಳದಂದದಿ ಜನ್ಮ ವ್ಯರ್ಥವಾಯ್ತು ||
ವಿಧಿಲಿಖಿತವೆಂತಿಹುದೊ ಸಖಿಯೇ |
ಅದನರಿತರಾರುಂಟು ಪೂರ್ಣೇಂದು ಮುಖಿಯೇ ||

(ಷೂಜನ ಪ್ರವೇಶ)

**ಷೂಜಾ**-ನೀನಿಲ್ಲಿರುವೆ! ನಾನೆಲ್ಲಾ ಕಡೆಯೂ ಹುಡುಕಿದೆನು.

(ಪಿಯಾರಳು ಹಾಡಿದಳು.)

ಅಮರಳಾಗುವೆನೆಂದು ಅಮೃತಪಾನವ ಮಾಡೆ |
ಅಮಮ ಹರಣವ ಕೊಂಬ ಗರಳವಾಯ್ತು ||

**ಷೂಜಾ**-ಆಮೇಲೆ ನಿನ್ನ ಸ್ವರವನ್ನು ಕೇಳಿ ಇಲ್ಲಿರುವೆ ಎಂದು ತಿಳಿದುಕೊಂಡೆನು.

(ಪಿಯಾರಳು ಹಾಡಿದಳು)

ಬೆಮಿಪ ಕೌಸ್ತುಭಮೆಂದು ಕೈನೀಡೆ ಕಾಳಹಿಯ |
ಯಮದಂಷ್ಟ್ರಾಘಾತಕ್ಕೆ ಸಿಕ್ಕಿದಾಯ್ತು ||

**ಷೂಜಾ**-ಮಾತಾಡುವುದಿಲ್ಲವೇ ಪಿಯಾರಾ?

(ಪಿಯಾರಳು ಹಾಡಿದಳು)

ನೀರನಿತ್ತಪುದೆಂದು ಮೇಘವನು ಬೊಳೆಹೊಗಲು |
ಘೋರ ವಜ್ರಾಹತಿಗೆ ಸಿಕ್ಕಿದಾಯ್ತು.

**ಷೂಜಾ**-ನಾನಿನ್ನು ಹೋಗುವೆನು.

(ಪಿಯಾರಳು ಹಾಡಿದಳು)

ಬಾರಿಬಾರಿಗೆ ರಂಗನೊಲುಮೆ ಸಂತಸವೆಂದು |
ಸಾರಿದಾ ಸ್ವಾಮಿಯ ನುಡಿ ಸತ್ಯವಾಯ್ತು||

**ಷೂಜಾ**-ಏನು ವ್ಯೆಯ್ಯುರಿಸುವೆ? ನಾನು ಪುನರ್ವಿವಾಹ ಮಾಡಿಕೊಳ್ಳಬೇಕಾಗು ವುದು-ಎರಡನೆಯ ಹೆಂಡತಿಯು ಸ್ವಾಮಿಯ ಚರಣತಲದಲ್ಲಿ ಕುಳಿತುಕೊಳ್ಳು ವಳು, ಮೊದಲನೇ ಹೆಂಡತಿಯೆಂದರೆ ಬಂದು ಮಾತಾಡುವುದಕ್ಕೂ ಇಷ್ಟೊಂದು ದರ್ಪ.

**ಪಿಯಾರಾ**-ನನ್ನ ಹಾಡನ್ನು ಕೆಡಿಸಿದಿರಿ. ಎರಡನೇ ಮದುವೆ ಮಾಡಿಕೊಳ್ಳದಿದ್ದ ಮಾತ್ರಕ್ಕೇ ನನ್ನನ್ನು ಇಷ್ಟುಗೋಳುಹೊಯ್ದುಕೊಳ್ಳುವುದೋ? ವ್ಯೆಯ್ಯುರಿಸು ವವರು ಯಾರು? ಹಗಲು ರಾತ್ರಿ ಯುದ್ಧದ ಮಾತನ್ನೇ ಕೇಳುತ್ತಿರಬೇಕು; ಯಾರ ಕೈಲಾಗುವುದು?

**ಷೂಜಾ**-ಇಲ್ಲ ಪಿಯಾರಾ, ಒಂದು ಅವಶ್ಯಕವಾದ ವಿಷಯದಲ್ಲಿ ನಿನ್ನ ಪರಾಮರ್ಶೆ ಯನ್ನು ತೆಗೆದುಕೊಳ್ಳಲು ಬಂದೆನು.

**ಪಿಯಾರಾ**-ಹಾಗಿದ್ದರೆ ಕುಳಿತುಕೊ; ನಾನಿನ್ನೂ ಕೇಳಲು ಸಿದ್ಧಳಾಗಿಲ್ಲ. (ಚಹರೆ ಮತ್ತು ಪೋಷಾಕನ್ನು ಸರಿಮಾಡಿಕೊಂಡು.) ಕುಳಿತುಕೊಳ್ಳುವುದಕ್ಕೊಂದು ಸರಿಯಾದ ಆಸನವೂ ಇಲ್ಲ, ಹೋಗಲಿ. ನಿಂತುಕೊಂಡೇ ಕೇಳುವೆನು, ಹೇಳು; ನಾನು ಪ್ರಸ್ತುತಳಾಗಿರುವೆನು.

**ಷೂಜಾ**-ನನಗೆ ತಂದೆಯು ಮೃತನಾಗಿರುವನೆಂದು ತೋರುವುದು.

**ಪಿಯಾರಾ**-ನನಗೂ ಹಾಗೆಯೇ ತೋರುವುದು.

**ಷೂಜಾ**-ಜಯಸಿಂಹನು, ಸಮ್ರಾಟನು ಬರೆದುದೆಂದು ತೋರಿಸಿದ ಪತ್ರವು ದಾರನ ತಂತ್ರವಾಗಿರಬೇಕು.

**ಪಿಯಾರಾ**—ನಿಶ್ಚಯವಾಗಿ?—

**ಷೂಜಾ**-ನೀನದನ್ನು ಒಪ್ಪಿಕೊಳ್ಳುವೆ?

**ಪಿಯಾರಾ**-ನಾನಾವುದನ್ನೂ ಒಪ್ಪಿಕೊಳ್ಳುವುದಿಲ್ಲ; ಮುಂದೆ ಹೇಳು.

**ಷೂಜಾ**-ಎರಡನೆಸಾರಿಯ ಯುದ್ಧದಲ್ಲೂ ದಾರನಿಗೆ ಔರಂಗಜೇಬನಿಂದ ಪರಾಜಯ, ಕೇಳಿದೆಯಾ?

ಪಿಯಾರಾ-ಕೇಳಿದೆನು.

ಷೂಜಾ-ಯಾವಾಗ, ಯಾರು ಹೇಳಿದರು?

ಪಿಯಾರಾ-ಈಗ, ನೀನು.

ಷೂಜಾ-ದಾರನು ಆಗ್ರದಿಂದ ಓಡಿಹೋದನು. ಔರಂಗಜೇಬನು ವಿಜಯ ಗೌರವ ದಿಂದ ಆಗ್ರಾವನ್ನು ಪ್ರವೇಶಿಸಿ ತಂದೆಯನ್ನು ಸೆರೆಹಿಡಿದಿರುವನು; ಮೂರಾದ ನನ್ನು ಬಂಧನದಲ್ಲಿ ಹಾಕಿರುವನು.

ಪಿಯಾರಾ-ಸರಿ.

ಷೂಜಾ-ಇನ್ನು ಔರಂಗಜೇಬನು ನನ್ನ ಮೇಲೆ ಯುದ್ಧಕ್ಕೆ ಬರುವನು.

ಪಿಯಾರಾ-ಅದು ಸಂಭವ.

ಷೂಜಾ-ಔರಂಗಜೇಬನಿಗೂ ನನಗೂ ಯುದ್ಧವಾದರೆ ಒಂದು ಒಳ್ಳೇ ದೊಡ್ಡ ಯುದ್ಧವೇ ಆಗುವುದು. ಅದಕ್ಕೋಸ್ಕರ ನಾನು ಈಗಿನಿಂದ ಸಿದ್ಧನಾಗಿರಬೇಕು, ಏಕೆಂದರೆ.........

ಪಿಯಾರಾ-ಹೌದು; ಈಗಿನಿಂದ ಸಿದ್ಧವಾಗಿರಬೇಕು. ಏಕೆಂದರೆ.........

ಷೂಜಾ-ನಿನ್ನ ಮಾತುಗಳೊಂದೂ ಗೊತ್ತಾಗುವುದಿಲ್ಲ.

ಪಿಯಾರಾ-ಸರಿಯಾಗಿ ಹೇಳಿದೆ; ನಿನ್ನ ಮಾತುಗಳೊಂದೂ ನನಗೆ ಗೊತ್ತಾಗುವುದಿಲ್ಲ.

ಷೂಜಾ-ನಿನ್ನ ಪರಾಮರ್ಶೆಯನ್ನು ಕೇಳುವುದು ವ್ಯರ್ಥ. ಯುದ್ಧದ ವಿಷಯ ನಿನ ಗೇನು ಗೊತ್ತಾಗುವುದು?

ಪಿಯಾರಾ-ನನಗೆ ಹೇಗೆ ಗೊತ್ತಾಗಬೇಕು?

ಷೂಜಾ-ಆದರೆ, ಸದ್ಯಕ್ಕೆ ಇನ್ನೊಂದು ತೊಂದರೆಯು ಸಂಘಟಿಸಿದೆ.

ಪಿಯಾರಾ-ಮತ್ತೇನು ತೊಂದರೆ?

ಷೂಜಾ-ಮಹಮದನು ನಮ್ಮ ಪುತ್ರಿಯನ್ನು ವಿವಾಹವಾಗುವುದಿಲ್ಲವೆಂದು ಸ್ಪಷ್ಟವಾಗಿ ಪತ್ರ ಬರೆದಿರುವನು.

ಪಿಯಾರಾ-ಅದಕ್ಕೇನು ಮಾಡುವುದು?

ಷೂಜಾ-ನಮ್ಮ ತಂದೆಯ ಶತ್ರುವಿನ ಮಗಳನ್ನು ಮದುವೆಯಾಗುವುದಿಲ್ಲವೆಂದು ಬರೆದಿರುವನು.

ಪಿಯಾರಾ-ನಿಶ್ಚಯವಾಗಿ; ಮುಂದೇನು ಮಾಡುವುದು?

**ಷೂಜಾ**-ಈ ಸುದ್ದಿಯನ್ನು ಕೇಳಿದರೆ ನಮ್ಮ ಹುಡುಗಿಯೂ ದುಃಖಿತಳಾಗುವಳು. ಏನುಮಾಡುವಳೋ, ನನಗೇನೂ ತೋರವಲ್ಲದು.

**ಪಿಯಾರಾ**-ನನಗೂ ತೋರವಲ್ಲದು.

**ಷೂಜಾ**-ನಿನ್ನ ಹತ್ತಿರ ಯಾವ ವಿಷಯದಲ್ಲಿ ಉಪದೇಶವನ್ನು ಕೇಳುವುದೂ ವ್ಯರ್ಥ.

**ಪಿಯಾರಾ**-ಇಷ್ಟು ಹೊತ್ತಿನಮೇಲೆ ಅದನ್ನು ತಿಳಿದುಕೊಂಡಿಯಲ್ಲವೆ? ಎಷ್ಟೊಂದು ಬುದ್ಧಿ ನಿನ್ನದು?

**ಷೂಜಾ**-ಈಗೇನು ಮಾಡುವದು? ಔರಂಗಜೀಬನ ಸಂಗಡ ಯುದ್ಧ, ಆತನ ಸಂಗಡ ಜೀವನ ವೀರಪುತ್ರ ಮಹಮುದ್. ದೊಡ್ಡ ಸಮಸ್ಯೆಯ ಮಾತು; ನಿನ್ನ ಉಪದೇಶ ವೇನು?

**ಪಿಯಾರಾ**-ಪ್ರಿಯತಮ, ನನ್ನ ಉಪದೇಶವನ್ನು ಕೇಳುವಿಯಾ? ಕೇಳುವಿಯಾದರೆ ಹೇಳುವೆನು.

**ಷೂಜಾ**- ಕೇಳುವೆನು.

**ಪಿಯಾರಾ**-ಹಾಗಾದರೆ ಕೇಳು. ನನ್ನ ಉಪದೇಶವು: ಯುದ್ಧವು ಯುಕ್ತವಲ್ಲ.

**ಷೂಜಾ**-ಯಾಕೆ?

**ಪಿಯಾರಾ**-ಸಾಂಮ್ರಾಜ್ಯದಿಂದೇನಾಗುವುದು ಪ್ರಾಣೇಶ್ವರ, ನಮಗೆ ಯಾವುದರ ಅಭಾವ? ಕಣ್ತೆತ್ತಿನೋಡು — ಸಸ್ಯಶ್ಯಾಮಲೆ ಪುಷ್ಪವಿಭೂಷಿತೆಯಾದ, ಸಹಸ್ರ ನಿರ್ಝರಝಂಕಾರಿಣಿಯಾದ ಈ ವಂಗಭೂಮಿ— ಈ ಸಾಂಮ್ರಾಜ್ಯವು ಸಾಲದೆ? ಈ ನನ್ನ ಹೃದಯ ಸಿಂಹಾಸನದಲ್ಲಿ ನಿನ್ನನ್ನು ಕುಳ್ಳಿರಿಸಿಕೊಂಡಿರುವೆನು. ಇದರ ಸಂಮುಖದಲ್ಲಿ ಆ ಮಯೂರ ಸಿಂಹಾಸನವೇ? ನಾವಿಬ್ಬರೂ ಈ ಸೌಧ ಶಿಖರದಲ್ಲಿ ಕೈಯಲ್ಲಿ ಕೈ, ವಕ್ಷದಲ್ಲಿ ವಕ್ಷವನ್ನಿಟ್ಟು ನಿಂತುಕೊಂಡು —ಪಕ್ಷಿ ಗಳ ಕಲರವವನ್ನು ಕೇಳುತ್ತಾ, ಈ ಜಾಹ್ನವಿಯ ದಿಗಂತ ಪ್ರಸಾರಿತ ಧೂಸರ ವಕ್ಷವನ್ನು ನೋಡುತ್ತಾ, ಈ ಅನಂತ ನೀಲಾಕಾಶದಲ್ಲಿ ನಮ್ಮ ಮಿಳಿತ ಮುಗ್ಧ ದೃಷ್ಟಿಯೆಂಬ ನಾವೆಯನ್ನು ತೇಲಿಬಿಟ್ಟುಕೊಂಡು ಹೊರಟು ಹೋಗುವ; ಮತ್ತು ಆ ನೀಲಾಕಾಶದ ಗಭೀರ ನೀಲಿಮೆಯ ಒಂದು ನಿಭೃತ ಪ್ರದೇಶದಲ್ಲಿ ಕಲ್ಪನೆ ಯಿಂದ ಬಂದು ಮೋಹಮಯ ಶಾಂತಿಯ ದ್ವೀಪವನ್ನು ಸೃಷ್ಟಿಸಿ, ಅದರ ಮಧ್ಯದಲ್ಲೊಂದು ಸ್ವಪ್ನಮಯವಾದ ಕುಂಜದಲ್ಲಿ ಕುಳಿತುಕೊಂಡು ಒಬ್ಬರ ಪ್ರಾಣವನ್ನೊಬ್ಬರು ಪಾನಮಾಡುವ; ಆಗ ಬೋಧೆಯಾಗುವುದಿಲ್ಲವೇ ಸೌಧ,

ಈಸಾಮ್ರಾಜ್ಯವು ಯಾತಕ್ಕೆಂದು ಪ್ರಿಯತಮ ಯುದ್ಧವು ಕರ್ತವ್ಯವಲ್ಲ. ನಮ್ಮ ದಲ್ಲದುದನ್ನು ಅಪೇಕ್ಷಿಸಿದರೆ ಹೊಂದಲಾರೆವು; ಇರುವುದನ್ನೂ ಕಳೆದು ಕೊಳ್ಳುವೆವು.

**ಷೂಜಾ**-ಇದೆಯೋ ನಿನ್ನ ಪರಾಮರ್ಶೆ. ದಾರನ ಪ್ರಭುತ್ವಕ್ಕೆ ಸಮ್ಮತಿಸಲಾರೆನೆಂದು ಚಿಂತಿಸುತ್ತಿದ್ದೆನು. ಅದರಮೇಲೀ ವಜ್ರಾಘಾತ! ಇಲ್ಲ, ಇಲ್ಲ; ಔರಂಗಜೀಬನ-ನನ್ನ ಕನಿಷ್ಠ ಸೋದರನ ಪ್ರಭುತ್ವವನ್ನು ನಾನೆಂದಿಗೂ ಸ್ವೀಕರಿಸತಕ್ಕವನಲ್ಲ; ಎಂದಿಗೂ ಇಲ್ಲ. (ಹೋಗುವನು.)

**ಪಿಯಾರಾ**-ನಿನಗೆ ಉಪದೇಶವನ್ನು ಕೊಡುವುದುವ್ಯರ್ಥ. ನೀನು ವೀರ; ಸಾಮ್ರಾಜ್ಯ ಕ್ಕೋಸುಗ ಯುದ್ಧಮಾಡದೆ ಹೋದರೆ, ಯುದ್ಧದ ಸಲವಾಗಿಯಾದರೂ ನೀನು ಯುದ್ಧಮಾಡುವೆ. ನಿನ್ನನ್ನು ಚನ್ನಾಗಿ ಬಲ್ಲೆನು; ಯುದ್ಧದ ಮಾತೆತ್ತಿದರೆ ನೀನು ಕುಣಿಯುವೆ.

## ಐದನೆಯ ನೋಟ.

[ಕಾಲ—ಬೆಳಿಗ್ಗೆ. ಸ್ಥಾನ—ದಿಲ್ಲಿಯಲ್ಲಿ ರಾಜಾಸ್ಥಾನ.]

(ಔರಂಗಜೀಬನು ಸಿಂಹಾಸನಾರೂಢನಾಗಿರುವನು; ಪಾರ್ಶ್ವದಲ್ಲಿ ಮೀರಜುಮ್ಲಾ, ಶಯಸ್ತಾಖಾನ್ ಇತ್ಯಾದಿ ಸೇನಾಧ್ಯಕ್ಷರು, ಮಂತ್ರಿಗಳು, ಜಯಸಿಂಹ ಮತ್ತು ದೇರಕ್ಷಿಗಳು; ಎದುರ್ಗಿಗೆ ಯಶೋವಂತಸಿಂಹ)

**ಯಶೋವಂತ**-ಜಹಾಪನಾ, ಸುಲ್ತಾನ್‌ಷೂಜನ ವಿರುದ್ಧವಾಗಿ ರಣರಂಗದಲ್ಲಿ ನಿಮಗೆ ಸಹಾಯಮಾಡಲು ಸೈನ್ಯಸಮೇತನಾಗಿ ಬಂದೆನು. ಪರಂತು ಈಗ ನೋಡು ವಲ್ಲಿ ನನಗಾ ಇಷ್ಟವಿಲ್ಲ. ನಾನು ಇಂದೇ ಜೋದ್‌ಪುರಕ್ಕೆ ಹಿಂದಿರುಗುವೆನು.

**ಔರಂಗಜೀಬ**-ಮಹಾರಾಜ ಯಶೋವಂತಸಿಂಹರೇ, ನೀವು ನರ್ಮದಾ ಯುದ್ಧದಲ್ಲಿ ದಾರನ ಪಕ್ಷವನ್ನು ವಹಿಸಿದಮಾತ್ರಕ್ಕೇ ನನಗೆ ಅಪ್ರೀತಿಭಾಜನರಲ್ಲ. ಮಹಾ ರಾಜರ ರಾಜಭಕ್ತಿಯ ನಿದರ್ಶನವನ್ನು ಕಂಡು ಮಹಾರಾಜರನ್ನು ನನ್ನ ಆತ್ಮೀ ಯರಲ್ಲಿ ಪರಿಗಣಿಸುವೆನು.

**ಯಶೋವಂತ**-ಯಶೋವಂತಸಿಂಹನು ಜಹಪನಾವಿಗೆ ಅಪ್ರೀತಿಭಾಜನನಾಗಲಿ, ಪ್ರೀತಿಭಾಜನನಾಗಲಿ ಅದರಿಂದವನಿಗೆ ಆಗಬೇಕಾದ್ದೇನೂ ಇಲ್ಲ. ಹಾಗೂ ಇಂದು ನಾನೀ ಸಭೆಗೆ ಜಹಪನಾವಿನ ಕೃಪೆಯನ್ನು ಬೇಡಲು ಬಂದವನಲ್ಲ.

**ಔರಂಗಜೇಬ**-ಹಾಗಾದರೆ ಇಲ್ಲಿಗೆ ಬರಲು ಮಹಾರಾಜರ ಉದ್ದೇಶವೇನು?

**ಯಶೋವಂತ**-ಉದ್ದೇಶವು ತಮ್ಮನ್ನೊಂದುಬಾರಿ ಕೇಳುವುದು: 'ಯಾವ ಅಪರಾಧ ಕ್ಕೋಸುಗ ನಮ್ಮ ದಯಾಳು ಸಮ್ರಾಟ್ ಷಾಜಹಾನನು ಇಂದು ಖೈದಿ; ಹಾಗೂ ಯಾವ ಸ್ವತ್ವದಿಂದ ತಂದೆಯು ಜೀವಿಸಿರಲಾಗಿ ನೀವು ಸಿಂಹಾಸನ ವನ್ನೇರುವಿರಿ' ಎಂದು.

**ಔರಂಗಜೇಬ**-ಅದಕ್ಕೆ ಉತ್ತರವನ್ನು ನಾನಿಂದು ಮಹಾರಾಜರಿಗೆ ಕೊಡಬೇಕಾಗಿ ರುವುದೊ?

**ಯಶೋವಂತ**-ಕೊಡುವುದೂ ಕೊಡದಿರುವುದೂ ನಿಮ್ಮ ಇಷ್ಟ; ನಾನು ಬಂದುದು ಕೇಳುವುದಕ್ಕೆ ಮಾತ್ರ.

**ಔರಂಗಜೇಬ**-ಅದರ ಉದ್ದೇಶವೇನು?

**ಯಶೋವಂತ**-ಜಹಪನಾವಿನ ಉತ್ತರದಮೇಲೆ ನನ್ನ ಮುಂದಿನ ಕಾರ್ಯಕ್ರಮವನ್ನು ನಿಶ್ಚಯಿಸುವ ಸಲುವಾಗಿ.

**ಔರಂಗಜೇಬ**-ಆಯಿತು; ಒಂದುವೇಳೆ ನಾನು ಉತ್ತರವನ್ನು ಕೊಡದೆಹೋದರೆ?

**ಯಶೋವಂತ**-ಆಗ ಜಹಪನಾಯವರು ಕೊಡಲು ಯೋಗ್ಯವಾದ ಉತ್ತರವಾವುದೂ ಇಲ್ಲವೆಂದು ತಿಳಿದುಕೊಳ್ಳುವೆನು.

**ಔರಂಗಜೇಬ**-ನಿಮ್ಮ ಮನಬಂದಂತೆ ತಿಳಿದುಕೊಳ್ಳಬಹುದು; ಅದರಿಂದ ಔರಂಗ ಜೇಬನಿಗೆ ಆಗಬೇಕಾದ್ದೇನೂ ಇಲ್ಲ. ಔರಂಗಜೇಬನು ತನ್ನ ಕಾರ್ಯಕಲ್ಪಾಪಗಳ ಸಲುವಾಗಿ ಒಬ್ಬ ಖುದಾವಿನ ಸಂಮುಖದಲ್ಲಿ ಹೊರತು ಮತ್ತಾರಿಗೂ ಉತ್ತರ ವಾದಿಯಲ್ಲ.

**ಯಶೋವಂತ**-ಒಳ್ಳೆಯದು; ಹಾಗಾದರೆ ಖುದಾವಿನ ಸಂಮುಖದಲ್ಲೇ ಉತ್ತರ ಕೊಡುವರಾಗಿ. (ಹೊರಡುವನು.)

**ಔರಂಗಜೇಬ**-ನಿಲ್ಲು ಮಹಾರಾಜ, ನನ್ನ ಉತ್ತರವನ್ನು ಹೊಂದದ ಪಕ್ಷದಲ್ಲಿ ನೀವೇನು ಮಾಡುವಿರಿ?

**ಯಶೋವಂತ**-ಸಮ್ರಾಟ್ ಷಾಜಹಾನನನ್ನು ವಿಮುಕ್ತನನ್ನಾಗಿ ಮಾಡಲು ಕೈಲಾದ ಷ್ಟು ಪ್ರಯತ್ನಮಾಡುವೆನು. ಅದು ನನಗೆ ಸಾಧ್ಯವೋ ಇಲ್ಲವೋ ಬೇರೆಮಾತು. ಪರಂತು ನನ್ನ ಕರ್ತವ್ಯವನ್ನು ನಾನು ಮಾಡುವೆನು.

**ಔರಂಗಜೀಬ**-ವಿದ್ರೋಹ ಮಾಡುವಿರಾ?

**ಯಶೋವಂತ**-ವಿದ್ರೋಹ ಸಮ್ರಾಟನ ಪರವಾಗಿ ಯುದ್ಧ ಮಾಡುವುದರ ಹೆಸರು ವಿದ್ರೋಹವಲ್ಲ. ವಿದ್ರೋಹವನ್ನು ಮಾಡುತ್ತಿರುವವರು ನೀವು; ನಾನಾ ವಿದ್ರೋಹಿಗಳನ್ನು ಶಾಸನಮಾಡುವೆನು. ಮಾಡಬಲ್ಲೆನಾದರೆ ?-—

**ಔರಂಗಜೀಬ**-ಮಹಾರಾಜಾ, ಈವರೆಗೂ ಪರೀಕ್ಷೆ ಮಾಡುತ್ತಿದ್ದೆನು. ನಿಮ್ಮ ಸ್ಪರ್ಧೆಯು ಎಲ್ಲಿಯವರೆಗೂ ಹತ್ತುವುದೆಂದು ಹಿಂದೆ ಕೇಳಿದ್ದೆನು; ಈಗ ನೋಡಿದೆನು. ನೀವು ನಿರ್ಭೀತರು ಮಹಾರಾಜ, ಭಾರತ ಸಮ್ರಾಟ್ ಔರಂಗಜೀಬನು ಯೋಧಪುರಾಧಿಪತಿ ಯಶೋವಂತಸಿಂಹನ ಶತ್ರುತ್ವಕ್ಕೆ ಹೆದರತಕ್ಕವನಲ್ಲ. ಸಮರಕ್ಷೇತ್ರದಲ್ಲಿ ಮತ್ತೊಮ್ಮೆ ಔರಂಗಜೀಬನ ಪರಿಚಯವನ್ನು ಇಚ್ಛಿಸುವಿರಲ್ಲವೆ? ಹೊಂದುವಿರಿ. ನರ್ಮದಾ ಯುದ್ಧದಲ್ಲಿ ಔರಂಗಜೀಬನ ಪರಿಚಯವು ಮಹಾರಾಜರಿಗೆ ಚನ್ನಾಗಿ ದೊರೆಯಲಿಲ್ಲವೆಂದು ತೋರುವುದು.

**ಯಶೋವಂತ**-ನರ್ಮದಾ ಯುದ್ಧವೇ ಜಹಪನಾ, ನೀವದನ್ನು ಜಯವೆಂದು ಗೌರವಿಸುವಿರಾ? ಯಶೋವಂತಸಿಂಹನು ಅನುಕಂಪದಿಂದ ಪಥಶ್ರಾಂತರಾದ ಹೀನಬಲರಾದ ನಿಮ್ಮ ಸೈನಿಕರನ್ನು ಆಕ್ರಮಣ ಮಾಡಲಿಲ್ಲ. ಇಲ್ಲದಿದ್ದ ಪಕ್ಷದಲ್ಲಿ ನನ್ನ ಸೈನ್ಯದ ಒಂದು ಅಲ್ಪ ನಿಶ್ವಾಸದಿಂದ ಔರಂಗಜೀಬನು ಸಸೈನ್ಯನಾಗಿ ಹಾರಿಹೋಗುತಿದ್ದನು. ಅಷ್ಟೊಂದು ಅನುಕಂಪಕ್ಕೆ ವಿನಿಮಯವಾಗಿ ಔರಂಗಜೀಬನು ಘಾತುಕತನವನ್ನು ಮಾಡುವನೆಂದು ಯಶೋವಂತಸಿಂಹನು ತಿಳಿಯಲಿಲ್ಲ. ಅದೇ ಅವನ ಅಪರಾಧ! ಅದಕ್ಕೆ ಜಯದ ಗೌರವವೇ ಜಹಪನಾ?

**ಔರಂಗಜೀಬ**-ಮಹಾರಾಜ ಯಶೋವಂತಸಿಂಹ, ಸಾವಧಾನ; ಔರಂಗಜೀಬನ ಸಹನಕ್ಕೂ ಎಲ್ಲೆಯಿರುವುದು! ಸಾವಧಾನ!!

**ಯಶೋವಂತ**-ಸಮ್ರಾಟ್, ಯಾರಮೇಲೆ ಕಣ್ಣುಗಳನ್ನು ಕೆಂಪೇರಿಸುತ್ತಿರುವಿರಿ ? ಕಣ್ಣುಗಳನ್ನು ಕೆಂಪೇರಿಸಿ ಜಯಸಿಂಹನಂತ ವ್ಯಕ್ತಿಯನ್ನು ಆಳುವುದು ಸಾಧ್ಯ. ಯಶೋವಂತಸಿಂಹನ ಪ್ರಕೃತಿಯು ಬೇರೆ ವಿಧವಾದ ಧಾತುವಿನಿಂದ ಘಟಿತವಾದುದು—ಕಂಡಿರಾ! ಯಶೋವಂತಸಿಂಹನು ಔರಂಗಜೀಬನ ರಕ್ತವರ್ಣದ ಕಣ್ಣುಗಳನ್ನೂ, ಅಗ್ನಿಮಯವಾದ ಫಿರಂಗಿಯ ಗುಂಡನ್ನೂ ಸಮನಾದ ತುಚ್ಛಭಾವದಿಂದ ನೋಡುವನು.

**ಮೀರಜುಮ್ಲಾ**-ಮಹಾರಾಜ್, ಇದೆಂತ ಸ್ಪರ್ಧೆ?

**ಯಶೋವಂತ**-ಸುಮ್ಮನಿರು ಮೀರಜುಮ್ಲಾ, ರಾಜ-ರಾಜರ ಯುದ್ಧದಲ್ಲಿ ವನ್ಯಶೃಗಾಲವು ಮಧ್ಯೆ ಬರಬೇಕೆ? ನಾವಿನ್ನೂ ಮೃತವಾಗಿಲ್ಲ. ನಿಮ್ಮ ಸಮಯವು ಯುದ್ಧದ ಅನಂತರದಲ್ಲಿ. ನೀನು ಮತ್ತು ಈ ಷೈಸ್ತಾಖಾನ್——

(ಷೈಸ್ತಾಖಾನ್ ಮತ್ತು ಮೀರಜುಮ್ಲಾ ಕತ್ತಿಯನ್ನು ಒರೆಗಳಚಿ ಹೇಳುವರು) 'ಸುಮ್ಮನಿರು ಕಾಫರ.'

**ಷೈಸ್ತಾಖಾನ್**-ಆಜ್ಞೆಮಾಡಿರಿ ಜಹಾಪನಾ.

(ಔರಂಗಜೀಬನು ಇಂಗಿತದಿಂದ ನಿಷೇಧಿಸುವನು.)

**ಯಶೋವಂತ**-ಒಳ್ಳೆಯ ಜೋಡಿ ಸೇರಿರುವುದು. ಮೀರಜುಮ್ಲಾ ಮತ್ತು ಷೈಸ್ತಾಖಾನ್; ವಜೀರ್ ಮತ್ತು ಸೇನಾಪತಿ. ಇಬ್ಬರೂ ವಿಶ್ವಾಸ ಘಾತಕರು. ಎಂತಹ ಪ್ರಭುವೋ ಅಂತಹ ಭೃತ್ಯರು.

**ಷೈಸ್ತಾಖಾನ್**-ಈ ಕಾಫರನಿಗೆ ಎಷ್ಟೊಂದು ಅಸ್ಪರ್ಧೆ ಜಹಾಪನಾ, ಸ್ವಯಂ ಭಾರತ ಸಮ್ರಾಟನ ಸಂಮುಖದಲ್ಲಿ.

**ಯಶೋವಂತ**-ಯಾರು ಭಾರತ ಸಮ್ರಾಟನು?

**ಷೈಸ್ತಾಖಾನ್**-ಭಾರತ ಸಮ್ರಾಟನು ಪಾದಷಾಸಾಜೀ ಅಲಂಗೀರ್.

(ಅವಕುಂಠಿತಳಾದ ಜಹನಾರಳ ಪ್ರವೇಶ.)

**ಜಹನಾರಾ**-ಸುಳ್ಳುಮಾತು; ಭಾರತಸಮ್ರಾಟನು ಔರಂಗಜೀಬನಲ್ಲ, ಭಾರತ ಸಮ್ರಾಟನು ಸಾಹಾನ್‌ಸಾಹಾ ಷಾಜಹಾನ್.

**ಮೀರಜುಮ್ಲಾ**-ಯಾರೀ ಹೆಂಗಸು?

**ಜಹನಾರಾ**-ಯಾರೀ ಹೆಂಗಸು? ಈ ಹೆಂಗಸು ಸಮ್ರಾಟ್ ಷಾಜಹಾನನ ಮಗಳು. (ಅವಕುಂಠವನ್ನು ತೆಗೆದು) ಏನು ಔರಂಗಜೀಬ ಒಮ್ಮಿಂದೊಮ್ಮೆ ನಿನ್ನಮುಖವು ಇಷ್ಟೊಂದು ಬಿಳುಪೇರಿತೇಕೆ?

**ಔರಂಗಜೀಬ**-ನೀನಿಲ್ಲೇಕೆ ಬಂದೆ ತಂಗಿ?

**ಜಹನಾರಾ**-ನೀನಿಲ್ಲೇಕೆ ಬಂದೆ-ಈ ಪ್ರಶ್ನೆಯನ್ನು ಇಂದು ಈ ಸಿಂಹಾಸನದ ಮೇಲೆ ಧೀರಭಾವದಿಂದ ಕುಳಿತುಕೊಂಡು, ಮಾನುಷ ಸ್ವರದಿಂದ ಕೇಳುತ್ತಿರುವೆಯಲ್ಲವೆ ಔರಂಗಜೀಬ? ನಾನಿಲ್ಲಿಗೆ ಬಂದೆನು—ನಿನ್ನಮೇಲೆ ರಾಜದ್ರೋಹದ ಗುರುತರ ಅಭಿಯೋಗವನ್ನು ಮಾಡುವ ಸಲುವಾಗಿ.

**ಔರಂಗಜೀಬ**-ಯಾರಲ್ಲಿ ?

**ಜಹನಾರಾ**--ದೇವರಲ್ಲಿ! ದೇವರಿಲ್ಲವೆಂದು ತಿಳಿದೆಯಾ, ಔರಂಗಜೀಬ? ಸೈತಾನನ ಸೇವೆಯನ್ನು ಮಾಡುತ್ತಾ ದೇವರಿಲ್ಲವೆಂದು ತಿಳಿದೆಯಾ? ಇರುವನು.

**ಔರಂಗಜೀಬ**-ನಾನಿಲ್ಲಿ ಕುಳಿತುಕೊಂಡು ಆ ಖುದಾವಿನ ಸೇವೆಯನ್ನೇ ಮಾಡುತ್ತಿರುವೆನು.

**ಜಹನಾರಾ**--ಸಮ್ಮನಾಗು, ಧೂರ್ತ! ಅಲ್ಲಾವಿನ ಪವಿತ್ರವಾದ ಹೆಸರನ್ನು ನಿನ್ನ ನಾಲಿಗೆಯಿಂದ ಉಚ್ಚರಿಸಬೇಡ; ನಾಲಿಗೆಯು ಬಿದ್ದುಹೋದೀತು. ಎಲೈ ಭೂಕಂಪವೇ, ಜಲೋಚ್ಛ್ವಾಸವೇ, ಅಗ್ನಿಪರ್ವತಗಳೇ, ನಿಮ್ಮ ದುರ್ಭರ ಉತ್ಪಾತಗಳಿಂದ ಲಕ್ಷಾವಧಿ ನಿರೀಹ ನರನಾರಿಯರನ್ನು ಅನಾಥರನ್ನಾಗಿ ಮಾಡಿ ಸುಟ್ಟು ನೆಟ್ಟು ಕಂಗೆಡಿಸಿ ಹೋಗುವಿರಿ. ಆದರೀಧೂರ್ತನನ್ನು ಏನೂ ಮಾಡಲಾರಿರಲ್ಲವೆ!

**ಔರಂಗಜೀಬ**-ಮಹಮುದ್, ಈ ಉನ್ಮತ್ತಳಾದ ಹೆಂಗುಸನ್ನು ಇಲ್ಲಿಂದ ಕರೆದುಕೊಂಡು ಹೋಗು. ಇದು ರಾಜಸಭೆ; ಉನ್ಮಾದಾಗಾರವಲ್ಲ.

**ಜಹನಾರಾ**-ನೋಡುವ! ಸಮ್ರಾಟ ಷಾಜಹಾನನ ಪುತ್ರಿಯನ್ನು ಮುಟ್ಟಲು ಈ ರಾಜಸಭೆಯಲ್ಲಾರಿಗೆ ಸಾಧ್ಯವೆಂದು? ಅವನು ಔರಂಗಜೀಬನ ಪುತ್ರನೇ ಆಗಲಿ, ಸ್ವಯಂ ಸೈತಾನನೇ ಆಗಲಿ!

**ಔರಂಗಜೀಬ**-ಮಹಮುದ್, ಕರೆದುಕೊಂಡು ಹೋಗು.

**ಮಹಮುದ್**-ಕ್ಷಮಿಸು ತಂದೆಯೆ, ಇದು ನನ್ನಿಂದಾಗತಕ್ಕದ್ದಲ್ಲ.

**ಯಶೋವಂತ**-ಬಾದಷಹಜಾದಿಯ ಪ್ರತಿಯಾಗಿ ರೂಢ ಆಚರಣೆಯನ್ನು ನಾವು ಸಹ್ಯಮಾಡಲಾರೆವು.

**ಇತರರು**-ಇಲ್ಲ, ಎಂದಿಗೂ ಇಲ್ಲ.

**ಔರಂಗಜೀಬ**-ಸರಿಯಾಗಿ ಹೇಳಿದಿರಿ. ನಾನು ಕ್ರೋಧದಿಂದ ಬುದ್ಧಿಹೋದವನಾದೆನೆ! ನನ್ನ ತಂಗಿಯ-ಸಮ್ರಾಟ ಷಾಜಹಾನನ ಪುತ್ರಿಯ-ವಿಷಯದಲ್ಲಿ ರೂಢ ವ್ಯವಹಾರವನ್ನು ನಡೆಸಲು ಆಜ್ಞೆಮಾಡಿದೆನಲ್ಲವೆ? ತಂಗೀ, ಅಂತಃಪುರಕ್ಕೆಹೋಗು. ಈ ತುಂಬಿದ ದರ್ಬಾರಿನಲ್ಲಿ ಸಹಸ್ರಾರು ಕುತ್ಸಿತದೃಷ್ಟಿಯ ಸಮ್ಮುಖದಲ್ಲಿ ಬಂದು ನಿಲ್ಲುವುದು ಸಮ್ರಾಟಷಾಜಹಾನನ ಕನ್ಯೆಗೆ ಚಂದವಲ್ಲ. ನಿನ್ನಸ್ಥಾನವು ಅಂತಃಪುರ.

**ಜಹನಾರಾ**-ಅದೆನಗೆ ಗೊತ್ತು ಔರಂಗಜೇಬ, ಆದರೊಂದು ಪ್ರಕಾಂಡಭೂಮಿಕಂಪ ದಿಂದ ಅರಮನೆಯು ಮುರಿದುಬಿದ್ದಾಗ ಅಸೂರ್ಯಂಪಶ್ಯೆಯರಾದ ರಾಜ ರಮಣಿಯರೂ ನಿಸ್ಸಂಕೋಚದಿಂದ ಬೀದಿಯಲ್ಲಿ ನಿಲ್ಲಬೇಕಾಗುವುದಲ್ಲವೆ? ಭಾರತವರ್ಷಕ್ಕಿಂದಿಂತಅವಸ್ಥೆ. ಇಂದೊಂದು ಬೃಹತ್‌ಅತ್ಯಾಚಾರದಿಂದ ಒಂದು ಸಾಮ್ರಾಜ್ಯವು ಮುರಿದುಬೀಳುತ್ತಿರುವದು. ಪ್ರತಿನಿತ್ಯದ ನಿಯಮಗಳು ಇಂದು ಪ್ರಚಾರದಲ್ಲಿಲ್ಲ. ಇಂದೆಂತಹಅನ್ಯಾಯವು-ನೀತಿಯ ಮಹಾವಿಪ್ಲವ-ದುರ್ವಿಷಹ ಅತ್ಯಾಚಾರವು ಭಾರತವರ್ಷದ ರಂಗಮಂಚದಲ್ಲಿ ಅಭಿನೀತವಾಗುತ್ತಿರುವುದೋ ಅಂತಹುದು ಹಿಂದೆಲ್ಲಿಯೂ ನಡೆದಿಲ್ಲ. ಇಂತ ಮಹತ್ಪಾಪವು – ಇಂತ ಅಸೀಮ ಶಾಠ್ಯವು ಇಂದು ಧರ್ಮದ ಹೆಸರಿನಿಂದ ನಡೆಯುತ್ತಿರುವುದು ಮತ್ತು ಈ ಜನರು ಕುರಿಯ ಹಿಂಡಿನಂತೆ ಸ್ತಬ್ಧರಾಗಿ ಅನಿಮಿಷ ದೃಷ್ಟಿಯಿಂದದನ್ನು ನೋಡುತ್ತಿರುವರು. ಭಾರತಸಂತಾನರು ಇಂದೇನು ನಿರ್ವೀರ್ಯರಾದರೇ? ದುರ್ನೀತಿಯ ಹೊಯ್ದಾಟದಿಂದ ನ್ಯಾಯ, ವಿವೇಕ, ಮನುಷ್ಯತ್ವ, ಮುಂತಾದ ಮಾನವರ ಉಚ್ಚ ಪ್ರವೃತಿಗಳೆಲ್ಲವೂ ನಷ್ಟವಾಗಿ ಹೋದವೇ? ಇಂದು ಅತ್ಯಂತ ನೀಚವಾದ ಸ್ವಾರ್ಥಸಿದ್ಧಿಯೇ ಮಾನುಷಧರ್ಮವೋ? ಸೇನಾಧ್ಯಕ್ಷರೇ, ಅಮಾತ್ಯರೇ, ನಿಮ್ಮ ಸಮ್ರಾಟ್ ಷಾಜಹಾನನು ಜೀವಿತನಾಗಿರಲು ಯಾವ ಸತ್ವದಿಂದ ನೀವಿಂದು ಈ ಸಿಂಹಾಸನದಲ್ಲಿ ಅವರಂಗಜೇಬನನ್ನು ಕುಳ್ಳಿರಿಸಿದಿರಿ?

**ಔರಂಗಜೇಬ**-ನನ್ನ ತಂಗಿಯು ಇಲ್ಲಿಂದ ಹೋಗಲು ಅಸಮ್ಮತಳು. ಸಭಾಸದರೇ, ನೀವು ಹೊರಗೆ ಹೋಗಿ, ಸಮ್ರಾಟನ ಕನ್ಯೆಯ ಮರ್ಯಾದೆಯನ್ನು ರಕ್ಷಿಸಿರಿ. (ಎಲ್ಲರೂ ಹೊರಗೆ ಹೋಗಲು ಸಿದ್ಧರಾಗುವರು)

**ಜಹನಾರಾ**-ನಿಲ್ಲಿರಿ, ನನ್ನ ಆಜ್ಞೆ. ನಿಲ್ಲಿರಿ! ನಾನಿಂದು ನಿಮ್ಮೆಡೆಯಲ್ಲಿ ನಿಷ್ಫಲವಾಗಿ ಅಳುವುದಕ್ಕೆ ಬರಲಿಲ್ಲ. ನನ್ನ ಸ್ವಂತ ದುಃಖಗಳನ್ನು ನಿಮ್ಮಲ್ಲಿ ಹೇಳಿಕೊಳ್ಳಲು ಬರಲಿಲ್ಲ. ನಾನಿಂದು ಸ್ತ್ರೀಯ ಲಜ್ಜೆ, ಸಂಕೋಚ, ನಮ್ರತೆಗಳನ್ನು ತ್ಯಾಗ ಮಾಡಿ ಬಂದೆನು, ನನ್ನ ವೃದ್ಧತಂದೆಯ ಸಲುವಾಗಿ. ಕೇಳಿರಿ ಎಲ್ಲರೂ —

**ಎಲ್ಲರೂ**--ಆಜ್ಞೆ.

**ಜಹನಾರಾ**--ನಾನೊಂದುಬಾರಿ ನಿಮ್ಮನ್ನು ಮುಖಾಮುಖಿಯಾಗಿ ಕೇಳಲು ಬಂದಿರುವೆನು. ನೀವು ನಿಮ್ಮಾ ವೀರ, ದಯಾಳು, ಪ್ರಜಾವತ್ಸಲ, ಸಮ್ರಾಟ್ ಷಾಜಹಾನನನ್ನು ಅಪೇಕ್ಷಿಸುವಿರೋ? ಇಲ್ಲವೇ ಈ ಭಂಡ, ಪಿತೃದ್ರೋಹಿ, ಪರಸ್ವಾ

ಪಹಾರಿ ಅವರಂಗಜೇಬನನ್ನು ಅಪೇಕ್ಷಿಸುವಿರೋ? ತಿಳಿಯಿರಿ. ಈಗಲೂ ದರ್ಮವು ಲುಪ್ತವಾಗಿ ಹೋಗಿಲ್ಲ; ಈಗಲೂ ಚಂದ್ರಸೂರ್ಯರು ಉದೆಯಿಸುವರು. ತಂದೆ ಮಕ್ಕಳ ಸಂಬಂಧವು ಇನ್ನೂ ಉಳಿದಿರುವದು. ಒಂದು ದಿನದ ಒಬ್ಬ ಮನುಷ್ಯನ ಪಾಪದಿಂದ ಜಗತ್ತು ತಲೆಮೇಲಾಗಿ ಹೋಗುವುದೋ? ಇಲ್ಲ. ಅಕ್ಷಮತೆಯ ವಿಜಯದುಂದುಭಿಯಿಂದ ತಪೋವನದ ಪವಿತ್ರಶಾಂತಿಯನ್ನು ಹಾಳುಮಾಡಲೇಕೆ? ಅಧರ್ಮದ ಸ್ಪರ್ಧೆಯು ನಿರ್ವಿರೋಧ ಸ್ನೇಹ ದಯಾಭಕ್ತಿಯ ಮೈಮೇಲಿಂದ ತನ್ನ ರಕ್ತಾಕ್ತ ಶಕಟವನ್ನು ಎಳಿಸಿಕೊಂಡು ಹೋಗುವಷ್ಟು ಮಿತಿಮಿರಿತೇ? ಹೇಳಿರಿ, ನೀವು ಔರಂಗಜೇಬನಿಗೆ ಹೆದರುವಿರಾ? ಔರಂಗಜೇಬನಾರು? ಅವನೆರಡು ತೋಳುಗಳಲ್ಲಿ ಎಷ್ಟೊಂದು ಶಕ್ತಿಯಿದ್ದೀತು! ನೀವೇ ಅವನ ಬಲ. ನೀವು ಮನಮಾಡಿದರೆ ಅವನನ್ನಿಲ್ಲಿ ಕುಳ್ಳಿರಿಸಬಲ್ಲಿರಿ; ಇಲ್ಲವೇ ಇಲ್ಲಿಂದ ಎಳೆದುಕೊಂಡು ಹೋಗಿ ಅಂಧಕಾರ ಕೂಪದಲ್ಲಿ ಹಾಕಬಲ್ಲಿರಿ. ನೀವಿನ್ನೂ ಸಾಮ್ರಾಟ್ ಷಾಜಹಾನನನ್ನು ಪ್ರೀತಿಸುವಿರಾದರೆ ಸಿಂಹವು ಮುದಿಯಾಯಿತೆಂದು ಪದಾಘಾತ ಮಾಡುವುದು ಬೇಡ. ನೀವು ಮಾನವರಾದರೆ ಸಮಸ್ವರದಿಂದ ಹೇಳಿರಿ-'ಸಮ್ರಾಟ್ ಷಾಜಹಾನನಿಗೆ ಜಯವಾಗಲಿ' ಎಂದು. ನೋಡುವಿರಿ ಔರಂಗಜೇಬನ ಕೈಯಿಂದ ರಾಜದಂಡವು ಕಳಚಿಬೀಳುವುದನ್ನು!

**ಎಲ್ಲರೂ**--ಜಯ, ಸಮ್ರಾಟ್ ಷಾಜಹಾನನಿಗೆ ಜಯ!

**ಜಹನಾರಾ**--ಒಳ್ಳೆಯದು, ಇನ್ನು—

**ಔರಂಗಜೇಬ**-(ಸಿಂಹಾಸನದಿಂದಿಳಿದು)ಒಳ್ಳೆಯದು ಸಭಾಸದರೇ, ತಂದೆಯು ರೋಗಿ ರಾಜಕಾರ್ಯವನ್ನು ನಿರ್ವಹಿಸುವ ಶಕ್ತಿಯಿಲ್ಲ. ಆತನು ಶಾಸನ ಮಾಡಲು ಶಕ್ತನಾಗಿದ್ದರೆ ನಾನು ದೂರದಕ್ಷಿಣವನ್ನು ಬಿಟ್ಟು ಇಲ್ಲಿಗೆ ಬರಬೇಕಾದ ಅವಶ್ಯಕವಿರಲಿಲ್ಲ. ಹಾಗೂ ನಾನು ರಾಜ್ಯರಶ್ಮಿಯನ್ನು ಷಾಜಹಾನನಕೈಯಿಂದ ಕಸುಕೊಳ್ಳಲಿಲ್ಲ; ದಾರನ ಕೈಯಿಂದ ತೆಗೆದುಕೊಂಡೆನು. ತಂದೆಯು ಹಿಂದಿನಂತೆ ಸುಖವಾಗಿ ಆಗ್ರದರಾಜಪ್ರಾಸಾದದಲ್ಲಿರುವನು. ದಾರನು ಸಮ್ರಾಟನಾಗಬೇಕೆಂಬುದೆ ನಿಮ್ಮ ಇಚ್ಛೆಯಾದರೆ ಹೇಳಿ. ನಾನವನನ್ನು ಕರೆತರಿಸುವೆನು. ಆದರೆ ದಾರನಾರು? ಮಹಾರಾಜಯಶೋವಂತಸಿಂಹನು ಸಿಂಹಾಸನದಲ್ಲಿ ಕೂಡ್ರುವನಾದರೆ ಅಥವಾ ಈ ಜಯಸಿಂಹನೋ ಮತ್ತಾರೋ ರಾಜಶಾಸನದ ಭಾರವನ್ನು ವಹಿಸುವುದಾದರೆ ನನ್ನ ಅಡ್ಡಿಯಿಲ್ಲ. ಒಂದೆಡೆ ದಾರ, ಮತ್ತೊಂದು ಕಡೆ ಷೂಜ ಮತ್ತು

ಮುರಾದ-ಈ ಶತ್ರುಗಳಿಂದ ಪರಿವೇಷ್ಟಿತರಾಗಿ ಸಿಂಹಾಸನದಲ್ಲಿ ಕುಳಿತುಕೊಳ್ಳ ಲಿಚ್ಛಿಸುವರು ಕುಳಿತುಕೊಳ್ಳಲಿ. ನಾನು ನಿಮ್ಮ ಸಮ್ಮತಿಯಿಂದ ನಿಮ್ಮ ಅನು ರೋಧದಿಂದ ಕುಳಿತಿದ್ದೆನು. ಇದೆನ್ನ ಪುರಸ್ಕಾರವೆಂದು 'ಯಾವಾಗಲೂ ಚಿಂತಿ ಸಿದವನಲ್ಲ. ಇದೆನ್ನ ಶಾಸ್ತಿ! ನಾನಿಂದು ಕುಳಿತಿರುವದು ಸಿಂಹಾಸನದಮೇ ಲಲ್ಲ, ಅಗ್ನಿಸ್ಥಂಭದಮೇಲೆ; ಅಲ್ಲದೆ ಇದರ ಸಲುವಾಗಿ ಮಕ್ಕಾಯಾತ್ರೆಯ ಸುಖ ದಿಂದ ವಂಚಿತನಾಗಿರುವೆನು. ಈಗ ನಿಮ್ಮಿಚ್ಛೆಯು ದಾರನು ಸಿಂಹಾಸನಾ ರೂಢನಾಗಬೇಕೆಂದಿದ್ದರೆ ಹಾಗೆಯೇ ಆಗಲಿ, ಈ ಸ್ವರ್ಣದಂತ ಹಿಂದೂಸ್ಥಾನವು ಮತ್ತೊಮ್ಮೆ ಅರಾಜಕವಾಗಿ ಧರ್ಮಹೀನವಾಗಲಿ! ನಾನಿಂದೇ ಮಕ್ಕಾಯಾತ್ರೆಗೆ ಹೊರಡುವೆನು. ಅದೆನ್ನ ಸುಖದ ಪರಮಾವಧಿಯು, ಹೇಳಿ—

(ಎಲ್ಲರೂ ನಿಸ್ತಬ್ಧರಾಗಿರುವರು)

ಔರಂಗಜೇಬ-ಇದೋ, ನನ್ನ ರಾಜಮುಕುಟವನ್ನು ಸಿಂಹಾಸನದ ಪದಪ್ರಾಂತದಲ್ಲಿ ಟ್ಟಿರುವೆನು. ನಾನಿಂದೀ ಮಯೂರಾಸನದ ಮೇಲೆ ಸಾಮ್ರಾಟನೆಂಬ ಹೆಸರಿ ನಿಂದ ಕುಳಿತಿರುವುದು ಬಹಳದಿನಗಳ ಸಲುವಾಗಲ್ಲ. ರಾಜ್ಯದಲ್ಲಿ ಶಾಂತಿಯನ್ನು ಸ್ಥಾಪಿಸಿ ದಾರನ ವಿಶೃಂಖಲವಾದ ಅರಾಜಕತೆಯನ್ನು ಶೃಂಖಲಾಬದ್ಧಮಾಡಿ ಆಮೇಲೆ ನೀವಾರನ್ನಿಚ್ಛಿಸುವಿರೋ, ಅವರ ಕೈಯಲ್ಲಿ ರಾಜ್ಯವನ್ನರ್ಪಿಸಿ ನಾನು ಮಕ್ಕಾಕ್ಕೆ ಹೊರಟುಹೋಗುವೆನು. ಇಲ್ಲಿಯೂ ನಾನಾ ತೀರ್ಥದಕಡೆ ತಿರುಗಿ ಕೊಂಡು ಕುಳಿತಿರುವೆನು. ನನ್ನ ಜಾಗ್ರತಾಯ ಚಿಂತೆ, ನಿದ್ರೆಯ ಕನಸು, ಜೀವನದ ಧ್ಯಾನ ಇವು ಆ ಮಹಾ ತೀರ್ಥವನ್ನೇ ಎದುರು ನೋಡುತ್ತಿರುವುವು. ನಿಮ್ಮಿಚ್ಛೆಯಿದ್ದರೆ ನಾನೀದಿನವೇ ಸಿಂಹಾಸನವನ್ನು ತ್ಯಜಿಸಿ ಮಕ್ಕಾಕ್ಕೆ ಹೊರ ಟುಹೋಗುವೆನು. ಅದೇ ನನ್ನ ಪರಮ ಸೌಭಾಗ್ಯ. ನನಗೋಸುಗವಾಗಿ ಚಿಂತೆ ಸಬೇಡಿರಿ, ನಿಮ್ಮ ಆತ್ಮೀಯ ಸುಖದುಃಖಗಳನ್ನು ಚಿಂತಿಸಿ ಹೇಳಿರಿ, ನಿಮಗೆ ರಾಜಪೀಡೆಯು, ರಾಜಶಾಸನವು ಬೇಕೋ? ಹೇಳಿರಿ. ಇನ್ನು ನಿಮ್ಮಿಚ್ಛೆಗೆ ವಿರುದ್ಧವಾಗಿ ರಾಜದಂಡವನ್ನು ನಾನು ಹಿಡಿಯಲಾರೆ, ನಿಮ್ಮ ನಿರೋಧದಿಂದ ಲೂ ಇಲ್ಲಿ ನಿಂತು ದಾರನ ಉಚ್ಛೃಂಖಲ ಅತ್ಯಾಚಾರವನ್ನು ನೋಡಲಾರೆ! ಹೋಗು ಮಹಮದ್, ಮಕ್ಕಾಯಾತ್ರೆಗೆ ಸಿದ್ಧನಾಗು—ಹೇಳಿರಿ ನಿಮ್ಮ ಅಭಿ ಪ್ರಾಯವೇನು?

ಎಲ್ಲರೂ-ಜಯ! ಸಮ್ರಾಟ್ ಔರಂಗಜೇಬನಿಗೆ ಜಯವಾಗಲಿ!

**ಔರಂಗಜೇಬ**-ಉತ್ತಮ ನಿಮ್ಮ ಅಭಿಮತವನ್ನು ತಿಳಿದುಕೊಂಡೆನು. ಈಗ ನೀವು ಹೊರಗೆ ಹೋಗಿ, ನನ್ನ ತಂಗಿಯ-ಷಾಜಹಾನನ ಕನ್ಯೆಯ ಮರ್ಯಾದೆಯನ್ನು ಕಾಪಾಡಿ.

(ಔರಂಗಜೇಬ ಮತ್ತು ಜಹನಾರಳು ಹೊರತು ಎಲ್ಲರೂ ಹೊರಟುಹೋಗುವರು.)

**ಜಹನಾರಾ**-ಔರಂಗಜೇಬಾ?

**ಔರಂಗಜೇಬ**-ತಂಗೀ,—

**ಜಹನಾರಾ**--ಚಮತ್ಕಾರ ! ನಾನಿದನ್ನು ಪ್ರಶಂಸೆಮಾಡದಿರಲಾರೆನು. ಇಷ್ಟುಹೊತ್ತು ಆಶ್ಚರ್ಯದಿಂದ ಅವಾಕ್ಕಾಗಿ ಹೋಗಿದ್ದೆನು ! ನಿನ್ನ ಕುಹಕವನ್ನು ನೋಡಿ ಸ್ತಂಭಿತಳಾಗಿದ್ದೆನು! ಈಗ ಮಂಕು ಹರಿಯಿತು, ಸರ್ವಸ್ವವನ್ನು ಕಳೆದುಕೊಂಡು ಕುಳಿತಿರುವೆನು.

**ಔರಂಗಜೇಬ**-ನಾನು ಪ್ರತಿಜ್ಞೆ ಮಾಡುವೆನು—ಅಲ್ಲಾವಿನ ಹೆಸರಿನಿಂದ ಶಪಥಮಾಡುವೆನು : ನಾನು ಸಾಮ್ರಾಟನಾಗಿರುವವರೆಗೂ ನಿನಗೂ ತಂದೆಗೂ ಯಾವ ಅಭಾವವೂ ಇಲ್ಲದಂತೆ ನೋಡಿಕೊಳ್ಳುವೆನು.

**ಜಹನಾರಾ**-ಮತ್ತೊಮ್ಮೆ ಹೇಳು, ಅಚ್ಚರಿ !

## ತೃತೀಯಾಂಕ.

### ಮೊದಲನೆಯ ನೋಟ.

(ಸ್ಥಾನ—ಖಜುಯಾದಲ್ಲಿ ಔರಂಗಜೇಬನ ಶಿಬಿರ, ಕಾಲ—ರಾತ್ರಿ

ಔರಂಗಜೇಬನು ಒಂದು ಕಾಗದವನ್ನು ಕೈಲಿ ಹಿಡಿದುಕೊಂಡು ನೋಡುತ್ತಿರುವನು)

**ಔರಂಗಜೇಬ**-ಕಾಲಾಳುಗಳು ಇಲ್ಲ, ಆನೆಯ ದಳದಿಂದ ಎದುರಿಸುವೆನು. ಬಳಿಕ ಈ ಪಾರ್ಶ್ವದಿಂದ ಆಕ್ರಮಣ ! ಶತ್ರುವಿಗೆ ನಿಷ್ಕೃತಿಯೆಲ್ಲಿ? ಓ! (ಸೋತ್ಸಾಹದಿಂದ) ವಿಜಯ ! (ಶತಪಥ ತಿರುಗುವನು)

(ಮೀರಜುಮ್ಲನ ಪ್ರವೇಶ)

ಈ ಯುದ್ಧದಲ್ಲಿ ನಮಗೆ ಜಯವಾಗುವುದೇ, ವಜೀರಸಾಹೇಬ?

**ಮೀರಜುಮ್ಲಾ**-ಅದೇಕೆ ಜಹಾಪನಾ !

**ಔರಂಗಜೀಬ**-ಮೊದಲು ನೀನು ಫಿರಂಗಿಗಳನ್ನು ಹೊಡೆಯಲು ಪ್ರಾರಂಭ ಮಾಡ ತಕ್ಕದ್ದು; ಬಳಿಕ ನಾನು ಆನೆಗಳ ಬಲವನ್ನು ತೆಗೆದುಕೊಂಡು ಭಯಗ್ರಸ್ತವಾದ ಸೈನ್ಯವನ್ನು ಆಕ್ರಮಣ ಮಾಡುವೆನು. ಆಮೇಲೆ ಅಶ್ವಾರೋಹಿ ಮಹಮುದನ ಸೈನ್ಯ! ಈ ಮೂರು ಹೊಡೆತಕ್ಕೆ ಯುದ್ಧವು ಪೂರ್ಣವಾಗಬೇಕು.

**ಮೀರಜುಮ್ಲಾ**-ಯಶೋವಂತಸಿಂಹನೇನು ಮಾಡಬೇಕು?

**ಔರಂಗಜೀಬ**-ಈ ಸಾರಿ ಅವನಮೇಲೆ ಅಷ್ಟು ನಂಬುಗೆಯಿಲ್ಲ, ಅವನನ್ನು ನಮ್ಮ ಕಣ್ಣುಗಳೆದುರಿಗೆ ಷೂಜನ ಮತ್ತು ನಮ್ಮ ಸೈನ್ಯದ ಮಧ್ಯೆ ಇಟ್ಟುಕೊಂಡಿರ ಬೇಕು ಕಂಡೆಯಾ, ಅನಿಷ್ಟವನ್ನೇನನ್ನೂ ಮಾಡದಂತೆ. ಅವನ ಹಿಂಭಾಗದಲ್ಲಿ ನಿನ್ನ ಫಿರಂಗಿಯ ಸಾಲು, ಉಭಯಪಾರ್ಶ್ವದಲ್ಲಿ ನಾನು ಮತ್ತು ಮಹಮುದ್. ಶತ್ರುಗಳ ಆಕ್ರಮಣವು ಪ್ರಧಾನತಃ ಯಶೋವಂತಸಿಂಹನ ರಾಜಪೂತ ಸೈನ್ಯದಮೇಲೆ ಬೀಳುವುದು; ಅವರು ಯುದ್ಧವನ್ನು ಮಾಡಲೇಬೇಕು. ಇಲ್ಲವೇ ಹಿಂಭಾಗದಿಂದ ನಿನ್ನ ಫಿರಂಗಿಯ ಸಾಲುಗಳು! ತಿಳಿಯಿತೇ, ಬೆಳಗಾಗುತ್ತಲೇ ಸಿದ್ಧನಾಗಿರು. ಇನ್ನು ಹೊರಡಬಹುದು.

**ಮೀರಜುಮ್ಲಾ**-ಆಜ್ಞೆಯಂತೆ (ಹೋಗುವನು)

**ಔರಂಗಜೀಬ**-ಯಶೋವಂತಸಿಂಹ, ಇದು ನಿನ್ನ ಪರೀಕ್ಷೆ!

(ಮಹಮುದನು ಪ್ರವೇಶಿಸುವನು)

**ಔರಂಗಜೀಬ**-ಮಹಮುದ್, ನಿನ್ನ ಸ್ಥಾನವು ಯಶೋವಂತಸಿಂಹನ ಎಡಭಾಗದಲ್ಲಿ ನೀನು ಕೊನೆಯಲ್ಲಿ ಆಕ್ರಮಣ ಮಾಡಬೇಕು, ಸಿದ್ಧನಾಗಿರು. ಇದೋ ನೋಡು. ನಕ್ಷೆ. (ತೋರಿಸುವನು) ತಿಳಿಯಿತೇ?

**ಮಹಮುದ್**-ತಿಳಿಯಿತು, ತಂದೆಯೇ.

**ಔರಂಗಜೀಬ**-ಒಳ್ಳೇದು ಹೋಗು, ನಾಳಿನ ಪ್ರಾತಃಕಾಲ – (ಮಹಮುದನು ಹೋಗುವನು.)

**ಔರಂಗಜೀಬ**-ಷೂಜನ ಲಕ್ಷ ಸೈನ್ಯವು ಅಶಿಕ್ಷಿತ; ನಿರಾಯಾಸವಾಗಿ ಜಯಲಾಭವಾಗಬಹುದು. ಇದೋ ಮಹಾರಾಜನು.

(ದಿಲ್ದಾರನ ಸಹಿತ ಯಶೋವಂತಸಿಂಹನು ಬಂದು ಕುರ್ನಿಸು ಮಾಡುವನು)

**ಔರಂಗಜೀಬ**-ಮಹಾರಾಜ, ನಿಮಗೋಸ್ಕರ ಒಮ್ಮೆ ಹೇಳಿಕಳುಹಿಸಿದ್ದೆನು; ಬಹಳ

ವಾಗಿ ಯೋಚಿಸಿ ಸೈನ್ಯದ ಅಗ್ರಭಾಗದಲ್ಲಿ ನೀವಿರಬೇಕೆಂದು ನಿರ್ಧರಿಸಿರುವೆನು

**ಯಶೋವಂತ**-ನಾನೇ!

**ಔರಂಗಜೀಬ**-ಹೌದು ನೀವು. ಅದರಿಂದ ವಿಪತ್ತೇನು?

**ಯಶೋವಂತಸಿಂಹ**-ಇಲ್ಲ, ವಿಪತ್ತೇನೂ ಇಲ್ಲ.

**ಔರಂಗಜೀಬ**-ಹಾಗಾದರೇಕೆ ಚಿಂತಿಸುವಿರಿ?

**ಯಶೋವಂತ**-ಕುಮಾರ ಮುಹಮುದ್‌ನು ಸೈನ್ಯದ ಪುರೋಭಾಗದಲ್ಲಿರಬೇಕೆಂಬ ಮಾತಿತ್ತಲ್ಲವೆ?

**ಔರಂಗಜೀಬ**-ಈಗೆನಗಾ ಇಷ್ಟವಿಲ್ಲ. ಕುಮಾರ ಮುಹಮುದನು ನಿಮ್ಮ ಎಡಭಾಗ ದಲ್ಲಿ ನಿಲ್ಲುವನು.

**ಯಶೋವಂತ**--ಮತ್ತು ಮೀರಜುಮ್ಲಾ?

**ಔರಂಗಜೀಬ**--ನಿಮ್ಮ ಹಿಂಭಾಗದಲ್ಲಿ. ನಾನು ನಿಮ್ಮ ಬಲಕ್ಕೆ ನಿಲ್ಲುವೆನು.

**ಯಶೋವಂತ**--ಈಗ ತಿಳಿಯಿತು, ಜಹಪನಾಯವರು ನನ್ನಲ್ಲಿ ಸಂದೇಹ ಬೀಳು ವಂತಿದೆ.

**ಔರಂಗಜೀಬ**-ಮುಹಾರಾಜರು ಚತುರರು, ಮಹಾರಾಜರ ಸಂಗಡ ನನ್ನ ಚಾತುರ್ಯ ವು ನಿಷ್ಫಲ. ನಾನು ತಮ್ಮನ್ನು ಸಂಗಡ ಕರೆದುಕೊಂಡು ಬಂದದ್ದು ತಾವೆನಗೆ ಆತ್ಮೀಯರೆಂಬ ಭಾವನೆಯಿಂದಲ್ಲ. ಅದಕ್ಕೆ ಕಾರಣವು: ನನ್ನ ಪರೋಕ್ಷದಲ್ಲಿ ಆಗ್ರಾದಲ್ಲಿ ತಾವಿರಕೂಡದೆಂಬುದೇ. ಮುಹಾರಾಜರು ಅದನ್ನು ಚನ್ನಾಗಿ ತಿಳಿದು ಕೊಂಡಂತಿದೆ.

**ಯಶೋವಂತ**--ಇಲ್ಲ, ಅಷ್ಟುದೂರ ಚಿಂತಿಸಲಿಲ್ಲ ಜಹಪನಾ. ನಾನೇ ಚತುರನೆಂಬ ಅಹಂಕಾರವಿತ್ತು, ಆದರೆ ನೋಡಲಾಗಿ ಜಹಾಪನಾವಿನ ಸಮ್ಮುಖದಲ್ಲಿ ನಾನು ಕೇವಲ ಶಿಶು!

**ಔರಂಗಜೀಬ**--ಈಗ ಮುಹಾರಾಜರ ಅಭಿಪ್ರಾಯವೇನು?

**ಯಶೋವಂತ**--ಜಹಾಪನಾ, ರಾಜಪೂತಜಾತಿಯು ವಿಶ್ವಾಸಘಾತುಕ ಜಾತಿಯಲ್ಲ. ಪರಂತು ನೀವುಗಳು-ಹಾಗೂ ನೀನು ಅದನ್ನು ವಿಶ್ವಾಸಘಾತಕಜಾತಿಯನ್ನಾಗಿ ಮಾಡುತ್ತಿರುವಿರಿ. ಆದರೆ ಎಚ್ಚರಿಕೆ ಜಹಪನಾ, ಈ ರಾಜಪೂತಜಾತಿಯನ್ನು ರೇಗಿಸಬೇಡಿರಿ. ಬಂಧುತ್ವದಲ್ಲಿ ರಾಜಪೂತರಂತ ಮಿತ್ರರಾರೂ ಇಲ್ಲ; ಮತ್ತು ವೈರದಲ್ಲಿ ರಾಜಪೂತರಂತ ಭಯಂಕರ ಶತ್ರುಗಳೂ ಇಲ್ಲ. ಎಚ್ಚರಿಕೆ.

**ಔರಂಗಜೀಬ**--ಮಹಾರಾಜಾ, ಔರಂಗಜೀಬನ ಸಮ್ಮುಖದಲ್ಲಿ ಹುಬ್ಬು ಗಂಟುಹಾಕುವುದರಿಂದಾವ ಫಲವೂ ಇಲ್ಲ. ಹೊರಡಿ, ನನ್ನ ಆಜ್ಞೆಯು ಇದು ಪಾಲಿಸಲ್ಪಡತಕ್ಕದ್ದು. ಇಲ್ಲವೆ ಔರಂಗಜೀಬನೆಂತವನೆಂಬುದನ್ನು ತಿಳಿಯುವಿರಿ.

**ಯಶೋವಂತ**--ಆಗಬಹುದು, ಮತ್ತು ನೀವೂ ತಿಳಿಯುವಿರಿ ಯಶೋವಂತಸಿಂಹನೆಂತವನೆಂಬುದನ್ನು? ನಾನು ಯಾರ ಚಾಕರನೂ ಅಲ್ಲ; ಈ ಆಜ್ಞೆಯನ್ನು ನಾನು ಪಾಲಿಸುವುದಿಲ್ಲ.

**ಔರಂಗಜೀಬ**-ಮಹಾರಾಜಾ, ಓರಂಗಜೀಬನು ಯಾವಾಗಲೂ ಯಾರನ್ನೂ ಕ್ಷಮಿಸುವುದಿಲ್ಲವೆಂಬುದು ನಿಮಗೆ ತಿಳಿಯದೊ? ಎಚ್ಚರಿಕೆ!

**ಯಶೋವಂತ**-ಮತ್ತು ನೀವೂ ಚನ್ನಾಗಿ ತಿಳಿದುಕೊಳ್ಳಿ: ಯಶೋವಂತಸಿಂಹನು ಯಾರಿಗೂ ಯಾವಾಗಲೂ ಭಯಪಡತಕ್ಕವನಲ್ಲವೆಂದು. ಎಚ್ಚರಿಕೆ!

**ಔರಂಗಜೀಬ**--ಇದು ಸಂಭವವೇ ಯಶೋವಂತಸಿಂಹ?

**ಯಶೋವಂತ**-ಹೌದು, ಔರಂಗಜೀಬ.

**ಔರಂಗಜೀಬ**--ಈ ಮುಹೂರ್ತದಲ್ಲಿ ನಾನು ನಿನ್ನನ್ನು ಸೆರೆಹಿಡಿಯುವೆನು; ನಿನ್ನನ್ನು ರಕ್ಷಿಸುವವರಾರು?

**ಯಶೋವಂತ**--ಈ ನನ್ನ ಕತ್ತಿ; ನೆನಪಿರಲಿ ಔರಂಗಜೀಬ. ಈ ದುರ್ದಿನದಲ್ಲೂ ಮಹಾರಾಜ ಯಶೋವಂತಸಿಂಹನ ಒಂದು ಇಂಗಿತಮಾತ್ರದಿಂದ ಮೂವತ್ತು ಸಾವಿರ ರಜಪೂತರ ಕಠಾರಿಗಳು ಒಮ್ಮೆಗೇ ಸೂರ್ಯಕಿರಣದಲ್ಲಿ ಜ್ವಲಿಸತೊಡಗುವವು. ಮತ್ತು ಈದುರ್ದಿನದಲ್ಲೂ ರಜಪೂತನು ರಜಪೂತನೇ. (ಹೋಗುವನು

**ಔರಂಗಜೀಬ**--ಗುರಿಯು ತಪ್ಪಿಹೋಯಿತು, ತಪ್ಪಿಹೋಯಿತು. ಈ ರಾಜಪೂತ ಜಾತಿಯನ್ನು ಚನ್ನಾಗಿ ತಿಳಿಯಲಾರದೆ ಹೋದೆನು. ಎಷ್ಟೊಂದು ಅವರ ದರ್ಪ, ಎಷ್ಟೊಂದು ಅಭಿಮಾನ! ತಿಳಿಯದೆ ಹೋಯಿತು.

**ದಿಲ್ದಾರಾ**-ಹೇಗೆ ತಿಳಿಯಬಲ್ಲಿರಿ ಜಹಪನಾ? ಶೌರ್ಯದ ಬದಿಯಲ್ಲಿ ನಿಮ್ಮ ವಾಸ, ನಿಮಗೆ ತಿಳಿದದ್ದು ಕೇವಲ ಮಿತ್ರದ್ರೋಹ, ಸತ್ಯಭ್ರಷ್ಟತೆ, ಮತ್ತು ರಾಜದ್ರೋಹ. ಅವುಗಳನ್ನು ವಶಮಾಡಿಕೊಳ್ಳುವುದರಲ್ಲಿ ನೀವು ದಕ್ಷರು; ಪರಂತು ಇದು ಬೇರೆವಿಧವಾದ ರಾಜ್ಯ. ಈ ರಾಜ್ಯದ ನಿವಾಸಿಗಳಿಗೆ ಪ್ರಾಣಕ್ಕಿಂತಲೂ ಮಾನವು ಹೆಚ್ಚು.

ಔರಂಗಜೇಬ-ಹುಂ! ಈಗಲಾದರೂ ಪ್ರತೀಕಾರ ಮಾಡಲಾಗುವುದೇ ನೋಡುವೆನು: ಪರಂತು ರೋಗವು ವೈದ್ಯನ ಶಕ್ತಿಯನ್ನು ಮೀರಿಹೋಗಿದೆ. (ಹೋಗುವನು.)

ದಿಲ್ದಾರ್-ದಿಲ್ದಾರ್, ನಿನ್ನ ಪರಿಸ್ಥಿತಿಯು ದಿನೇದಿನೇ ಉನ್ನತಿಯನ್ನು ಹೊಂದುತ್ತಿರುವುದು. ಅದರ ಸಲುವಾಗಿಯೇ ನನಗೆ ಭಯ. ಪ್ರಥಮದಲ್ಲಿ ಘಾತಕ, ಬಳಿಕ ವಿದೂಷಕ, ಆಮೇಲೆ ರಾಜನೈತಿಕ. ಬಳಿಕ ದಾರ್ಶನಿಕ, ಆದಾದಮೇಲೆ?

[ಮಾತಾಡುತ್ತಿದ್ದಂತೆ ಔರಂಗಜೇಬನೂ, ಮೀರಜುಮ್ಲನೂ ಮತ್ತೆ ಬರುವರು]

ಔರಂಗಜೇಬ-ಅನಿಷ್ಟವನ್ನೇನುಮಾಡದಂತೆ ನೋಡಿಕೊಂಡಿದ್ದರೆ ಸಾಕು.

ಮೀರಜುಮ್ಲ-ಆಜ್ಞೆಯಂತೆ.

ಔರಂಗಜೇಬ-ಅವನ ಕಣ್ಣುಗಳಲ್ಲಿ ಒಂದು ಭಯಂಕರ ರಕ್ತವರ್ಣದ ಕಾಂತಿಯನ್ನು ಕಂಡೆನು. ಅವನಿಗೆ ಪ್ರಾಣಭಯವು ಸ್ವಲ್ಪವೂ ಇಲ್ಲ. ರಜಪೂತ ಜಾತಿಯೇ ಹೀಗೆ!

ಮೀರಜುಮ್ಲ-ನಾನು ನೋಡಿರುವೆನು ಜಹಪನಾ, ಒಂದು ಫಿರಂಗಿಗಿಂತಲೂ ಒಬ್ಬ ರಜಪೂತನು ಹೆಚ್ಚು ಭಯಂಕರನು.

ಔರಂಗಜೇಬ-ಹೌದು; ಬಹಳ ಎಚ್ಚರಿಕೆಯಾಗಿರಬೇಕು.

ಮೀರಜುಮ್ಲಾ-ಅಪ್ಪಣೆ.

ಔರಂಗಜೇಬ-ನಮ್ಮ ಮಹಮದನನ್ನು ಕಳುಹಿಸು. ಇಲ್ಲ ನಾನೇ ಹೋಗುವೆನು. (ಹೋದನು.)

---

ಮೀರಜುಮ್ಲಾ-ಈ ಯುದ್ಧದಲ್ಲಿ ಔರಂಗಜೀಬನು ವಿಚಲಿತನಾಗಿರುವಷ್ಟು ಹಿಂದೆ ಯಾವಾಗಲೂ ವಿಚಲಿತನಾಗಿದ್ದನ್ನು ನೋಡಿಲ್ಲ; ಅಣ್ಣತಮ್ಮಂದಿರ ಯುದ್ಧ! ಅದರಿಂದಲೇ ಹೀಗಾಗಿರುವುದು. ಓ! ಅಣ್ಣತಮ್ಮಂದಿರ ಜಗಳವು ಎಷ್ಟೊಂದು ಅಸ್ವಭಾವಿಕ! ಎಷ್ಟೊಂದು ಭಯಂಕರ!

ದಿಲ್ದಾರ್-ಮತ್ತು ಎಷ್ಟೊಂದು ಉತ್ತೇಜಕ. ಈ ಅಮಲು ಎಲ್ಲ ಅಮಲಿಗಿಂತಲೂ ಉತ್ತಮವಾದುದು. ವಜೀರಸಾಹೇಬ, ಪರಸ್ಪರ ವೈರವನ್ನು ಹೆಚ್ಚಿಸುವ ಸಲುವಾಗಿ ಮನುಷ್ಯನು ಇಷ್ಟೊಂದು ಭಿನ್ನಭಿನ್ನ ಧರ್ಮಗಳನ್ನು ಸೃಷ್ಟಿಸಿರುವನೆ? ಜನಗಳನ್ನು ಒಟ್ಟುಗೂಡಿಸಬೇಕಾದ ಧರ್ಮವು ದ್ವೇಷಕ್ಕೆ ಕಾರಣವೆ? ಆದರೂ ಅಣ್ಣತಮ್ಮಂದಿರಂತಹ ಶತ್ರುಗಳು ಮತ್ತಾರೂ ಇಲ್ಲ.

**ನಿಜಾರಜುವಲ್ಲ**-ಅದೇಕೆ?

**ದಿಲ್ದಾರ್**-ಈಗ ನೋಡಿ ವಜೀರಸಾಹೇಬ, ಹಿಂದೂ ಮತ್ತು ಮುಸಲ್ಮಾನರು ಇವರೀರ್ವರಲ್ಲಿ ಯಾವದು ಸಮಾನ? ಮೊಟ್ಟಮೊದಲು ದೇವದತ್ತವಾದ ಆಕಾರೇಂಗಿತಕೆಂದರೆ ಎಷ್ಟೊಂದು ಭಿನ್ನಭೇದಗಳು ಸಾಧ್ಯವೋ ಅಷ್ಟು ಮಾಡಿರುವರು. ಇವರು ಮುಖದ ಮುಂದುಗಡೆ ದಾಡಿಯನ್ನು ಬಿಡುವರು. ಅವರು ಬಿಡುವುದು ಹಿಂಭಾಗದಲ್ಲಿ. ಇವರು ಪಶ್ಚಿಮಾಭಿಮುಖರಾಗಿ ನಿಮಾಜು ಮಾಡುವರು; ಅವರು ಪೂರ್ವದಿಕ್ಕಿಗೆ ಮುಖತಿರುಗಿಸಿಕೊಂಡು ಪ್ರಾರ್ಥನೆ ಮಾಡುವರು. ಇವರು ಬಲದಿಂದ ಎಡಕ್ಕೆ ಬರೆಯುವರು. ಅವರದಕ್ಕೆ ವಿಪರೀತ; ಹೌದೋ ಅಲ್ಲವೋ?

**ನಿಜಾರಜುವಲ್ಲ**-ಹೌದು; ಹೌದು.

**ದಿಲ್ದಾರ್**-ಆದರೂ ಹಿಂದುಗಳು ಮುಸಲ್ಮಾನರ ಆಧೀನದಲ್ಲಿ ಒಂದು ಜಗೆಯಾಗಿ ಸುಖದಿಂದಲೇ ಇರುವರು. ಪರಂತು ಅಣ್ಣ ತಮ್ಮಂದಿರು ಒಬ್ಬರ ಪ್ರಭುತ್ವವನ್ನೊಬ್ಬರು ಸ್ವೀಕಾರ ಮಾಡುವುದಿಲ್ಲ.

(ಮಿರ್ಜುಮ್ಲನು ನಗುವನು.)

**ದಿಲ್ದಾರ್**-(ಹೋಗುತ್ತಾ) ಏನು ಸರಿಯಲ್ಲವೆ ವಜೀರಸಾಹೇಬ.

**ನಿಜಾರಜುವಲ್ಲ**-(ಹೋಗುತ್ತಾ) ಸಂದೇಹವೇನು?

# ಮೂರನೆಯ ಅಂಕ.

## ಎರಡನೆಯ ನೋಟ.

ಸ್ಥಾನ—ಖಿಜುಯಾದಲ್ಲಿ ಸೂಜನ ಶಿಬಿರ, ಕಾಲ—ಸಂಧ್ಯಾ.

[ಸೂಜನು ನಕ್ಷೆಯೊಂದನ್ನು ನೋಡುತ್ತಿದ್ದನು. ಪೂಮಾಲೆಯನ್ನು ಕೈಲಿ ಹಿಡಿದುಕೊಂಡು, ಪಿಯಾರಳು ಹಾಡುತ್ತಾ-ಹಾಡುತ್ತಾ ಬಂಧುಮಾಲೆಯನ್ನು ಸೂಜನಿಗ ಹಾಕುವಳು.]

**ಸೂಜಾ**-(ನಕ್ಕು) ಇದೇನು ನನ್ನ ಜಯಮಾಲೆಯೋ ಪಿಯಾರಾ! ನಾನಿನ್ನೂ ಯುದ್ಧದಲ್ಲಿ ಜಯಲಾಭವನ್ನು ಹೊಂದಿಲ್ಲ.

**ಪಿಯಾರ**-ಹೊಂದಲಿ ಹೊಂದದೆ ಹೋಗಲಿ ನನ್ನ ಪಾಲಿಗೆ ನೀನು ಚಿರವಿಜಯಿ.

ನಿನ್ನ ಪ್ರೇಮದ ಕಾರಾಗಾರದಲ್ಲಿ ನಾನು ಬಂದಿ; ನೀನೆನ್ನ ಪ್ರಭು; ನಾನು ನಿನ್ನ ಕ್ರೀತದಾಸಿ-ಆಜ್ಞೆಯೇನು? (ಮೊಣಕಾಲೂರಿ ಕುಳಿತುಕೊಳ್ಳುವಳು)

ಸೂಜ-ಇದೇನು ಹೊಸಪದ್ಧತಿ ಪಿಯಾರಾ! ಒಳ್ಳೇದು, ನನ್ನ ಪ್ರೇಮಕಾರಾಗಾರದ ಬಂದಿ; ನಿನ್ನನ್ನು ನಾನು ಮುಕ್ತಳನ್ನಾಗಿಮಾಡುವೆನು. ನೀನುಹೋಗಬಹುದು.

ಪಿಯಾರ-ನನಗೆ ಮುಕ್ತಿಯು ಬೇಡ; ಈ ಗುಲಾಮಗಿರಿಯೇ ನನ್ನ ಮನಸ್ಸಿಗೊಪ್ಪುವದು.

ಸೂಜ-ಕೇಳು, ನಾನೊಂದು ಚಿಂತೆಯಲ್ಲಿ ಬಿದ್ದಿರುವೆನು.

ಪಿಯಾರ-ಅದೇನು ಹೇಳಬಾರದೇ? ಏನಾದರೂ ಉಪಾಯವಾಗುವುದೇನೋ ನೋಡುವ.

ಸೂಜ-(ನಕ್ಷೆಯನ್ನು ತೋರಿಸಿ) ನೋಡು ಪಿಯಾರಾ, ಈ ಸ್ಥಳದಲ್ಲಿ ಮೀರಜುಮ್ಲನ ಫಿರಂಗಿಗಳು; ಈ ಸ್ಥಳದಲ್ಲಿ ಮಹಮುದನ ಐದು ಸಾವಿರ ಅಶ್ವಾರೋಹೀ ಸೈನ್ಯ ಮತ್ತು ಇಲ್ಲಿ ಔರಂಗಜೇಬ.

ಪಿಯಾರ-ನಾನೊಂದು ಬರಿಯ ಕಾಗದವನ್ನು ನೋಡುತ್ತಿರುವೆನು. ಅಲ್ಲೇನ ಇಲ್ಲವಲ್ಲ.

ಸೂಜ-ಈಗ ಈರೀತಿಯಾಗಿರುವುದು. ನಾಳೆ ಪ್ರಾತಃಕಾಲ ಯುದ್ಧದ ಸಮಯದಲ್ಲಿ ಯಾರು ಎಲ್ಲೆಲ್ಲಿರುವರೋ ಹೇಳುವುದಕ್ಕಾಗುವುದಿಲ್ಲ.

ಪಿಯಾರ-ಅದೇಕೆ ಹೇಳುವುದಕ್ಕಾಗುವುದಿಲ್ಲ.

ಸೂಜ-ಏಕೆಂದರೆ ಔರಂಗಜೇಬನು ತನ್ನ ಕಡೆಯ ಫಿರಂಗಿಗಳು ಗುಂಡುಹಾರಿಸಲು ಮೊದಲುಮಾಡಿದ ಮೇಲೆಯೇ ಅಶ್ವಾರೋಹಿ ಸೈನ್ಯದಿಂದ ಆಕ್ರಮಣ ಮಾಡುವನು

ಪಿಯಾರ-ಸರಿ; ಹಾಗಾದರೆ ಯುದ್ಧವೇನೂ ಸಹಜವಾದ ಮಾತಲ್ಲ.

ಸೂಜ__ನಿನಿಗೇನೇನೂ ತಿಳಿಯುವುದಿಲ್ಲ.

ಪಿಯಾರ-ಸಿಕ್ಕಿಬಿದ್ದೆನು. ನಿನಗದು ಹೇಗೆ ತಿಳಿಯಿತು? ಆಶ್ಚರ್ಯ! ಒಮ್ಮೆಗೆ ಪತ್ತೆಮಾಡಿಬಿಟ್ಟೆಯಲ್ಲ.

ಸೂಜ-ನನ್ನ ಸೈನ್ಯವು ಸುಶಿಕ್ಷಿತವಾದಲ್ಲ ಯಶೋವಂತಸಿಂಹನನ್ನು ಏನಾದರೂ ಮಾಡಲಾಗುವುದೋ ನೋಡಬೇಕು. ಬಂದಾವರ್ತಿ ಬರೆಯಾವೆನು ಒಳ್ಳೇದು, ನೀನೇನು ಹೇಳುವೆ?

ಪಿಯಾರ-ನಾನು ನಿನಗೆ ಉಪದೇಶಮಾಡುವ ಗೋಜನ್ನೇ ಬಿಟ್ಟಿರುವೆನು.

ಸೂಜ-ಅದೇಕೆ?

ಪಿಯಾರ-ಅದೇಕೆ! ನನ್ನ ಉಪದೇಶವನ್ನು ನೀನು ಕೇಳಿದರಲ್ಲವೆ! ನೀವೆಂಥಹವರೆಂಬುದು ನನಗೆ ಚನ್ನಾಗಿ ಗೊತ್ತು. ನನ್ನ ಅಭಿಪ್ರಾಯವನ್ನು ಕೇಳುವುದು ಮಾತ್ರ. ಕಾರ್ಯಕಾರಿಯಾಗುವುದು ನಿಮ್ಮ ವಿಪರೀತ ಅಭಿಪ್ರಾಯವೇ!

ಸೂಜ-ಹೋ! ಹಾಗೆಯೇ ಇರಬಹುದು.

ಪಿಯಾರ-ಆದುದರಿಂದಲೇ ನಾನು ಪತಿವ್ರತೆಯಾದ ಹಿಂದೂ ಹೆಂಗಸಿನಂತೆ ಸ್ವಾಮಿಯು ಹೇಳಿದ್ದಕ್ಕೆಲ್ಲಾ ಹೂಂಗುಟ್ಟುತ್ತಿರುವದು.

ಸೂಜ-ಸರಿ ಹಾಗಾದರೆ ತಪ್ಪೆಲ್ಲ ನನ್ನದು; ನಿನ್ನ ಪರಾಮರ್ಶವನ್ನು ಕೇಳುವೆನು. ಅನುಕೂಲವಾಗಿ ಪರಾಮರ್ಶವನ್ನು ಕೊಡದೆಹೋದರೆ ನನ್ನಿಷ್ಟಬಂದಂತೆ ಮಾಡುವೆನು ಅಲ್ಲವೇ? ಅದಕ್ಕೀಗ ಪ್ರತೀಕಾರವೇನು?

ಪಿಯಾರ—ಪ್ರತಿಕಾರವೇನೂ ಇಲ್ಲ; ನಿನ್ನನ್ನು ಉದ್ಧಾರಮಾಡುವ ಉಪಾಯವೇನಾದರೂ ಇದ್ದಪಕ್ಷದಲ್ಲಿ ನಾನೇ ಪ್ರಯತ್ನಮಾಡುತ್ತಿದ್ದೆನು. ಉಪಾಯವೇನೂ ಇಲ್ಲವೆಂದೇ ಮನಸ್ಸಿನಲ್ಲಿ ಹಾಡಿಕೊಂಡು ಸುಮ್ಮನಿರುವುದು.

ಸೂಜ-ಹಾಗಾದರೆ ಹಾಡು; ನಿನ್ನ ಗಾನವು ಸುರೆಯಂತೆ ನೂರು ದುಃಖಗಳನ್ನು, ನೂರು ಯಾತನೆಗಳನ್ನು ಮರೆಸಿಬಿಡುವುದು. ಕಠೋರವಾದ ಸ್ಥೂಲಜಗತ್ತಿನಿಂದ ಒಮ್ಮೆಗೆ ಎತ್ತಿಕೊಂಡು ಹೋಗಿಬಿಡುವುದು. ನನ್ನ ಸಮಸ್ತ ಜೀವನವನ್ನು ಒಂದು ವಿಧವಾದ ಸುಖಮಯ ಝೇಂಕಾರವು ಸುತ್ತಿಕೊಂಡಿರುವಂತೆ ಬೋಧೆಯಾಗುವುದು. ಆಕಾಶ ಮರ್ತ್ಯಲೋಕಗಳ ಅಂತರವನ್ನೆ ತಿಳಿಯಲಾರದೆ ಹೋಗುವೆನು. ಹಾಡು ಪ್ರಾತಃಕಾಲದಲ್ಲಿ ಯುದ್ಧ; ಅದಕ್ಕಿನ್ನೂ ಬಹಳ ಹೊತ್ತಿರುವುದು. ಹಣೆಯಲ್ಲಿ ಬರೆದದ್ದು ಆಗಲೇ ಬೇಕು ಹಾಡು.

ಪಿಯಾರ-ನನ್ನ ಹಾಡನ್ನು ಕೇಳುವ ಮೊದಲು ಈ ಸ್ವಚ್ಛ, ಪೂರ್ಣ ಚಂದ್ರಾಲೋಕದಲ್ಲಿ ನಿನ್ನ ಹೃದಯವನ್ನು ಸ್ನಾನಮಾಡಿಸು. ನಿನ್ನ ಪರಿಮಳಪೂರ್ಣವಾದ ಪುಷ್ಪಾಂಜಲಿಯನ್ನು ಪವಿತ್ರಪ್ರೇಮವೆಂಬ ಪಾಟೀರದಣ್ಣೆನಿಂದ ತೋಯಿಸು. ಆಮೇಲೆ ನಾನು ಹಾಡುವೆನು. ಮತ್ತು ನೀನು ನಿನ್ನಾ ಪುಷ್ಪಾಂಜಲಿಯನ್ನು ನನ್ನ ಚರಣಗಳಲ್ಲಿ ಅರ್ಪಿಸುವೆಯಂತೆ!

**ಸೂಜ**-ಹಾ! ಹಾ! ಹಾ! ಚೆನ್ನಾಗಿ ಹೇಳಿದೆ ಪಿಯಾರಾ, ಆದರೆ ನಿನ್ನೀ ಉಪಮೆಗಳ ಪೂರ್ಣ ರಸಗ್ರಹಣಮಾಡುವುದು ನನ್ನಿಂದ ಸಾಧ್ಯವಿಲ್ಲವಲ್ಲೆ!

**ಪಿಯಾರ**-ಸುಮ್ಮನಿರು. ನಾನು ಹಾಡುವೆನು ನೀನು ಕೇಳು. ಮೊದಲು ಈ ಸ್ಥಳದಲ್ಲಿ ಈ ರೀತಿಯಾಗಿ ಕುಳಿತುಕೊ; ಕೈಗಳು ಹೀಗಿರಲಿ, ಕಣ್ಣುಗಳನ್ನು ಮುಚ್ಚಿಕೊ ಕ್ರಿಸ್ತರು ಪ್ರಾರ್ಥನೆ ಮಾಡುವಾಗ ಕಣ್ಣುಗಳನ್ನು ಮುಚ್ಚಿಕೊಳ್ಳುವಂತೆ ಮುಚ್ಚಿಕೊ. ಧ್ಯಾನವನ್ನು ಅಂಧಕಾರದಿಂದ ಆಲೋಕಕ್ಕೆ ತೆಗೆದೊಯ್ಯಲೆಂದು ಅವರ ಹೇಳಿಕೆ. ಆದರೆ ಕಾರ್ಯತಃ ಈಶ್ವರದತ್ತವಾದ ಪ್ರಕೃತಿಯ ಆಲೋಕವನ್ನೂ ಕಣ್ಣುಗಳಿಂದ ದೂರಮಾಡುವ ಸಲವಾಗಿ.

**ಸೂಜಾ**-ಹಾ! ಹಾ! ನೀನು ಏನೇನೋ ಹೇಳುವೆ! ಪರಂತು ಆ ಬಕ ಸನ್ಯಾಸಿಗಳ ಮಾತೆತ್ತಿದರೆ ನನಗೆ ನಗುಬರುವುದು. ನಾನಾವ ಧರ್ಮಗಳನ್ನು ನಂಬುವುದಿಲ್ಲ. ದಾರನು ಹಿಂದೂಧರ್ಮದ ಪಕ್ಷಪಾತಿ, ಭಂಡ; ಔರಂಗಜೀಬನು ಗೋಡಾ ಮುಸಲ್ಮಾನ್, ಭಂಡ; ಮೂರಾದನು ಮುಸಲ್ಮಾನ ಆದರೆ 'ಗೂಡಾ' ಅಲ್ಲ; ಭಂಡ.

**ಪಿಯಾರ**-ಮತ್ತು ನೀನು ಯಾವ ಧರ್ಮವನ್ನು ನಂಬುವುದಿಲ್ಲ, ಭಂಡ.

**ಸೂಜ**-ಅದೇಕೆ? ನಾನಾವ ಧರ್ಮವನ್ನೂ ನಿಂದಿಸುವುದಿಲ್ಲ. ನನ್ನ ಆಸೆ ಭಾರತದ ಸಾಮ್ರಾಟನಾಗಬೇಕೆಂದು!

**ಪಿಯಾರ**-ಅದೇ ನಿನ್ನ ಭಂಡತನ.

**ಸೂಜ**-ಅದು ಹೇಗೆ ಭಂಡತನ! ದಾರನ ಪ್ರಭುತ್ವವು ನನಗೆ ಸಮ್ಮತ. ಆದರೆ ಔರಂಗಜೀಬ ಮತ್ತು ಮುರಾದನ ಪ್ರಭುತ್ವವನ್ನೊಪ್ಪಲಾರೆ; ನಾನವರ ದೊಡ್ಡಣ್ಣ.

**ಪಿಯಾರ**-ಅವರಿಗೆ ದೊಡ್ಡ ಅಣ್ಣನಾದುದೇ ನಿನ್ನ ಭಂಡತನ.

**ಸೂಜ**-ನಾನು ಮೊದಲು ಹುಟ್ಟಿದೆನಲ್ಲ?

**ಪಿಯಾರ**-ಮೊದಲು ಹುಟ್ಟಿದುದೆ ನಿನ್ನ ಭಂಡತನ. ನೀನು ಮೊದಲು ಹುಟ್ಟಿದ ಮಾತ್ರಕ್ಕೆ ಬಂದ ಬಹಾದುರಿಯೇನು? ಮೊದಲು ಹುಟ್ಟಿದೆನೆಂದು ಸಿಂಹಾಸನವನ್ನು ಆಕ್ರಮಿಸಿಕೊಳ್ಳಲಾರೆ.

**ಸೂಜ**-ಅದೇಕೆ?

**ಪಿಯಾರ**-ನಮ್ಮ ತಂದೆ ರಹಮುಖಾನನು ನಿನಗಿಂತಲೂ ಎಷ್ಟೋ ಕಾಲಕ್ಕೆ ಹಿಂದೆ ಹುಟ್ಟಿದನು. ಆದುದರಿಂದ ಸಿಂಹಾಸನಕ್ಕೆ ನಿನಗಿಂತ ಅವನ ಹಕ್ಕು ಹೆಚ್ಚು.

**ಸೂಜ**-ಆದರವನು ಸಮ್ರಾಟನ ಪುತ್ರನಲ್ಲ.

**ಪಿಯಾರ**- ಸಮ್ರಾಟನ ಪುತ್ರನಾಗುವುದು ಎಷ್ಟು ಹೊತ್ತು !

**ಸೂಜ**-ಹಾ! ಹಾ! ನೀನೀರೀತಿ ತರ್ಕಮಾಡಬೇಡ; ಏನಾದರೂ ಹಾಡು.

**ಪಿಯಾರ**-ಕೇಳು ಮನಮುಟ್ಟಿ ಕೇಳು; (ಹಾಡುವಳು)

**ಸೂಜ**-ಪಿಯಾರಾ, ಈಶ್ವರನು ನಿನ್ನನ್ನು ಸೃಷ್ಟಿಸಿದನೇಕೆ? ಈ ರೂಪ! ಈ ರಸಿಕತೆ! ಈ ಸಂಗೀತ! ಇಂತ ದಿವ್ಯ ಸಮ್ಮೇಳನವನ್ನು ಈಶ್ವರನು ನಿಸ್ಸಾರವಾದ ಮರ್ತ್ಯ ಭೂಮಿಯಲ್ಲಿ ಏತಕ್ಕೆ ನಿರ್ಮಾಣಮಾಡಿದನು?

**ಪಿಯಾರ**–ನಿನಗೋಸುಗವಾಗಿ ಪ್ರಿಯತಮ.

## ಮೂರನೆಯ ಅಂಕ.

### ಮೂರನೆಯ ನೋಟ.

ಸ್ಥಾನ— ಕಾಶ್ಮೀರದ ಮಹಾರಾಜ ಪೃಥ್ವಿಸಿಂಗನ ಪ್ರಮೋದೋದ್ಯಾನ ಕಾಲ—ಸಂಧ್ಯಾ.
ಸುಲೇಮಾನ್ ಒಂಟಿಯಾಗಿ ಪ್ರವೇಶಿಸುವನು.

**ಸುಲೇಮಾನ್**-ಅಲಹಾಬಾದಿನಿಂದ ಓಡಿಬಂದು ಕೊನೆಗೀ ಪರ್ವತಸೀಮೆಯನ್ನು ಸೇರಿದ್ದಾಯಿತು. ತಂದೆಯ ಸಹಾಯಕ್ಕೆ ಮಾಡಿದ ಪ್ರಯತ್ನವು ನಿಷ್ಫಲವಾಯಿತು. ಈ ದೇಶವು ಎಷ್ಟೊಂದು ಸುಂದರ; ಕುಸುಮಿತವಾದ ಸಂಗೀತದಂತೆ ಚಿತ್ರಿತವಾದ ಪ್ರಣಯದಂತೆ ಒಂದು ಶೋಭಾಮಯವಾದ ಆಲಸಿಕೆಯಿಂದ ಕೂಡಿದ ಸೌಂದರ್ಯ! ಸ್ವರ್ಗಲೋಕದ ಓರ್ವ ಅಪ್ಸರೆಯು ಮರ್ತ್ಯಕ್ಕಿಳಿದು ಸಂಚಾರಮಾಡುತ್ತಾ, ಶಾಂತಳಾಗಿ ಕಾಲುಗಳನ್ನು ನೀಡಿಕೊಂಡು ಹಿಮಾಲಯದ ಮೇಲೆ ಮಲಗಿ ವಾಮಹಸ್ತದಲ್ಲಿ ಕಪೋಲವನ್ನಿಟ್ಟುಕೊಂಡವಳಾಗಿ ನೀಲಾಕಾಶವನ್ನು ನೋಡುತ್ತಿರುವಳು. ಇದೇನು ಸಂಗೀತ !

(ದೂರದಲ್ಲಿ ಸಂಗೀತ.)

**ಸುಲೇಮಾನ್**-ಕ್ರಮವಾಗಿ ಸಮೀಪಕ್ಕೆ ಬರುತ್ತಿರುವದು. ಇದೋ ಸುಸಜ್ಜಿತವಾದೊಂದು ದೋಣಿಯಮೇಲೆ ಕುಳಿತು ಈ ನಾರಿಯರು ತಾವೇ ಹುಟ್ಟುಹೊಡೆಯುತ್ತಾ ಹಾಡುತ್ತಿರುವರು. ಎಷ್ಟೊಂದು ಸುಂದರ! ಎಷ್ಟೊಂದು ಮಧುರ.

(ಅಲಂಕೃತವಾದ ದೋಣಿಯಮೇಲೆ ಕುಳಿತುಕೊಂಡು ಕೆಲವು ಜನ ರಮಣಿಯರು
ಹಾಡುತ್ತ ಪ್ರವೇಶಿಸುವರು.)

ನವ-ಸುರಭಿಸಂಗಪಾವನ ! ಪವನ!
ಧೃತಜೀವನ! ಗತಿನಿಧಾನ ! ಸುಖಧನ|| ಪ ||

ತರಳಲತಾನಿಕರಾವನ! ಹರುಷಮುದಿತ ಚಂದನವನ
ದುರಿಪರಿಮಳದೊಲುಮೆಯ ತಳೆದು     ಮಾನ್ಯನಂತೆ
ಬರುವೆಯೊ ಮಲಯಾದ್ರಿಯನಿಳಿದು || ಅ ||
ಅರೆ-ವಿರಿದ ಮೊಲ್ಲೆಯ ಕಂಪಕದಿಯುತೇ
ನಾಣಿಲ್ಲದಿಸಿತು ಮೆರಳೆಯೇರಿ ಸಾರುವೆಯೊ || ಅರೆ ||
ಪರಿಮಳಭರ ಪುಳುಕಿತತನು ತರಳತೆಯಿಂ ಮೆರೆಯುತತನು
ಶರಗಳ ಮುದ್ದಾಡುತೆ ನಲಿಸಿ     ಕಾಂತನಂತೆ
ಮೆರೆವೆಯೊ ಚುಂಬನಗಳ ಸಲಿಸಿ || ೧ ||

ಸಲೆ-ಮಧುವನಿಂಟೆ ಮೋಹದೊಲಲೆವ
ಪರಿಮೊಗಳನು ಸದಯದೆ ಸುಮುಕೊಂದಿವೆಯೊ || ಸಲೆ ||
ಮಧುಮಥನನ ಕೊಳಲದನಿಯ ಮಧುರತೆಯನು ಪೋಲುವನಿಯ
ಮೃದುನಿನದವಗ್ಗೆಯುತೆ ಸುಳಿದು     ಬೀಣೆಯಂತೆ
ಕದಿವೆಯೊ ನಮ್ಮೊಲ್ಮೆಯನೊಲಿದು || ೨ ||

**೧ ರಮಣಿ**-ಸುಂದರನಾದ ಯುವಕನೆ, ನೀನಾರು ?

**ಸುಲೇಮಾನ್**-ನಾನು ದಾರಷಿಕೋವಿನ ಪುತ್ರ, ಸುಲೇಮಾನ್.

**೧ ರಮಣಿ**-ದಾರಷಿಕೊ ಮೊಗಲ್ ಸಮ್ರಾಟ್ ಷಾಜಹಾನ ಪುತ್ರನು. ಸಮ್ರಾಟನ ಮೊಮ್ಮಗನೇ ನೀನು!

**ಸುಲೇಮಾನ್**-ಹೌದು;

**೧ ರಮಣಿ**-ಮತ್ತು ನಾನಾರೆಂಬುದನ್ನು ನೀನು ಕೇಳುವುದಿಲ್ಲವೆ ಸುಲೇಮಾನ್, ನಾನು ಕಾಶ್ಮೀರದ ಪ್ರಧಾನ ನರ್ತಕಿ; ರಾಜನ ಪ್ರೀತಿಪಾತ್ರಳಾದ ವೇಶ್ಯೆ. ಇವರೆನ್ನ ಸಖಿಯರು. ಬಾ, ನನ್ನೊಡನೆ ದೋಣಿಯಲ್ಲಿ.

**ಸುಲೇಮಾನ್**-ನಿನ್ನೊಡನೆ ! ಅಯ್ಯೋ ಹತಭಾಗಿನಿ, ಯಾತಕ್ಕೋಸ್ಕರ ?

೧ ರಮಣಿ--ಕುಮಾರ ನೀನೇನು ಶಿಶುವಲ್ಲ. ನಮ್ಮ ವೃತ್ತಿಯು ನಿನಗೆ ತಿಳಿಯದೊ ?

ಸುಲೇಮಾನ್-ತಿಳಿದಿರುವೆನು; ಆದುದರಿಂದಲೆ ನಿಮ್ಮ ಮೇಲಿಷ್ಟೊಂದು ಅನುಕಂಪ ! ಇಂತಹ ರೂಪ! ಈ ಯೌವ್ವನ! ಇದೇನು ವ್ಯಾಪಾರದ ಸಾಮುಗ್ರಿಯೇ? ರೂಪವು ಕೇವಲ ದೇಹಮಾತ್ರ, ಪ್ರೇಮವೇ ಅದರ ಪ್ರಾಣ; ಪ್ರಾಣಹೀನವಾದ ದೇಹವನ್ನು ತೆಗೆದುಕೊಂಡೇನು ಮಾಡುವುದು, ಸುಂದರಿ.

೧ ರಮಣಿ--ಏಕೆ ನಾನು ಪ್ರೀತಿಸಲರಿಯದವಳೆಂದು ತಿಳಿದೆಯೊ?

ಸುಲೇಮಾನ್--ನೀನದನ್ನು ಹೇಗೆತಾನೇ ತಿಳಿಯಬಲ್ಲೆ ಹೇಳು? ಯಾರು ರೂಪವನ್ನು ಸಂತೆಗಿಡುವರೊ, ಯಾರು ತಮ್ಮ ನಗುವನ್ನು ಕೂಡಾ ವಿಕ್ರಯಮಾಡಿ ಜೀವಿಸುವರೋ ಅವರು ಪ್ರೇಮವನ್ನರಿಯಬಲ್ಲರು ಹೇಗೆ; ಪ್ರೇಮವು ಕೇವಲ ಕೊಡುವುದಕ್ಕಿಚ್ಛಿಸುವದು. ಅದು ತ್ಯಾಗದ ಪರಮಾವಧಿ ಅಂತಹ ಸುಖವನ್ನು ನೀನು ಹೇಗೆ ತಿಳಿಯಬಲ್ಲೆ ತಾಯಿ;

೧ ರಮಣಿ-ಹಾಗಾದರೆ ನಾವಾನಾಗಲೂ ಪ್ರೀತಿಸುವುದಿಲ್ಲವೊ?

ಸುಲೇಮಾನ್--ಪ್ರೀತಿಸುವಿರಿ. ನೀವು ಪ್ರೀತಿಸುವಿರಿ; ಕಿನ್‌ಕಾಪಿನ ಉಷ್ಣೀಷವನ್ನು ಮುತ್ತಿನ ಉಂಗರವನ್ನು, ಮಕಮಲ್ಲಿನ ಪಾದರಕ್ಷೆಯನ್ನು, ದಂತದ ಚಡಿಯನ್ನು. ಪ್ರೀತಿಸಬಲ್ಲಿರಿ; ಗುಂಗುರಾದ ಕೇಶವನ್ನು, ವಿಶಾಲವಾದ ಕಣ್ಣುಗಳನ್ನು, ಸರಳವಾದ ನಾಸಿಕವನ್ನು, ಕೆಂಪಾದ ತುಟಿಗಳನ್ನು. ನನ್ನೀಗೌರವರ್ಣ ಹಾಗೂ ಸಮ್ರಾಟನ ಪೌತ್ರನೆಂಬುದು ನಿನ್ನನ್ನು ಮುಗ್ಧಳಾಗಿ ಮಾಡಿತಲ್ಲವೆ? ಇದು ಪ್ರೀತಿಯಲ್ಲ; ಪ್ರೀತಿಯು ಅಂತರಿಕ ವಸ್ತು; ಆತ್ಮ ಆತ್ಮಗಳಲ್ಲಿ ಹೋಗುತಾಯಿ.

೨ ರಮಣಿ--ಮಹಾರಾಜರು ಬರುತ್ತಿರುವರು.

೧ ರಮಣಿ--ಇದು ಸಮಯವಲ್ಲ ನಡೆಯಿರಿ; ಸುಲೇಮಾನ್, ಇದರ ಪ್ರತಿಫಲವನ್ನು ಹೊಂದುವೆ.

ಸುಲೇಮಾನ್--ಏಕೆ ಕೋಪಿಸುವೆ ತಾಯಿ, ನಿನ್ನ ಮೇಲೆನಗೆ ಘೃಣೆಯಾಗಲಿ, ವಿದ್ವೇಷವಾಗಲಿ ಇಲ್ಲ. ಕೇವಲ ಅನುಕಂಪ! ಸೀಮಾರಹಿತವಾದ ಅತಲಸ್ಪರ್ಶಿಯಾದ ಅನುಕಂಪ! (ಹಾಡುತ್ತಾ ಹೊರಟುಹೋಗುವರು)

ಆಶ್ಚರ್ಯ! ಈ ಅಪಾರ್ಥಿವರೂಪ, ಈ ಜ್ಯೋತಿರ್ಮಯವಾದ ಕಟಾಕ್ಷ, ಈ ಅಪ್ಸರೋಪಮವಾದ ಶರೀರಘಟನೆ, ಈ ಕಿನ್ನರಕಂಠ ಇವೆಲ್ಲ ಎಷ್ಟೊಂದು ಸುಂದರ! ಹಾಗೂ ಎಷ್ಟೊಂದು ಕುತ್ಸಿತ! (ಅಲ್ಲಿಂದಿಲ್ಲಿಗೆ ತಿರುಗಾಡುತ್ತಿರುವನು)

(ಶ್ರೀನಗರದ ರಾಜಾ ಪೃಥ್ವಿಸಿಂಹನ ಪ್ರವೇಶ)

ರಾಜ – ಕುಮಾರ. . .

ಸುಲೇಮಾನ್—ಅದೇಕೆ ಮಹಾರಾಜ ?

ರಾಜ—ನೀನು ನಿರಾಶ್ರಯನಾಗಿದ್ದುದನ್ನು ನೋಡಿ ಆಶ್ರಯವನ್ನು ಕೊಟ್ಟೆನು. ಮತ್ತು ಸಾಧ್ಯವಾದಷ್ಟು ಸುಖದಲ್ಲಿಯೂ ಇಟ್ಟೆನು. ನಿನ್ನ ಸಲುವಾಗಿ ಔರಂಗ ಜೇಬನ ಸೈನ್ಯದೊಡನೆ ಯುದ್ಧಮಾಡಿದೆನು.

ಸುಲೇಮಾನ್-ನಾನಿವುಗಳನ್ನಾವಾಗಲೂ ಅಸ್ವೀಕಾರಮಾಡಲಿಲ್ಲ.

ರಾಜ-ಈಗಲೂ ನಿನ್ನನ್ನು ಹಿಡಿದುಕೊಡಲು ಸಮ್ರಾಟನ ಕಡೆಯಿಂದ ಷೈಸ್ತಾಖಾನನು ಎಷ್ಟೋ ಅನುನಯಮಾಡುತ್ತಿರುವನು, ಪ್ರಲೋಭವನ್ನು ತೋರಿಸುತ್ತಿರುವನು. ನಾನು ಯಾವದಕ್ಕೂ ಸಮ್ಮತನಾಗಲಿಲ್ಲ.

ಸುಲೇಮಾನ್-ನಿನ್ನ ಉಪಕಾರಕ್ಕೆ ನಾನಾವಾಗಲೂ ಕೃತಜ್ಞನಾಗಿರುವೆನು.

ರಾಜ--ಆದರೆ ನೀನಿಷ್ಟೊಂದು ಅಲ್ಪನು, ಉಚ್ಛೃಂಖಲನು ಮತ್ತು ಚಂಚಲಚಿತ್ತನೆಂದು ನಾನೆಂದಿಗೂ ತಿಳಿದಿರಲಿಲ್ಲ.

ಸುಲೇಮಾನ್--ಇದೇನು ಮಹಾರಾಜ !

ರಾಜ-ನಾನು ನಿನ್ನನ್ನು ನನ್ನ ಬಹಿರುದ್ಯಾನದಲ್ಲಿ ತಿರುಗಾಡುವಂತೆ ಹೇಳಿದೆನು. ನೀನದನ್ನು ಬಿಟ್ಟು ನನ್ನ ಪ್ರಮೋದೋದ್ಯಾನವನ್ನು ಪ್ರವೇಶಿಸಿ ನನ್ನ ಭೋಗಿನಿಯೊಡನೆ ಹಾಸ್ಯಾಲಾಪಮಾಡುವಿಯೆಂದು ತಿಳಿದಿರಲಿಲ್ಲ.

ಸುಲೇಮಾನ್-ಮಹಾರಾಜ, ತಾವು ತಪ್ಪಾಗಿ ತಿಳಿದುಕೊಂಡಿರುವಿರಿ.

ರಾಜ--ನೀನು ಸುಂದರ, ಯುವಕ, ರಾಜಪುತ್ರ; ಆದ ಮಾತ್ರಕ್ಕೇ . . .

ಸುಲೇಮಾನ್-ಮಹಾರಾಜ ನಾನು—

ರಾಜ—ಹೋಗು ಯುವರಾಜ; ದೋಷವನ್ನು ಮುಚ್ಚಿಡುವ ಪ್ರಯತ್ನವು ವ್ಯರ್ಥ.

(ಇಬ್ಬರೂ ಬೇರೆ ಬೇರೆ ಕಡೆಯಿಂದ ಹೊರಟುಹೋಗುವರು.)

———:0:———

# ಮೂರನೆಯ ಅಂಕ.

## ನಾಲ್ಕನೆಯ ನೋಟ.

ಸ್ಥಾನ— ಅಲಹಾಬಾದಿನಲ್ಲಿ ಔರಂಗಜೀಬನ ಶಿಬಿರ. ಕಾಲ— ರಾತ್ರಿ.
ಔರಂಗಜೀಬನು ಏಕಾಕಿಯಾಗಿ ಪ್ರವೇಶಿಸುವನು.

**ಔರಂಗಜೀಬ**--ಈ ಮಹಾರಾಜ ಯಶೋವಂತನು ಎಂತಹ ಅಸಮ ಸಾಹಸಿಕನು. ಖಿಜುಯಾ ಯುದ್ಧಕ್ಷೇತ್ರದಲ್ಲಿ ಆದಿನ ರಾತ್ರಿ ನನ್ನ ರಂಗಮಹಲನ್ನೂ ಬಿಡದೆ ಲೂಟಿಮಾಡಿ ಜಲೋಚ್ಛ್ವಾಸದಂತೆ ನನ್ನ ಸೈನ್ಯವನ್ನು ಹಾದು ಹೊರಟುಹೋದ ನಲ್ಲ. ಅದ್ಭುತ! ಏನೇ ಆಗಲಿ, ಷೂಜನಸಂಗಡ ಈ ಯುದ್ಧದಲ್ಲಿ ಜಯಲಾಭ ವಾಯಿತು. ಈ ದಿಕ್ಕಿನಲ್ಲಿ ಮತ್ತೊಮ್ಮೆ ಮೇಘಸಂಚಾರವಾಗಹತ್ತಿದೆ. ಷಹ ನಾರಾಜ ಮತ್ತು ದಾರಾ; ಸಂಗಡ ಯಶೋವಂತಸಿಂಹ. ಭಯಕ್ಕೆ ಕಾರಣವಿದೆ. ಒಂದು ವೇಳೆ ಇಲ್ಲಿ ಹಾಗಾಗಲಾರದು. ಈ ಜಯಸಿಂಹನಿಂದಲೇ ಕಾರ್ಯವಾಗ ಬೇಕು. ಇದೋ ಆತನೇ ಬಂದನು.

(ಮಹಾರಾಜ ಜಯಸಿಂಹನ ಪ್ರವೇಶ)

**ಜಯಸಿಂಹ**--ಜಹಪನಾಯವರು ನನ್ನನ್ನು ಸ್ಮರಿಸಿಕೊಂಡಂತಿದೆ.

**ಔರಂಗಜೀಬ**--ಹೌದು; ನಾನಾಗಿನಿಂದ ನಿಮ್ಮ ನಿರೀಕ್ಷಣೆಯಲ್ಲಿಯೇ ಇದ್ದೆನು. ಹಾ! ಎಷ್ಟೊಂದು ಸೆಕೆಯಾಗುತ್ತಿರುವುದು?

**ಜಯಸಿಂಹ**--ಸೆಕೆ ನನಗೇನೋ ಕಾಣದಲ್ಲ, ಜಹಾಪನಾ.

**ಔರಂಗಜೀಬ**—ನನ್ನ ಸರ್ವಾಂಗವೂ ಬೆಂಕಿಯಮೇಲಿಟ್ಟಂತಿದೆ. ನಿಮಗೇನು ತೋ ರುತ್ತಿಲ್ಲವೆ, ಮಹಾರಾಜ?

**ಜಯಸಿಂಹ**—ಜಹಪನಾಯವರ ಮೆಹರ್‌ಬಾನಿಯಿಂದ ನಾನು ಆರೋಗ್ಯವಾಗಿ ರುವೆನು.

**ಔರಂಗಜೀಬ**--ನೋಡು ಮಹಾರಾಜ, ನಾನು ನಾಳೆ ಪ್ರಾತಃಕಾಲ ಡಿಲ್ಲಿಗೆ ಹಿಂದಿ ರುಗುವೆನು. ನೀವೂ ನನ್ನ ಕೂಡ ಬರುವಿರಷ್ಟೆ?

**ಜಯಸಿಂಹ**--ನಿಮ್ಮಿಷ್ಟವು ಹೇಗಿರುವುದೋ ಹಾಗೆಯೇ.

**ಔರಂಗಜೀಬ**--ನನ್ನಿಷ್ಟವು ನೀವು ಕೂಡ ಬರಬೇಕೆಂದು.

**ಜಯಸಿಂಹ**--ಆಜ್ಞೆಯಂತೆ. ಪ್ರಾತಃಕಾಲ ನಾನೂ ಸಿದ್ಧನಾಗುವೆನು. ಜಹಪನಾಯವರ ಆಜ್ಞೆಯನ್ನು ಪಾಲಿಸುವುದೆಂದರೆ ನನಗೆ ಬಹು ಸಂತೋಷ.

**ಔರಂಗಜೀಬ**--ಅದನ್ನು ನಾನು ಬಲ್ಲೆ ಮಹಾರಾಜ್, ತಮ್ಮಂತಹ ಮಿತ್ರರು ಈ ಇಹ ಸಂಸಾರದಲ್ಲಿ ಬಹು ವಿರಳ. ನೀವೆನ್ನ ವಾಮಹಸ್ತದಂತೆ.

(ಜಯಸಿಂಹನು ಸಲಾಂ ಮಾಡುವನು.)

**ಔರಂಗಜೀಬ**--ಮಹಾರಾಜ, ಯಶೋವಂತಸಿಂಹನು ನಮ್ಮ ಭಂಡಾರವನ್ನೂ ಶಿಬಿರವನ್ನೂ ಲೂಟಿಮಾಡಿಯೂ ಸುಮ್ಮನಾಗದಿರುವುದು ಆಶ್ಚರ್ಯ! ಈತನೀಗ ವಿದ್ರೋಹಿಯಾದ ಷಹನಾರಾಜ ಮತ್ತು ದಾರನ ಪಕ್ಷವನ್ನು ಸೇರಿರುವನಂತೆ.

**ಜಯಸಿಂಹ**-ಅಯ್ಯೋ! ಅವನ ಮೌಢ್ಯವೆ!

**ಔರಂಗಜೀಬ**--ನನಗೋಸ್ಕರ ದುಃಖವೇನೂ ಇಲ್ಲ: ಮಹಾರಾಜನು ತನ್ನ ಸರ್ವನಾಶವನ್ನು ತಾನೇ ನಿಮಂತ್ರಣಮಾಡಿ ಕರೆದುತರುವನಲ್ಲ ಎಂದು—

**ಜಯಸಿಂಹ**--ಅದೇ ಬಹಳ ಶೋಚನೀಯವಾದ್ದು.

**ಔರಂಗಜೀಬ**--ಇಷ್ಟರಮೇಲೆ ನೀವಾತನ ಅಂತರಂಗ ಬಂಧುಗಳು. ಅವನ ಉದ್ಧಟತನವನ್ನು ನಿಮ್ಮ ಸಲುವಾಗಿ ಎಷ್ಟೋಸಾರಿ ಕ್ಷಮಿಸಿರುವೆನು. ಭಂಡಾರವನ್ನು ಲೂಟಿಮಾಡಿಕೊಂಡು ಹೋದಾಗಲೂ ನಿಮ್ಮನ್ನು ನೋಡಿಯೇ ನಾನು ಸುಮ್ಮನಾದೆನು. ಆದರೂ ಅವನು ನಿರಸ್ತನಾಗಲಿಲ್ಲ.

**ಜಯಸಿಂಹ**--ನಾನೊಮ್ಮೆ ಅವನನ್ನು ನೋಡಿ ಮಾತನಾಡಲೆ?

**ಔರಂಗಜೀಬ**-ಹಾಗೆಯೇ ಮಾಡಿ. ಮತ್ತು ಈ ಮಾತನ್ನೂ ತಿಳಿಸಿರಿ:-ಆತನೀ ಯುದ್ಧದಲ್ಲಿ ಯಾವಪಕ್ಷವನ್ನೂ ವಹಿಸದೆ ತಟಸ್ಥನಾಗಿದ್ದರೆ ಆತನ ಸರ್ವಾಪರಾಧಗಳನ್ನು ಮನ್ನಿಸುವೆನು. ಮತ್ತು ಗುಜರಾತಿನ ಸುಬೆಯನ್ನು ಆತನಿಗೆ ಕೊಡುವೆನು— ಎಂದು.

**ಜಯಸಿಂಹ**-ಜಹಪನಾಯವರು ಬಹು ಉದಾರಿಗಳು. ಯಶೋವಂತಸಿಂಹನು ಸಮ್ಮತಿಸುವಂತೆ ನಾನು, ಮಾಡುವೆನು.

**ಔರಂಗಜೀಬ**--ನೋಡಿ, ಆತನು ನಿಮ್ಮ ಬಂಧು; ಆತನನ್ನು ರಕ್ಷಣೆಮಾಡುವುದು ನಿಮ್ಮ ಕರ್ತವ್ಯ.

**ಜಯಸಿಂಹ**--ನಿಶ್ಚಯ.

**ಔರಂಗಜೀಬ**--ಹಾಗಾದರೆ ನೀವೀಗ ಹೊರಡಿ, ಮಹಾರಾಜ; ಡಿಲ್ಲಿಗೆ ಹೋಗಲು ಸಿದ್ಧರಾಗಿರಿ.

**ಜಯಸಿಂಹ**--ಆಜ್ಞೆಯಂತೆ. (ಹೋಗುವನು)

**ಔರಂಗಜೀಬ**--ಇದೆಲ್ಲ 'ನಿಮ್ಮ ಸಲುವಾಗಿ' ಅಭಿನಯವು ಸರಿಯಾದಂತಿದೆ. ಈ ರಜಪೂತಜಾತಿಯು ಬಹು ಸರಳ. ಉದಾರತೆಯಿಂದ ವಶಮಾಡಕೊಳ್ಳಬಹುದು. ನಾನು ಆ ವಿದ್ಯೆಯನ್ನು ಅಭ್ಯಾಸಮಾಡುವೆನು. ಎಂತ ವಿಷಮ ಸಂಯೋಗ? ಷಹನಾರಾಜ ಮತ್ತು ಯಶೋವಂತಸಿಂಹ--ಆದರೆ ನನ್ನ ಪ್ರಧಾನ ಆಶಂಕೆಯು ಈ ನನ್ನ ಕುಮಾರ ಮಹಮುದನಲ್ಲಿ. ಅವನ ರೀತಿಯು (ತಲೆಯನ್ನಾಡಿಸುತ್ತಾ) ಇದೇನು ಅಲ್ಪವಿಷಯವಲ್ಲ. ನನ್ನಲ್ಲಿಂತ ಅವಿಶ್ವಾಸದ ಬೀಜವನ್ನು ಅವನಾ ಸರಳ ಹೃದಯದಲ್ಲಿ ನೆಟ್ಟವರಾರು? ಜಹನಾರಳೆ? ಇದೋ ಮಹಮುದನೇ ಬಂದನು.

(ಮಹಮುದನು ಬರುವನು)

**ಮಹಮ್ಮದ್**--ತಂದೆಯೇ, ನನ್ನನ್ನು ಕರೆದಿರಾ?

**ಔರಂಗಜೀಬ**—ಹೌದು; ನಾನು ಪ್ರಾತಃಕಾಲ ರಾಜಧಾನಿಗೆ ಹಿಂದಿರುಗುವೆನು. ನೀನು ಸೂಜನನ್ನು ಬೆನ್ನಟ್ಟಿಹೋಗು. ಮೀರಜುಮ್ಲನು ನಿನ್ನ ಸಹಾಯಕ್ಕೆ ನಿಲ್ಲುವನು.

**ಮಹಮ್ಮದ್**--ತಂದೆಯ ಆಜ್ಞೆಯಂತೆ.

**ಔರಂಗಜೀಬ**--ಒಳ್ಳೇದು ಹೋಗು; ಏಕೆ ನಿಂತಿರುವೆ? ಈ ವಿಷಯದಲ್ಲಿ ಕೇಳಬೇಕಾದ್ದು ಮತ್ತೇನಾದರೂ ಇದೆಯೋ?

**ಮಹಮ್ಮದ್**—ಇಲ್ಲ ತಂದೆಯೆ; ನಿನ್ನ ಆಜ್ಞೆಯೊಂದೇ ಸಾಕು.

**ಔರಂಗಜೀಬ**-ಸರಿ.

**ಮಹಮುದ್**--ನನ್ನದೊಂದು ಬಿನ್ನಹವಿದೆ, ತಂದೆಯೆ.

**ಔರಂಗಜೀಬ**--ಅದೇನು? ಏಕೆ ಸುಮ್ಮನಿರುವೆ ಮಹಮುದ್? ಹೇಳು ಪುತ್ರ.

**ಮಹಮುದ್**--ಅನೇಕ ದಿನದಿಂದ ಈ ಮಾತನ್ನು ಕೇಳಬೇಕೆಂದು ಮನಸ್ಸು ಮಾಡಿದ್ದೆನು. ಪರಂತು ಇನ್ನಾ ಸಂಶಯವನ್ನು ಮನಸ್ಸಿನಲ್ಲಿಟ್ಟುಕೊಂಡಿರಲು ನನ್ನಿಂದಾಗಲಾರದು. ನನ್ನ ಔದ್ಧತ್ಯವನ್ನು ಕ್ಷಮಿಸು ತಂದೆಯೆ.

**ಔರಂಗಜೀಬ**—ಹೇಳು ಮಹಮುದ್.

**ಮಹಮುದ್**—ತಂದೆಯೆ, ಸಮ್ರಾಟ್ ಷಾಜಹಾನನೇಕೆ ಬಂದಿ?

**ಔರಂಗಜೀಬ**—ಬಂದಿಯೇ! ಯಾರು ಹೇಳಿದರು?

**ಮಹಮುದ್**--ಹಾಗಾದರಾತನನ್ನು ಆಗ್ರಾದ ಪ್ರಾಸಾದದಲ್ಲಿ ಬಂಧಿತನನ್ನಾಗಿಟ್ಟಿರುವುದೇಕೆ?

**ಔರಂಗಜೀಬ**—ಅದರಿಂದೊಂದು ಪ್ರಯೋಜನವುಂಟು.

**ಮಹಮುದ್**—ಮತ್ತು ನಮ್ಮ ಚಿಕ್ಕತಂದೆ! ಆತನನ್ನೀರೀತಿಯಾಗಿ ಬಂದಿಯಾಗಿಡುವದರಿಂದೇನು ಪ್ರಯೋಜನವುಂಟು?

**ಔರಂಗಜೀಬ**--ಇದೆ.

**ಮಹಮುದ್**—ಮತ್ತು ನೀನು ಸಿಂಹಾಸನದಲ್ಲಿ ಕುಳಿತಿರುವುದು! ತಾತಂದಿರು ಜೀವಿಸಿರುವಾಗಲೆ?

**ಔರಂಗಜೀಬ**-ಹಾ!

**ಮಹಮುದ್**-ಹೌದು ತಂದೆಯೆ. (ತಲೆ ತಗ್ಗಿಸುವನು.)

**ಔರಂಗಜೀಬ**-ಪುತ್ರ, ರಾಜನೀತಿಯು ಬಹು ತೊಡಕಾದ ವಿಷಯ. ಈ ವಯಸ್ಸಿನಲ್ಲಿ ನೀನದನ್ನು ತಿಳಿಯಲಾರೆ. ತಿಳಿಯುವ ಪ್ರಯತ್ನವನ್ನು ಮಾಡಬೇಡ.

**ಮಹಮುದ್**-ತಂದೆಯೇ ಸರಳಚಿತ್ತನಾದ ಸೋದರನನ್ನು ಮೋಸದಿಂದ ಸೆರೆಹಿಡಿದು ಸ್ನೇಹಮಯನಾದ ತಂದೆಯನ್ನು ಸಿಂಹಾಸನಚ್ಯುತನನ್ನಾಗಿ ಮಾಡಿ, ಧರ್ಮದ ಹೆಸರಿನಿಂದ ಆ ಸಿಂಹಾಸನದಲ್ಲಿ ಕುಳಿತುಕೊಳ್ಳುವುದಕ್ಕೆ 'ರಾಜನೀತಿ' ಯೆಂಬ ಹೆಸರಾದರೆ ಆ ರಾಜನೀತಿಯು ನನ್ನ ಸಲುವಾಗಲ್ಲ.

**ಔರಂಗಜೀಬ**-ಮಹಮುದ್, ಏನಾದರೂ ಅಸ್ವಸ್ಥನಾಗಿರುವೆಯಾ?

**ಮಹಮುದ್**-(ಕಂಪಿತಸ್ವರದಿಂದ) ಇಲ್ಲ, ತಂದೆಯೆ; ಆಪಾತತಃ ನನ್ನಷ್ಟು ಸುಸ್ಥಕಾಯನಾದ ವ್ಯಕ್ತಿಯು ಈ ಭಾರತವರ್ಷದಲ್ಲಿ ಮತ್ತಾರೂ ಇಲ್ಲ.

**ಔರಂಗಜೀಬ**--ಹಾಗಾದರೆ—

**ಮಹಮುದ್**--(ನೀರವ)

**ಔರಂಗಜೀಬ**-ನನ್ನಮೇಲಿನ ನಿನ್ನ ಪ್ರಗಾಢ ವಿಶ್ವಾಸವನ್ನು ವಿಚಲಿತ ಮಾಡಿದವರಾರು, ಮಹಮುದ್?

**ಮಹಮದ್**-ನೀನೇ ತಂದೆಯೇ. ಎಷ್ಟು ದಿನ ಸಾಧ್ಯವಾಗಿತ್ತೋ, ಅಷ್ಟು ದಿನವೂ ನಾನು ನಿನ್ನನ್ನು ವಿಶ್ವಾಸಮಾಡಿದೆನು. ಅದಿನ್ನು ಸಾಧ್ಯವಿಲ್ಲ. ನನ್ನ ಮನಸ್ಸು ಅವಿಶ್ವಾಸವಿಷದಿಂದ ಝರ್ಜರಿತವಾಗಿಹೋಗಿದೆ.

**ಔರಂಗಜೀಬ**-ಇದೆಯೋ ನಿನ್ನ ಪಿತೃಭಕ್ತಿ? ಆಗಕೂಡದೇಕೆ! ಸರ್ವಾಪೇಕ್ಷೆಯಾಗಿ ದೀಪದಡಿಯಲ್ಲಿಯೇ ಕತ್ತಲೆಯುಂಟಲ್ಲವೆ?

**ಮಹಮದ್**--ಪಿತೃಭಕ್ತಿ! ತಂದೆಯೇ, ನಾನಿಂದು ನಿನ್ನೆಡೆಯಲ್ಲಿ ಪಿತೃಭಕ್ತಿಯನ್ನು ಕಲಿಯಬೇಕೆ? ಪಿತೃಭಕ್ತಿ! ನೀನು ನಿನ್ನ ವೃದ್ಧ ತಂದೆಯನ್ನು ಬಂದಿಯಾಗಿ ಮಾಡಿ, ಆತನ ಯಾವ ಸಿಂಹಾಸನವನ್ನು ಆಕ್ರಮಿಸಿಕೊಂಡಿರುವೆಯೋ, ಆ ಸಿಂಹಾಸನವನ್ನು ನಾನು ಪಿತೃಭಕ್ತಿಯ ಸಲುವಾಗಿ ಕಾಲಿನಿಂದ ನೂಕಿಬಿಟ್ಟೆನು. ಪಿತೃಭಕ್ತಿ! ನಾನು ಪಿತೃಭಕ್ತನಾಗದೆಹೋಗಿದ್ದರೆ ಇಂದು ಡಿಲ್ಲಿಯ ಮಯೂರಾಸನದಲ್ಲಿ ಔರಂಗಜೀಬನು ಕುಳಿತುಕೊಳ್ಳುತ್ತಿರಲಿಲ್ಲ. ಕುಳಿತುಕೊಳ್ಳುತ್ತಿದ್ದನು-ಈ ಮಹಮದ್.

**ಔರಂಗಜೀಬ**--ಅದನ್ನು ಬಲ್ಲೆ ಮಹಮದ್! ಆದರಿಂದಲೇ ಆಶ್ಚರ್ಯಗೊಂಡಿರುವೆನು. ಆ ಪಿತೃಭಕ್ತಿಯನ್ನು ಕಳೆಯಬೇಡ, ವತ್ಸಾ.

**ಮಹಮದ್**--ಇಲ್ಲ; ಕಳೆದುಹೋಗುವ ಸಂಭವವಿಲ್ಲ ತಂದೆಯೇ. ಪಿತೃಭಕ್ತಿಯು ಮಹತ್ತಾದ ಪವಿತ್ರವಾದ ವಸ್ತು. ಆದರಾ ಪಿತೃಭಕ್ತಿಯನ್ನೂ ಮೀರಿದಂತ ಮತ್ತೊಂದು ವಸ್ತುವುಂಟು. ಅದರ ಸಮ್ಮುಖದಲ್ಲಿ ತಂದೆ, ತಾಯಿ, ಅಣ್ಣ ತಮ್ಮಂದಿರು—ಎಲ್ಲರೂ ಅಗಣ್ಯರಾಗಿಹೋಗುವರು.

**ಔರಂಗಜೀಬ**-ನಿನ್ನ ಪಿತೃಭಕ್ತಿಯನ್ನು ಕಳೆಯಬೇಡವೆಂದು ಹೇಳುತ್ತಿರುವೆನು ಪುತ್ರ. ನೋಡು, ಭವಿಷ್ಯತ್ತಿನಲ್ಲೀ ಸಾಮ್ರಾಜ್ಯವು ನಿನ್ನದು.

**ಮಹಮದ್**-ನನಗೀ ಸಾಮ್ರಾಜ್ಯದ ಲೋಭವನ್ನು ತೋರಿಸುತ್ತಿರುವೆಯಾ, ತಂದೆಯೇ? ಹೇಳಲಿಲ್ಲವೇ---ಕರ್ತವ್ಯದ ಸಲುವಾಗಿ ಈ ಭಾರತಸಾಮ್ರಾಜ್ಯವನ್ನು ನಾನೊಂದು ಮಣ್ಣು ಹೆಂಟೆಯಂತೆ ದೂರಕ್ಕೆಸೆದುಬಿಟ್ಟೆನೆಂದು? ತಾತನೂ ಅಂದಿನದಿನ ಈ ರಾಜ್ಯಲೋಭವನ್ನು ತೋರಿಸಿದನು; ನೀನು ಇಂದು ಅದೇ ರಾಜ್ಯಲೋಭವನ್ನು ತೋರಿಸಿದೆ. ಹಾಯ್! ಹಾಯ್! ಪೃಥ್ವಿಯಲ್ಲಿ ಸಾಮ್ರಾಜ್ಯವು ಅಷ್ಟೊಂದು ಮಹರ್ಘವಾದ ವಸ್ತುವೆ? ಮತ್ತು ವಿವೇಕವು ಅಷ್ಟೊಂದು ಬೆಲೆಯಿಲ್ಲದ್ದೆ? ಸಾಮ್ರಾಜ್ಯಕ್ಕೋಸ್ಕರ ನನ್ನ ವಿವೇಕವನ್ನು ಕಳೆದುಕೊಳ್ಳಲೆ?

ತಂದೆಯೇ, ನೀನಾವ ವಿವೇಕವನ್ನು ತ್ಯಜಿಸಿ ಈ ಸಾಮ್ರಾಜ್ಯವನ್ನು ಆರ್ಜಿಸಿದೆಯೋ, ಆ ಸಾಮ್ರಾಜ್ಯವನ್ನು ಪರಲೋಕಕ್ಕೆ ನಿನ್ನ ಸಂಗಡ ತೆಗೆದುಕೊಂಡು ಹೋಗಬಲ್ಲೆಯ? ಆದರೀವಿವೇಕದ ಫಲವು ಮಾತ್ರ ನಿನ್ನನ್ನು ಬಿಡದೆ ಸಂಗಡಲೇ ಬರುವುದು.

**ಔರಂಗಜೀಬ**-ಮಹಮುದ್—

**ಮಹಮುದ್**-ತಂದೆಯೇ—

**ಔರಂಗಜೀಬ**--ಇದರರ್ಥವೇನು?

**ಮಹಮುದ್**-ಇದರರ್ಥವೇನೆಂದರೆ—ನಾನಿಂದು ನಿನ್ನ ಸಲುವಾಗಿ ಎಲ್ಲವನ್ನು ಕಳೆದುಕೊಂಡು ಕುಳಿತಿರುವೆನು. ನೀನಾದರೂ ಇರುವೆಯೆಂದು ಹೃದಯಮಧ್ಯದಲ್ಲಿ ಹುಡುಕಿ ನೋಡಲಾಗಿ ನಿನ್ನನ್ನೂ ಕಳೆದುಕೊಂಡೆನು. ಇಂದು ನನ್ನಂತಹ ದರಿದ್ರನಾರು? ಮತ್ತು ನೀನು ಈ ಭಾರತಸಾಮ್ರಾಜ್ಯವನ್ನೇನೋ ಹೊಂದಿದೆ; ಆದರದಕ್ಕಿಂತ ಉತ್ತಮವಾದ ಮತ್ತೊಂದುಸಾಮ್ರಾಜ್ಯವನ್ನು ಕಳೆದುಕೊಂಡೆ.

**ಔರಂಗಜೀಬ**-ಯಾವುದು ಆ ಸಾಮ್ರಾಜ್ಯ?

**ಮಹಮುದ್**-ನನ್ನ ಪಿತೃಭಕ್ತಿ! ಅದೆಂತ ರತ್ನ, ಎಂತಹ ಸಂಪತ್ತು! ಅದನ್ನು ಕಳೆದುಕೊಂಡೆಯಲ್ಲ. ಇಂದು ನೀನಾವುದನ್ನು ತಿಳಿಯಲಾರೆ, ಮುಂದೊಂದು ದಿನವಾದರೂ ತಿಳಿವೆಯೆಂದು ತೋರುವುದು. (ಹೋಗುವನು)

(ಔರಂಗಜೀಬನು ಗಂಭೀರಮನದಿಂದ ಬೇರೆ ಕಡೆಯಿಂದ ಹೊರಟುಹೋಗುವನು)

## ಮೂರನೆಯ ಅಂಕ

### ಐದನೆಯ ನೋಟ.

[ಸ್ಥಾನ:—ಯೋಧಪುರದ ರಾಜಪ್ರಾಸಾದದಲ್ಲಿ ಒಂದು ಕೊಠಡಿ, ಕಾಲ:—ಮಧ್ಯಾಹ್ನ ಯಶೋವಂತಸಿಂಹ ಮತ್ತು ಜಯಸಿಂಹ]

**ಜಯಸಿಂಹ**--ಈ ರಕ್ತಪಾತದಿಂದ ನಿನಗಾಗುವ ಲಾಭವೇನು?

**ಯಶೋವಂತ**-ಲಾಭವೇ? ಲಾಭವೇನೂ ಇಲ್ಲ.

**ಜಯಸಿಂಹ**-ಹಾಗಾದರೆ ವ್ಯರ್ಥವಾಗೀ ರಕ್ತಪಾತವೇಕೆ? ಈ ಯುದ್ಧದಲ್ಲೂ ಔರಂಗಜೀಬನಿಗೆ ಜಯವಾದರೆ—

**ಯಶೋವಂತ**--ಯಾರು ಬಲ್ಲರು?

**ಜಯಸಿಂಹ**-ಔರಂಗಜೇಬನು ಯಾವಾಗ, ಯಾವ ಯುದ್ಧದಲ್ಲಿ, ಪರಾಜಿತನಾದುದನ್ನು ನೋಡಿರುವೆ?

**ಯಶೋವಂತ**-ಇಲ್ಲ; ಔರಂಗಜೇಬನು ಯಥಾರ್ಥನಾದ ವೀರನು. ಆ ದಿನ ನರ್ಮದಾಯುದ್ಧದಲ್ಲಿ ನಾನವನು ಅಶ್ವಾರೂಢನಾಗಿದ್ದುದನ್ನು ನೋಡಿದುದು ಚೆನ್ನಾಗಿ ನೆನಪಿದೆ. ಈ ಜನ್ಮದಲ್ಲಿ ನಾನಾ ದೃಶ್ಯವನ್ನೆಂದಿಗೂ ಮರೆಯಲಾರೆ. ನಾಲ್ಕೂ ಕಡೆ ಪಿರಂಗಿಯ ಗುಂಡುಗಳು ಅಜಸ್ರಧಾರೆಯಾಗಿ ಸುರಿಯುತ್ತಿದ್ದವು. ಅವನಾಕಡೆ ಲಕ್ಷ್ಯವನ್ನು ಕೊಡದೆ, ಮೌನನಾಗಿ ತೀಕ್ಷ್ಣದೃಷ್ಟಿಯಿಂದ ಯುದ್ಧವನ್ನು ನೋಡುತ್ತಿದ್ದನು. ನಾನಾಗ ವಿದ್ವೇಷದಿಂದ ತುಂಬಿದ್ದೆನು. ಆದರೂ ಮನಸ್ಸಿನಲ್ಲಿ ಅವನನ್ನೊಮ್ಮೆ ಸ್ತುತಿಸಿದೆನು. ಔರಂಗಜೇಬನು ಯಥಾರ್ಥನಾದ ವೀರಪುರುಷನು.

**ಜಯಸಿಂಹ**--ಅದನ್ನು ತಿಳಿದೂ ಮತ್ತೆ ಯುದ್ಧದ ಪ್ರಸಂಗವೇಕೆ?

**ಯಶೋವಂತ**--ಖಿಜುಯಾದಲ್ಲಿ ನನಗಾದ ಅಪಮಾನವನ್ನು ಪ್ರತಿಶೋಧ ಮಾಡಲಿಚ್ಛಿಸುವೆನು.

**ಜಯಸಿಂಹ**--ಪ್ರತಿಶೋಧರೂಪವಾಗಿ ನೀನಾತನ ಭಂಡಾರವನ್ನು ಲೂಟಿ ಮಾಡಿದೆಯಷ್ಟೆ?

**ಯಶೋವಂತ**--ಅಷ್ಟಕ್ಕದು ಪೂರ್ಣವಾಗಲಿಲ್ಲ. ಕಾರಣ: ಆ ಶೂನ್ಯ ಭಂಡಾರವನ್ನು ಮತ್ತೆ ಹಣದಿಂದ ತುಂಬುವದು ಔರಂಗಜೇಬನಿಗೆಷ್ಟುಹೊತ್ತು! ನಾನು ಭಂಡಾರವನ್ನು ಲೂಟಿಮಾಡಿ ನೆಟ್ಟಗೆ ಹಿಂದಿರುಗದೆ, ಸೂಜನಿಗೆ ಸಹಾಯಮಾಡಿದ್ದಲ್ಲಿ ಖಿಜುಯಾ ಯುದ್ಧದಲ್ಲಿ ಅವನಿಗೆಂದಿಗೂ ಪರಾಜಯವಾಗುತ್ತಿರಲಿಲ್ಲ. ಅಥವಾ ಆಗ್ರಾಕ್ಕೆ ಹೋಗಿ ಸಮ್ರಾಟ ಷಾಜಹಾನನನ್ನು ಮುಕ್ತನನ್ನಾಗಿ ಮಾಡಿದ್ದರೆ...ಆದರೆ ನನಗಾಗ ಏನೂ ತೋರದೆ ಹೋಯಿತು.

**ಜಯಸಿಂಹ**--ಅದರಿಂದ ನಿನಗಾಗುವ ಲಾಭವೇನು? ದಾರನು ಸಮ್ರಾಟನಾಗಲಿ, ಸೂಜನಾಗಲಿ, ಅಥವಾ ಔರಂಗಜೇಬನಾಗಲಿ--ನಿನಗದರಿಂದ ಏನು ಲಾಭ?

**ಯಶೋವಂತ**-ಕೇವಲ ಪ್ರತಿಶೋಧ! ನಾನವರೆಲ್ಲರನ್ನು ವಕ್ರದೃಷ್ಟಿಯಿಂದ ನೋಡುವೆನು. ಅವರೆಲ್ಲರಿಗಿಂತಲೂ ಹೆಚ್ಚು ವಕ್ರದೃಷ್ಟಿಯಿಂದ ನೋಡುವೆನು—ಈ ಧೂರ್ತ ಔರಂಗಜೇಬನನ್ನು.

ಜಯಸಿಂಹ-ಹಾಗಾದರೆ ಖಿಜುಯಾ ಯುದ್ಧದಲ್ಲಿ ನೀನವನ ಪಕ್ಷವನ್ನು ವಹಿಸಿದೆ ಯೇಕೆ?

ಯಶೋವಂತ--ಅಂದವನು ಡಿಲ್ಲಿಯ ರಾಜಸಭೆಯಲ್ಲಿ ಆಡಿದ ಮಾತುಗಳನ್ನು ನಾನು ನಂಬಿದೆನು. ಹಠಾತ್ತಾಗಿ ಎಂತಹ ಮಹತ್ವದ ಭ್ರಮೆಯನ್ನು ಹಿಡಿಸಿದನು; ಎಂತ ತ್ಯಾಗದ ಅಭಿನಯವನ್ನು ಮಾಡಿದನು; ಎಂತ ಆಂತರಿಕ ದೈನ್ಯವನ್ನು ತೋರಿಸಿದನು! ನಾನು ಚಮತ್ಕೃತನಾಗಿ ಮನಸ್ಸಿನಲ್ಲಿ ಭಾವಿಸಿದೆನು- 'ಇದೇನು! ನನ್ನ ಆಜನ್ಮಧಾರಣೆಯು, ನನ್ನ ಪ್ರಕೃತಿಗತವಾದ ವಿಶ್ವಾಸವು ಇಂದು ಸುಳ್ಳಾಯಿತೆ? ಇಂಥ ತ್ಯಾಗಿಯಾದ, ಉದಾರನಾದ, ಧಾರ್ಮಿಕನಾದ ಮನುಷ್ಯನನ್ನು ನಾನು ಪಾಪಿಷ್ಠನಾಗಿ ಮಾಡಿದ್ದೆನೆ!'' ಎಂದು ಭಾವಿಸಿ ಭ್ರಾಂತನಾಗಿ ಎಲ್ಲರಿಗಿಂತ ಮೊದಲು ನಾನೆ ''ಜಯ ಔರಂಗಜೀಬನಿಗೆ ಜಯವಾಗಲಿ'' ಎಂದು ಕೂಗಿದೆನು. ಆ ದಿನದ ಜಯವು ನರ್ಮದಾ ಹಾಗೂ ಖಿಜುಯಾ ಯುದ್ಧದ ಜಯಕ್ಕಿಂತ ಅದ್ಭುತವಾದುದು. ಮತ್ತೆ ಖಿಜುಯಾಯುದ್ಧಕ್ಷೇತ್ರದಲ್ಲಿ ಸ್ವಯಂ ಮನುಷ್ಯನನ್ನು ನೋಡಿದೆನು. ಅದೇ ತಂತ್ರೀ, ಧೂರ್ತ, ದ್ರೋಹಿಯಾದ ಔರಂಗಜೀಬ.

ಜಯಸಿಂಹ--ಮಹಾರಾಜ, ಖಿಜುಯಾಕ್ಷೇತ್ರದಲ್ಲಿ ನಿಮಗೆ ತೋರಿಸಿದ ರೂಢೋಚರಣೆಗೋಸ್ಕರ ಔರಂಗಜೀಬನು ಅತ್ಯಂತ ಕ್ಷುಬ್ಧನಾಗಿರುವನು. ಇಂತಹ ಅಚಿಂತಿತ ಅಪರಾಧಗಳು ಒಂದೊಂದುವೇಳೆ ಬರುವುದುಂಟು. ಸಮ್ರಾಟನು ಯಥಾರ್ಥವಾಗಿಯೂ ಅದಕ್ಕೋಸುಗ ಅನುತಾಪ ಪಡುತ್ತಿರುವನು

ಯಶೋವಂತ-ಈ ಕಥೆಯನ್ನು ನಾನು ನಂಬುವೆನೆಂದು ತಿಳಿಯದಿರು ಮಹಾರಾಜ.

ಜಯಸಿಂಹ-ಹೋಗಲಿ. ಆ ಮಾತಿರಲಿ. ಸಮ್ರಾಟನು ಅದಕ್ಕೋಸುಗ ನಿಮ್ಮ ಹತ್ತಿರ ಕ್ಷಮಾಭಿಕ್ಷೆಯನ್ನು ಕೇಳಲಿಲ್ಲ. ನಿಮ್ಮ ಆಮೇಲಿನ ಆಚರಣೆಯಿಂದ ಆ ಅನ್ಯಾಯದ ಪ್ರತಿಶೋಧವಾಯಿತೆಂದು ಆತನು ತಿಳಿದುಕೊಂಡಿರುವನು. ಆತನೀಗ ನಿಮ್ಮ ಸಾಹಾಯ್ಯವನ್ನಪೇಕ್ಷಿಸುವುದಿಲ್ಲ. ಆತನ ಇಚ್ಛೆಯೇನೆಂದರೆ: ನೀವು ದಾರನ ಪಕ್ಷವನ್ನು ವಹಿಸಕೂಡದೆಂದು, ತಟಸ್ಥರಾಗಿರಬೇಕೆಂದು. ವಿನಿಮಯವಾಗಿ ಸಾಮ್ರಾಟನು ನಿಮ್ಮನ್ನು ಗುರ್ಜರದ ಸುಬೇದಾರನನ್ನಾಗಿ ಮಾಡುವನು. ನೀವು ಏನೋ ಒಂದು ಕಲ್ಪಿತವಾದ ಅನ್ಯಾಯದ ಪ್ರತಿಶೋಧಾರ್ಥವಾಗಿ ನಿಮ್ಮ ಶಕ್ತಿಯನ್ನು ಹಾಳುಮಾಡಿಕೊಂಡು ಕುಳಿತುಕೊಳ್ಳಬೇಡಿ.

ಔರಂಗಜೀಬನಲ್ಲಿ ದ್ವೇಷವು ಬೇಡ; ಕುಳಿತಿದ್ದೆಡೆ ನಿರಾಯಾಸವಾಗಿ ನಿಮ್ಮ ತಾಟಸ್ಥ್ಯದ ವಿನಿಮಯರೂಪವಾಗಿ ಗುರ್ಜರದೇಶದ ಸುಬೆ! ನಿಮ್ಮ ಸರ್ವಸ್ವವನ್ನು ಹಾಳುಮಾಡಿಕೊಳ್ಳುವದರಿಂದ ಕೇವಲ ಪ್ರತಿಹಿಂಸೆ. ತಿಳಿಯಲಾರಿರಾ, ಯಶೋವಂತಸಿಂಹ-ಯಾವದು ಉತ್ತಮವೋ, ನೀವೇ ನೋಡಿ.

**ಯಶೋವಂತ**-ಆದರೆ ದಾರನ—

**ಜಯಸಿಂಹ**-ದಾರನು ನಿಮಗೇನಾಗಬೇಕು? ಅವನೂ ಮುಸಲ್ಮಾನ್; ಔರಂಗಜೀಬನೂ ಮುಸಲ್ಮಾನ್. ನೀವು ನಿಮ್ಮ ದೇಶದಸಲುವಾಗಿ ಯುದ್ಧವನ್ನು ಹೂಡಿದ್ದರೆ ನಾನೆಂದಿಗೂ ಬೇಡವೆಂದು ಹೇಳುತ್ತಿರಲಿಲ್ಲ. ಆದರೆ ದಾರನು ನಿಮಗಾರು? ನೀವಾರ ಸಲುವಾಗಿ ರಜಪೂತರಕ್ತವನ್ನು ಚಲ್ಲಲಿಚ್ಛಿಸುವಿರಿ? ದಾರನು ವಿಜಯಿಯಾದಮಾತ್ರಕ್ಕೆ ನಿಮಗಾಗುವ ಲಾಭವೇನು ; ಅಥವಾ ನಿಮ್ಮ ಜನ್ಮಭೂಮಿಗಾಗುವ ಲಾಭವೇನು ?

**ಯಶೋವಂತ**--ಹಾಗಾದರೆ ನಾನು ಜನ್ಮಭೂಮಿಯ ಸಲುವಾಗಿಯೇ ಯುದ್ಧ ಮಾಡುವೆನು. ಮೇವಾರದ ರಾಣಾ ಜಯಸಿಂಹ, ಬಿಕನೀರದ ಮಹಾರಾಜ, ನೀವು ಮತ್ತು ನಾನು-ಈ ನಾಲ್ಕು ಜನರೂ ಕೂಡಿ, ಮೊಗಲ್ ಸಾಮ್ರಾಜ್ಯವನ್ನು ಒಂದು ಫೂತ್ಕಾರದಿಂದ ಹಾರಿಸಿಬಿಡಲಾರೆವೆ? ಬಾ, ಜಯಸಿಂಹ.

**ಜಯಸಿಂಹ**--ಆಮೇಲೆ ಡಿಲ್ಲಿಯ ಸಾಮ್ರಾಟನಾಗುವವರಾರು ?

**ಯಶೋವಂತ**-ಯಾಕೆ ? ರಾಣಾ ರಾಜಸಿಂಹನು.

**ಜಯಸಿಂಹ**-ನಾನು ಔರಂಗಜೀಬನ ಪ್ರಭುತ್ವವನ್ನು ಸನ್ಮಾನಿಸುವೆನು. ಆದರೆ ರಾಜಸಿಂಹನ ಪ್ರಭುತ್ವವನ್ನು ಎಂದಿಗೂ ಸ್ವೀಕಾರಮಾಡಲಾರೆ.

**ಯಶೋವಂತ**--ಏಕೆ ಮಹಾರಾಜ? ಅವನು ಸ್ವಜಾತಿಯವನೆಂದೊ ?

**ಜಯಸಿಂಹ**-ಅದಕ್ಕಲ್ಲ; ಜ್ಞಾತಿಯ ದುರ್ವಾಕ್ಯವನ್ನು ನಾನು ಸಹಿಸಲಾರೆನು. ನಾನಾವ ಉಚ್ಚಪ್ರಕೃತಿಯ ಆಶಯಗಳನ್ನೂ ಇಟ್ಟುಕೊಂಡಿಲ್ಲ. ಸಂಸಾರವು ನನಗೊಂದು ಸಂತೆಯಂತೆ. ಎಲ್ಲಿ ಅಲ್ಪಮೂಲ್ಯಕ್ಕೆ ಹೆಚ್ಚು ಸಾಮಾನು ದೊರೆಯುತ್ತದೆಯೋ, ಅಲ್ಲಿ ಹೋಗುವೆನು. ಔರಂಗಜೀಬನು ಅಲ್ಪಮೂಲ್ಯಕ್ಕೆ ಹೆಚ್ಚು ವಸ್ತುಗಳನ್ನು ಕೊಡುವನು. ಈ ಸ್ಥಿರವಾದ ಅಧಿಕಾರ ಸಂಪತ್ತುಗಳನ್ನು ಬಿಟ್ಟು ಅನಿಶ್ಚಿತವಾದ ಭವಿಷ್ಯದಲ್ಲಿ ಬೀಳಲೆನಗಿಷ್ಟವಿಲ್ಲ.

**ಯಶೋವಂತ**--ಹುಂ! ಒಳ್ಳೆಯದು ಮಹಾರಾಜ. ಈಗ ನೀವು ಸ್ವಲ್ಪ ವಿಶ್ರಮಿಸಿ ಕೊಳ್ಳಿ. ನಾನು ಯೋಚನೆಮಾಡಿ ಪ್ರಾತಃಕಾಲ ಉತ್ತರ ಕೊಡುವೆನು.

**ಜಯಸಿಂಹ**--ಅದು ಸರಿಯಾದ ಮಾತು. ಚನ್ನಾಗಿ ಯೋಚಿಸಿದಿರಿ, ಮಹಾರಾಜ. ಇದು ಇಹಸಂಸಾರದ ಹುಟ್ಟುಸಾವಿನ ಮಾತು; ನಾವು ಸ್ವಸಂತ್ರರಾಜರಾಗಲು ಅಶಕ್ತರಾದರೆ ರಾಜಭಕ್ತರಾದ ಪ್ರಜೆಗಳಾದರೂ ಆಗುವ. ರಾಜಭಕ್ತಿಯೂ ಒಂದು ಧರ್ಮ (ಹೋಗುವನು)

**ಯಶೋವಂತ**-ಹಿಂದುಗಳ ಸಾಮ್ರಾಜ್ಯವು ಕವಿಯ ಸ್ವಪ್ನ. ಏಕೆಂದರೆ ಹಿಂದುಗಳ ಪ್ರಾಣವು ಶುಷ್ಕ; ಒಣಗಿದ ಕಡ್ಡಿಯಂತೆ ನೀರಸವಾಗಿ ಹೋಗಿದೆ. ಅದರಲ್ಲಿ ಪ್ರಾಣಸಂಚಾರವಾಗುವದಾದರೂ ಹೇಗೆ? "ಸ್ವಸಂತ್ರರಾಜರಾಗಲು ಅಶಕ್ತ ರಾದರೆ ರಾಜಭಕ್ತರಾದ ಪ್ರಜೆಗಳಾದರೂ ಆಗುವ"-ಸರಿಯಾಗಿ ಹೇಳಿದೆ ಜಯ ಸಿಂಹ. ಯಾರಿಗೋಸುಗ ನಾನು ಯುದ್ಧ ಮಾಡಲಿ? ದಾರನು ನನಗೇನಾಗ ಬೇಕು? ನರ್ಮದಾಯುದ್ಧದ ಪ್ರತಿಶೋಧವು ಖಿಜುಯಾದಲ್ಲಿ ಮುಗಿಯಿತು.

[ಮಹಾಮಾಯೆಯು ಪ್ರವೇಶಿಸುವಳು]

**ಮಹಾಮಾಯೆ**--ಅದನ್ನಾರು ಪ್ರತಿಶೋಧವೆಂದು ಹೇಳುವವರು? ಮಹಾರಾಜ, ನಾ ನಿಷ್ಟುಹೊತ್ತು ಮರೆಯಲ್ಲಿ ನಿಂತು ನಿಮ್ಮೀ ಅಪೌರುಷವಾದ, ಮಕ್ಕಳ ತೂಗು ಹಲಿಗೆಯ ಆಟದಂತೆ ನಿರರ್ಥಕವಾದ, ವ್ಯರ್ಥ ಅಂದೋಳನವನ್ನು ನೋಡುತ್ತಿದ್ದೆನು. ಎಂತಹ ಚಮತ್ಕಾರ! ಅದಕ್ಕೆ ಪ್ರತಿಶೋಧವೆಂದು ಹೆಸರೆ ಮಹಾರಾಜ? ಔರಂಗಜೀಬನ ಪಕ್ಷವನ್ನು ವಹಿಸಿದ್ದು, ಅವನ ಭಂಡಾರವನ್ನು ಲೂಟಿಮಾಡಿ, ಓಡಿಬಂದುದರ ಹೆಸರು ಪ್ರತಿಶೋಧವೆಂದೆ? ಅದಕ್ಕಿಂತಲೂ ನಿಮ್ಮ ಪರಾ ಜಯವು ಉತ್ತಮ. ಪರಾಜಯದಮೇಲೆ ಪಾಪದಹೊರೆ; ರಾಜಪೂತಜಾತಿಯು ವಿಶ್ವಾಸಘಾತುಕವಾಗಬಲ್ಲುದೆಂಬುದನ್ನು ನೀವೇ ಮೊದಲು ತೋರಿಸಿದಿರಿ.

**ಯಶೋವಂತ**-ಲೂಟಿ ಮಾಡುವ ಮೊದಲು ನಾನು ಔರಂಗಜೀಬನ ಪಕ್ಷವನ್ನು ತ್ಯಜಿಸಿದ್ದೆನು, ಮಹಾಮಾಯೆ.

**ಮಹಾಮಾಯೆ**--ಹಾಗಾದರೆ ಅಪಹರಿಸಿದ್ದು ಅವನನ್ನು ತ್ಯಜಿಸಿದಮೇಲೆ?

**ಯಶೋವಂತ**--ಅಪಹರಿಸಲಿಲ್ಲ, ಮಹಾಮಾಯೆ; ಯುದ್ಧದಲ್ಲಿ ಲೂಟಿಮಾಡಿದೆನು.

**ಮಹಾಮಾಯೆ**–ಅದಕ್ಕೆ ಯುದ್ಧವೆಂದು ಹೆಸರೆ? ಧಿಕ್!

**ಯಶೋವಂತ**–ಮಹಾಮಾಯೇ, ನಿನಗದನ್ನುಳಿದು ಮತ್ತಾವ ಮಾತೂ ಇಲ್ಲವೊ? ಹಗಲೂ ರಾತ್ರೀ ನಿನ್ನೀ ಹೀನಭರ್ತ್ಸನೆಗಳನ್ನು ಕೇಳುವ ಸಲುವಾಗಿಯೇ ನಿನ್ನನ್ನು ಮದುವೆಯಾದದ್ದು?

**ಮಹಾಮಾಯೆ**--ಹಾಗಾದರೆ ಮದುವೆಯಾದಿರೇಕೆ, ಮಹಾರಾಜ?

**ಯಶೋವಂತ**–'ಏಕೆ?' ಎಂತ ಆಶ್ಚರ್ಯದ ಪ್ರಶ್ನೆ? ಎಲ್ಲರೂ ವಿವಾಹವಾಗುವದೇಕೆ?

**ಮಹಾಮಾಯೆ**–ಹೌದು; ಏಕೆ? ಭೋಗಾಭಿಲಾಷೆಯಿಂದ; ತಮ್ಮ ವಿಲಾಸಪ್ರವೃತ್ತಿಯನ್ನು ಚರಿತಾರ್ಥ ಮಾಡುವಸಲುವಾಗಿ ಅಲ್ಲವೆ, ಮಹಾರಾಜಾ?

**ಯಶೋವಂತ**--(ಸ್ವಲ್ಪ ಚಿಂತಿಸಿ)ಹೌದು. ಒಂದು ವಿಧದಲ್ಲಿ ಅವರ ಸಲುವಾಗಿಯೇ ಎಂದು ಹೇಳಬಹುದು.

**ಮಹಾಮಾಯೆ**–ಅದಕ್ಕೋಸ್ಕರ ಒಬ್ಬ ಗಣಿಕೆಯನ್ನಿಟ್ಟುಕೊಳ್ಳಬಾರದೇಕೆ?

**ಯಶೋವಂತ**--ಕೋಪವೇಕೆ, ಮಹಾಮಾಯೆ?

**ಮಹಾಮಾಯೆ**--ಮಹಾರಾಜ, ನಿಮ್ಮ ಪಾಶವಪ್ರವೃತ್ತಿಯನ್ನು ಚರಿತಾರ್ಥ ಮಾಡಿಕೊಳ್ಳಬೇಕಾದರೆ, ಕಾಮದ ಸೇವೆಯನ್ನು ಮಾಡಬೇಕಾದರೆ ಅದಕ್ಕೆ ಯೋಗ್ಯವಾದ ಸ್ಥಾನವು ಕುಲಾಂಗನೆಯ ಪವಿತ್ರ ಅಂತಃಪುರವಲ್ಲ; ವಾರಾಂಗನೆಯ ಸಜ್ಜಿತ ನರಕ. ಅಲ್ಲಿಗೆ ಹೋಗಿರಿ. ನೀವು ಧನವನ್ನು ಕೊಡುವಿರಿ; ಅವರು ರೂಪವನ್ನು ಕೊಡುವರು. ನೀವವರ ಬಳಿ ಹೋಗುವಿರಿ--ಲಾಲಸೆಯ ತೀವ್ರ ಚೋದನೆಯಿಂದ; ಅವರು ನಿಮ್ಮಬಳಿಗೆ ಬರುವರು – ಜಠರದ ತೀವ್ರ ಜ್ವಾಲೆಯಿಂದ. ಪತಿಪತ್ನಿಯರ ಸಂಬಂಧವು ಇಂತಹುದಲ್ಲ.

**ಯಶೋವಂತ**--ಹಾಗಾದರೆ?

**ಮಹಾಮಾಯೆ**--ಪತಿಪತ್ನಿಯರ ಸಂಬಂಧವು ಪ್ರೀತಿಯ ಸಂಬಂಧ; ಪ್ರೇಮದ ಪವಿತ್ರ ಭೂಮಿ; ಅವರಾಪ್ರೇಮವು ಪ್ರಿಯಜನವನ್ನು ದಿನದಿನವೂ ನೀಚರನ್ನಾಗಿ ಮಾಡುವುದಿಲ್ಲ; ದಿನದಿನಕ್ಕೆ ಪ್ರಿಯತರರನ್ನಾಗಿ ಮಾಡುವುದು. ಆ ಪ್ರೇಮವು ತನ್ನ ಚಿಂತೆಯನ್ನು ಮರೆತುಬಿಡುವುದು ಮತ್ತು ತನ್ನ ಹೃದಯಾಧಿದೇವತೆಯ ಚರಣದಲ್ಲಿ ತನ್ನ ಆತ್ಮವನ್ನು ಬಲಿಕೊಡುವದು ಆ ಪ್ರೀತಿಯು ಪ್ರಭಾತದ

ಸೂರ್ಯಕಿರಣಗಳಂತೆ, ಯಾರಮೇಲೆ ಬೀಳುವುದೋ ಅವರೆಲ್ಲರನ್ನು ಚಿನ್ನದ ಬಣ್ಣವುಳ್ಳವರನ್ನಾಗಿ ಮಾಡುವುದು; ಜಾಹ್ನವಿಯ ಪವಿತ್ರ ಜಲರಾಶಿಯಂತೆ, ಯಾರ ಮೇಲೆ ಬೀಳುವದೋ ಅವರನ್ನು ಪವಿತ್ರಮಾಡುವುದು; ಇಷ್ಟದೈವದ ವರದಾನದಂತೆ, ಯಾರನ್ನು ಹೊಂದುವದೋ ಅವರನ್ನು ಭಾಗ್ಯಶಾಲಿಗಳನ್ನಾಗಿ ಮಾಡುವುದು. ಅಂತಹುದಾಪ್ರೀತಿ! ಅಚಂಚಲ-ಅನುದ್ವಿಗ್ನ-ಆನಂದಮಯ!

**ಯಶೋವಂತ**–ನೀನೆನ್ನನ್ನು ಆ ರೀತಿಯಾಗಿ ಪ್ರೀತಿಸುವೆಯಾ, ಮಹಾಮಾಯೆ?

**ಮಹಾಮಾಯೆ**--ಪ್ರೀತಿಸುವೆನು. ನಿಮ್ಮ ಗೌರವವನ್ನು ಉಡಿಯಲ್ಲಿಟ್ಟುಕೊಂಡು ನಾನು ಸಂತೋಷದಿಂದ ಸಾಯಬಲ್ಲೆನು. ಅದಕ್ಕೋಸ್ಕರವೇ ನನಗಿಷ್ಟೊಂದು ಚಿಂತೆ; ಇಷ್ಟೊಂದು ಕೋಪ. ನಿಮ್ಮಾ ಗೌರವವು ಮ್ಲಾನವಾಗುವುದನ್ನು ನೋಡುವ ಮೊದಲು ನನ್ನ ಕಣ್ಣುಗಳು ಇಂಗಿಹೋಗಲೆಂಬುದೇ ನನ್ನ ಇಚ್ಛೆ. ರಾಜಪೂತಜಾತಿಯ ಗೌರವ-ಮಾರವಾಡದ ಗೌರವವು ನಿಮ್ಮ ಕೈಯಲ್ಲಿ ಅಳಿಸಿ ಹೋಗುವ ಮೊದಲು ನಾನು ಸಾಯಲಿಚ್ಛಿಸುವೆನು. ನಿಮ್ಮಲ್ಲಿ ನಗೆ ಅಷ್ಟೊಂದು ಪ್ರೀತಿ.

**ಯಶೋವಂತ**--ಮಹಾಮಾಯೆ,

**ಮಹಾಮಾಯೆ**-ಕಣ್ಣೆತ್ತಿನೋಡು; ಈ ರೌದ್ರಾಕಾರದ ಪರ್ವತಶ್ರೇಣಿ, ಈ ಧವಳ ಮಯವಾದ ಹಿಮರಾಶಿ, ಕಣ್ಣೆತ್ತಿನೋಡು; ಜೀವಂತ ಸೌಂದರ್ಯದಂತೆ ಹರಿ ಯುತ್ತಿರುವ ಗಿರಿತರಂಗಿಣಿ, ಕಣ್ಣೆತ್ತಿನೋಡು; ಕವಿಯ ಗಾನದಂತೆ ಗಂಭೀರ ವಾದ-ಶಾಂತಿಮಯವಾದ ನೀಲಾಕಾಶ, ಈ ಪಕ್ಷಿಗಳ ಕೂಗನ್ನು ಕೇಳು; ಮನದಲ್ಲಿ ಮತ್ತೆ ಮತ್ತೆ ಚಿಂತಿಸು—ಈ ದೇಶದಲ್ಲಿ ಒಂದಾನೊಂದು ದಿನ ದೇವತೆಗಳು ವಾಸಮಾಡುತ್ತಿದ್ದರೆಂದು; ಮಾರವಾರ ಮತ್ತು ಮೇವಾರವು ವೀರ ತ್ವದ ಯಮಳಸಂತಾನ, ಮಹತ್ವದ ನೈಶಾಕಾಶದಲ್ಲಿ ಬೃಹಸ್ಪತಿ ಮತ್ತು ಶುಕ್ರ ತಾರೆ--ಕ್ರಮೇಣ ಆ ಮಹಿಮೆಯ ಪರಾಕಾಷ್ಟೆಯು ನಮ್ಮ ಪಾರ್ಶ್ವವನ್ನು ಬಿಟ್ಟುಹೋಗುತ್ತಿರುವುದು. ಬನ್ನಿರಿ, ಚಾರಣಬಾಲಕಿಯರೇ ಹಾಡಿರಿ-ಆ ಗೀತವನ್ನು.

**ಯಶೋವಂತ**-ಮಹಾಮಾಯೆ!

**ಮಹಾಮಾಯೆ**—ಮಾತಾಡಬೇಡ; ಈ ಇಚ್ಛೆಯು ನನ್ನ ಮನವನ್ನು ಪ್ರವೇಶಿಸಿತೆಂ

ದರೆ ಮಾತೆಯ ಪೂಜೆಯ ಸಮಯವು ಒದಗಿತೆಂದು ತಿಳಿಯುವೆನು. ಶಂಖಧ್ವನಿಯಾಗಲಿ; ಮಾತಾಡಬೇಡ.

**ಯಶೋವಂತ**-ನಿಶ್ಚಯವಾಗಿ ನಿನ್ನ ಮೆದುಳು ಕೆಟ್ಟುಹೋಗಿದೆ.

(ಮೆಲ್ಲನೆ ಹೊರಟುಹೋಗುವನು)

**ಮಹಾಮಾಯಿ**--ನೀನು ಯಾರು? ಇಷ್ಟೊಂದು ಸೌಮ್ಯನಾಗಿ, ಸುಂದರನಾಗಿ, ಶಾಂತನಾಗಿ ನನ್ನೆದುರಿಗೆ ಬಂದು ನಿಂತಿರುವೆ. (ಚಾರಣಬಾಲಿಕೆಯರು ಬರುವರು.) ಹಾಡಿರಿ, ಬಾಲಕಿಯರೇ— ಆ ಗೀತವನ್ನು-'ನಮ್ಮ ಜನ್ಮಭೂಮಿ'

—: ಚಾರಣ ಬಾಲೆಯರ ಹಾಡು :—

ಧನಧಾನ್ಯ ಪುಷ್ಪಭರೇ! ಈ ಚಲ್ವ ವಸುಂಧರೇ!
ಅದರ ಮಧ್ಯದೊಳೊಂದು ದೇಶವುಂಟು ಸಕಲದೇಶಕ್ಕೆ ಸಾಟಿ;
ಓಹೋ! ಅದು ಕನಸಿನಿಂ ಮುದವೆಸೆಯೆ ಮಾಡಿದುದು, ಆ ನಾಡು ಸ್ಮೃತಿಯುಬೀಡು,
ಸಗ್ಗವೇ! ನೀನಿಂತ ದೇಶವನು ಎಲ್ಲೆಲ್ಲಿ ಹುಡುಕಿದರು ಕಾಣಲಾರೆ
ಸಕಲ ದೇಶಗಳರಾಣಿ— ಈ ನಮ್ಮ ಆರ್ಯಧಾನಿ
ಶಶಿಸೂರ್ಯತಾರಕಾಳಿ ಈ ಪರಿಯೊಳೆಸೆವುದೆಲ್ಲಿ ?
ಎಲ್ಲಿ ಬೆಳಗುವುದಿಂತ ಸೊಬಗಿನಾ ಮಿಂಚು ಇಂತ ಕಾರ್ಮುಗಿಲ ನಡುವೆ;
ಪಕ್ಷಿಗಳ ಕಲರವದೆ ನಿದ್ರಿಪೆವು ನಾವಿಲ್ಲಿ ಏಳುವೆವು ಮತ್ತೆ ಕೂಗಲವು;
ಸಗ್ಗವೇ-ಇತ್ಯಾದಿ
ಈ ಸ್ನಿಗ್ಧ ನದಿಗಳೆಲ್ಲಿ ಈ ಶುಭ್ರಗಗನವೆಲ್ಲಿ ?
ಎಲ್ಲಿ ಶೋಭಿಪುದಿಂತ ಪೊಸಪುಲ್ಲನಾಂತ ಕ್ಷೇತ್ರಮಾಗಸದ ಕೆಳಗೆ ?
ಈ ಪರಿಯ ಧಾನ್ಯರಾಶಿಯ ತೂರಿ ಮತ್ತೆಲ್ಲಿ ಬೀಸುವುದು ಮಂದಪವನವಿದು ?
ಸಗ್ಗವೇ— ಇತ್ಯಾದಿ
ತರುಗಳಲಿ ಸುಮದ ಸೋಗು; ವನದೆ ಕೋಗಿಲೆಯ ಕೂಗು,
ಹೆಜ್ಜೆಹೆಜ್ಜೆಗು ತುಂಬಿಗಳ ತಂಡಮೊಗೆವ ಝೇಂಕೃತಿಯು ಸರಸಗಾನ,
ಮಲಗುವವು ಪೂವಿನಾ ಸುರಭಿತಲ್ಪದೊಳವುಗಳೀಂಟುವುವು ಸಲೆಪುಷ್ಪರಸವ,
ಸಗ್ಗವೇ-ಇತ್ಯಾದಿ
ಭ್ರಾತೃಭಗಿನಿಯರ ಪ್ರೀತಿ ಎಲ್ಲಿಹುದು ನೋಡಲೀರೀತಿ ?
ಅಮ್ಮ, ನಿಮ್ಮಯ ಚರಣಯುಗಳವನು ನನ್ನ ಹೃದಯಮಧ್ಯದೊಳಗಿಡುವೆ
ಹುಟ್ಟಿದೆನು ಈ ನಾಡಿನಲ್ಲಿ ನಾನು, ಇಲ್ಲಿಯೇ ಸಾಯ್ವೆನದರಿಂದೆ
ಸಗ್ಗವೇ— ಇತ್ಯಾದಿ

# ನಾಲ್ಕನೆಯ ಅಂಕ.

## ಮೊದಲನೆಯ ನೋಟ.

---

ಸ್ಥಾನ—ಜಿಹನ್‌ಖಾನನ ಮನೆಯಲ್ಲಿ ದಾರನ ಕೊಠಡಿ. ನಾದಿರಳು ಮಂಚದಮೇಲೆ ಮಲಗಿರುವಳು. ಒಂದು ಪಾರ್ಶ್ವದಲ್ಲಿ ದಾರಾ, ಮತ್ತೊಂದು ಪಾರ್ಶ್ವದಲ್ಲಿ ಸಿಪಾರ್ ಮತ್ತು ಜಹರತ್ತುನ್ನೀಸಾ.

**ದಾರಾ**--ನಾದಿರಾ, ಪ್ರಪಂಚವೆಲ್ಲ ನನ್ನನ್ನು ತೊರೆಯಿತು; ದೇವರೂ ಕೈಬಿಟ್ಟನು. ನೀನೊಬ್ಬಳು ಮಾತ್ರ ಇಷ್ಟು ದಿನ ನನ್ನನ್ನು ತ್ಯಜಿಸಲಿಲ್ಲ. ಇಂದು ನೀನೂ ನನ್ನನ್ನು ಬಿಟ್ಟು ಹೋಗುವೆಯಾ?

**ನಾದಿರಾ**--ಪ್ರಾಣೇಶ್ವರ, ನನ್ನ ಸಹಸ್ರಾಪರಾಧಗಳನ್ನು ಸಹಿಸಿರುವೆ. ಇನ್ನು-

**ದಾರಾ**--ದುಃಖದ ಜ್ವಾಲೆಯಿಂದ ಕ್ಷುಬ್ಧನಾಗಿ ನಿನ್ನನ್ನು ಏನೇನೋ ಅಂದಿರುವೆನು, ಅದೆಲ್ಲವನ್ನೂ ಕ್ಷಮಿಸು.

**ನಾದಿರಾ**--ನಾಥಾ, ದುಃಖದಲ್ಲಿ, ಪ್ರವಾಸದಲ್ಲಿ ನಿನ್ನ ಸಂಗಿನಿಯಾಗಿದ್ದುದೆನಗೆ ಗೌರವದ ಮಾತಲ್ಲವೆ? ಆ ಗೌರವದ ನೆನಪಿನಿಂದ ಆನಂದಿತಳಾಗಿ ನಾನು ಪರಲೋಕಕ್ಕೆ ಹೋಗುವೆನು. ಸಿಪಾರ-ಮಗೂ, ಜಹರತ್, ನಾನು ಹೋಗುವೆನು.

**ಸಿಪಾರ**–ನೀನೆಲ್ಲಿ ಹೋಗುವೆಯಮ್ಮ?

**ನಾದಿರಾ**-ಎಲ್ಲಿ ಹೋಗುವೆನೋ ನನಗೆ ತಿಳಿಯದು; ಆದರಿಷ್ಟುಮಾತ್ರ ಹೇಳಬಲ್ಲೆನು: ನಾನು ಹೋಗುವ ಸ್ಥಳದಲ್ಲಿ ದುಃಖವಿಲ್ಲ; ಹಸಿವು ಬಾಯಾರಿಕೆಗಳ ಬೇಗೆಯಿಲ್ಲ; ರೋಗ ರುಜನಗಳಿಲ್ಲ. ದೋಷದ್ವಂದ್ವಗಳಿಲ್ಲ.

**ಸಿಪಾರ**–ಹಾಗಾದರೆ ನಾವೂ ಅಲ್ಲಿಗೆ ಬರುವೆವಮ್ಮ! ನಡೆಯಪ್ಪ, ಇನ್ನೇಕಿಲ್ಲಿರಬೇಕು!

**ನಾದಿರಾ**-ಇನ್ನಾವ ಕಷ್ಟಗಳನ್ನೂ ಸಹಿಸಬೇಕಾದುದಿಲ್ಲ. ಸಿಪಾರ್, ನೀವು ಜಿಹಾನ್‌ಖಾನನ ಆಶ್ರಯದಲ್ಲಿರುವಿರಿ; ಇನ್ನು ದುಃಖವಿಲ್ಲ.

**ಸಿಪಾರ**- ಈ ಜಿಹಾನ್‌ಖಾನ್ ಯಾರಪ್ಪ?

**ದಾರಾ**-ಬಹಳ ದಿನಗಳ ನಮ್ಮ ಬಂಧು.

**ನಾದಿರಾ**--ಅವನನ್ನು ನಿಮ್ಮ ತಂದೆಯು ಎರಡು ಬಾರಿ ಜೀವದಿಂದುಳಿಸಿರುವರು. ಅವನು ನಿಮ್ಮನ್ನು ಸುಖದಲ್ಲಿಡಲು ಪ್ರಯತ್ನಮಾಡುವನು.

**ಸಿಪಾರ**—ಆದರೆ ನಾನು ಮಾತ್ರ ಅವನನ್ನಾವಾಗಲೂ ಪ್ರೀತಿಸುವುದಿಲ್ಲ.

**ನಾದಿರಾ**—ಅದೇಕೆ ಮಗು ?

**ಸಿಪಾರ**--ಅವನನ್ನು ನೋಡಿದರೆ ಭಯವಾಗುವುದಮ್ಮ; ನನ್ನನ್ನು ಕಂಡಾಗಲೆಲ್ಲ ಹಾಸ್ಯಮಾಡಿ ನಗುವನು. ಆ ನಗೆಯನ್ನು ನೋಡಿದರೆ ನನಗೆ ಭಯವಾಗಿ ನಿನ್ನ ಹತ್ತಿರ ಓಡಿಬರುವೆನಮ್ಮ.

**ದಾರಾ**--ಹೌದು ನಾದಿರಾ, ಸಿಪಾರನು ಹೇಳುವದು ನಿಜ. ಜಿಹನ್ ಖಾನನ ಮುಖದಲ್ಲಿ ಒಂದು ವಿಧವಾದ ಮೋಸದ ನಗುವು ಕಂಡುಬರುವುದು. ಅವನ ಕಣ್ಣುಗಳಲ್ಲಿ ಹಿಂಸೆಯ ಕೆಂಪಾದ ಕಾಂತಿ; ಅವನಾ ಅರ್ಧಸ್ಫುಟವಾದ ಮೃದು ವಾಕ್ಯಗಳಮೇಲೆ ವಂಚನೆಯ ಛಾಯೆಯು ಬಿದ್ದಂತಿರುವುದು. ಅಂದವನೆನ್ನ ಕಾಲುಗಳಮೇಲೆ ಬಿದ್ದು ಪ್ರಾಣಭಿಕ್ಷೆಯನ್ನು ಬೇಡಿದಾಗಿನ ಮುಖಭಂಗಿಯೇ ಬೇರೆ; ಈಗಿನ ಮುಖಭಂಗಿಯೇ ಬೇರೆ. ಅವನೀ ಮುಖಭಂಗಿ, ನೋಟ, ಮಾತುಗಳು ಇವು ಸಂಪೂರ್ಣವಾಗಿ ನನಗೆ ಅಪರಿಚಿತ.

**ನಾದಿರಾ**-ನೀವವನಿಗೆರಡಾವರ್ತಿ ಪ್ರಾಣಭಿಕ್ಷೆಯನ್ನು ಕೊಟ್ಟಿರುವಿರಲ್ಲವೆ? ಅವನು ಮನುಷ್ಯನಲ್ಲದೆ ಹಾವಲ್ಲ.

**ದಾರಾ**-ಮನುಷ್ಯರಲ್ಲೀಗೆನಗೆ ವಿಶ್ವಾಸವಿಲ್ಲ ನಾದಿರಾ, ಅವರು ಕಾಳಸರ್ಪಕ್ಕಿಂತಲೂ ಮೀರಿದ ವಂಚಕರು. ಆದರೂ ಇದೇನು ನಾದಿರಾ, ಆಯಾಸವಾಗುವದೆ?

**ನಾದಿರಾ**-ಇಲ್ಲ ನಾಥ; ನೀವು ಬಳಿಯಲ್ಲಿರುವಾಗೆನಗೆ ನೋವೆಲ್ಲಿಯದು ? ನಿಮ್ಮ ಸ್ನೇಹಮಯವಾದ ದೃಷ್ಟಿಯ ಸಂಪರ್ಕದಿಂದ ನನ್ನ ನೋವೆಲ್ಲವೂ ಮಾಯವಾಗಿ ಹೋಗುವವು. ಇನ್ನು ನನಗೆ ವಿರಾಮವಿಲ್ಲ. ಈ ಹಸುಳೆಗಳನ್ನು ನಿಮ್ಮ ವಶಕ್ಕೆ ಒಪ್ಪಿಸಿ ಹೋಗುವೆನು. ಸುಲೇಮಾನನ್ನೊಮ್ಮೆ ನೋಡುವುದಕ್ಕಿಲ್ಲದೆ ಹೋಯಿತು. ಇನ್ನೆಲ್ಲಿ ನೋಡುವುದು--ಸಿಪಾರ, ಜಹರತ್, ಹಾ ! ಈಶ್ವರ! (ಸಾಯುವಳು.)

**ದಾರಾ**-ನಾದಿರಾ, ನಾದಿರಾ, ಎಲ್ಲಿ ನಾದಿರಳು? ನೀರವ! ನಿಶ್ಪ್ರಾಣ!

**ಸಿಪಾರ**-ಅಮ್ಮ, ಅಮ್ಮಾ-

**ದಾರಾ**--ನಮ್ಮ ಜೀವನದ ದೀಪವು ನಂದಿ ಹೋಯಿತು, ಮಗು.

[ಜಹನಾರಳು ಶಿಲಾವಿಗ್ರಹದಂತೆ ನಿಶ್ಚಲಳಾಗಿ ನಿಂತುಕೊಂಡು ಸ್ಥಿರದೃಷ್ಟಿಯಿಂದ ತಾಯಿಯ ಮುಖವನ್ನು ನೋಡುತ್ತಿರುವಳು: ನಾಲ್ಕು ಜನ ಸೈನಿಕರೊಡನೆ ಜಿಹನ್‌ಖಾನನು ಪ್ರವೇಶಿಸುವನು.]

ದಾರಾ-ಯಾರು ನೀವು? ನಿಮ್ಮಾಗಮನದಿಂದ ಈ ಮಂದಿರವನ್ನೇಕೆ ಕಲುಷಿತ ಮಾಡುತ್ತಿರುವಿರಿ?

ಜಿಹನ್‌ಖಾನ-ಖೈದುಮಾಡಿರಿ.

ದಾರಾ-ನನ್ನನ್ನು ಖೈದುಮಾಡುವಿಯಾ ಜಿಹನ್‌ಖಾನ್?

ಸಿಪಾರ--(ಕತ್ತಿಯನ್ನೊರೆಗಳಚಿ) ಯಾರಿಗೆ ಸಾಧ್ಯ ಖೈದುಮಾಡಲು?

ದಾರಾ-ಸಿಪಾರ್, ಕತ್ತಿಯನ್ನಿಡು—ಇದು ಬಹುಪವಿತ್ರವಾದ ಸಮಯ, ಕಂಡೆಯಾ? ಇನ್ನೂ ನಾದಿರಳ ಆತ್ಮವು ಈ ಕೊಠಡಿಯಲ್ಲಿ ಹಾರಾಡುತ್ತಿರುವದು: ಜಗತ್ತಿನ ಸುಖದುಃಖಗಳನ್ನು ಬಿಟ್ಟು ಹೋಗುವವೊದಲು ಒಮ್ಮೆ ಕಡೆಯಸಾರಿ ನಾಲ್ಕು ದಿಕ್ಕುಗಳನ್ನೂ ನೋಡುತ್ತಿರುವುದು; ಇನ್ನೂ ಸ್ವರ್ಗದ ಅಮರಾಂಗನೆಯರು ಅವಳನ್ನು ಕರೆದುಕೊಂಡು ಹೋಗುವ ಸಲುವಾಗಿ ಬಂದಿಲ್ಲ. ಇಂತ ಪವಿತ್ರ ಮುಹೂರ್ತದಲ್ಲಿ ಮನುಷ್ಯತ್ವದ ದ್ವೇಷದ್ವಂದ್ವಗಳನ್ನು ತಂದುಹಾಕಬೇಡ, ಮಗು. ನನ್ನನ್ನು ಖೈದುಮಾಡುವಿಯಾ, ಜಿಹನ್‌ಖಾನ್?

ಜಿಹನ್-ಹೌದು ಷಹಜಾದಾ.

ದಾರಾ-ನಾದಿರಾ, ನೀನಿದನ್ನು ಕೇಳಬಲ್ಲೆಯಾಗಿದ್ದರೆ ನಿನ್ನೀ ಮೃತದೇಹವು ಘೃಣೆಯಿಂದ ಬೆದರಿ ಏಳುತ್ತಿತ್ತು. ನಿನಗೆ ದೇವರಲ್ಲಿ ಪರಮ ವಿಶ್ವಾಸವಲ್ಲವೆ?

ಜಿಹನ್--ಇವನ ಕೈಗಳಿಗೆ ಸಂಕೋಲೆಗಳನ್ನು ಹಾಕಿರಿ. ಅಡ್ಡಿಮಾಡಿದರೆ ಕತ್ತಿಯನ್ನು ಉಪಯೋಗಿಸಲು ಯೋಚಿಸಬೇಕಾಗಿಲ್ಲ.

ದಾರಾ--ನಾನು ಅಡ್ಡಿಮಾಡುವುದಿಲ್ಲ; ನನ್ನನ್ನು ಹಿಡಿಯಿರಿ. ಅದರಲ್ಲಿ ಆಶ್ಚರ್ಯವೇನು? ನಾನಿಲ್ಲಿಗೆ ಬಂದಾಗಲೆ ಹೀಗಾಗಬಹುದೆಂಬ ಪ್ರತ್ಯಾಶೆಯಿದ್ದಿತು. ಬೇರೆಯವರಾಗಿದ್ದರೆ ಬೇರೆ ವಿಧವಾಗಿ ಯೋಚಿಸುತ್ತಿದ್ದೆನು. ಬೇರೆಯವರಾಗಿದ್ದರೆ—ಯಾರಿಂದೆರಡಾವರ್ತಿ ಪ್ರಾಣಬಿಕ್ಷೆಯನ್ನು ಹೊಂದಿದ್ದೆಯೋ ಅಂತಹವನಿಗೆ ಆಶ್ರಯವನ್ನು ಕೊಟ್ಟು, ಮೋಸದಿಂದ ಖೈದುಮಾಡುವುದು ಎಂತಹ ವಿಶ್ವಾಸಘಾತಕತನ, ಎಂತ ನೃಶಂಶತೆಯೆಂದು ಹೇಳುತ್ತಿದ್ದೆನು. ಆದರೆ ನಿನಗೆಲ್ಲವೂ ಒಪ್ಪುವುದು. ಜಿಹನ್‌ಖಾನ್, ಈಗ ಪ್ರಪಂಚದ ಸಮಸ್ತ ಉಚ್ಚ

ಪ್ರವೃತ್ತಿಗಳೂ ಪಾಪದ ಭೀತಿಯಿಂದ ಭೂಮಿಯಲ್ಲಿ ತಲೆಗಳನ್ನು ಬಚ್ಚಿಟ್ಟು ಕೊಂಡಿರುವವು; ಒಮ್ಮೆಯಾದರೂ ಆಕಾಶವನ್ನು ದೃಷ್ಟಿಸಿನೋಡುತ್ತ ಇಲ್ಲ; ಈಗ ತಿಳಿದೆನು— ಪ್ರಪಂಚದಲ್ಲಿ ಸ್ವಾರ್ಥಸಿದ್ಧಿಯೇ ಧರ್ಮ, ಶಾಠ್ಯವೇ ನೀತಿ, ಮುಖಸ್ತುತಿಯೇ ಪೂಜೆ, ಕೃತಘ್ನತೆಯೇ ಕರ್ತವ್ಯವೆಂಬುದನ್ನು. ಹರಿದುಹೋದ ಬಟ್ಟೆಯಂತೆ ಸದ್ಗುಣಗಳಿಂದು ಮಾನವರಿಂದ ತ್ಯಜಿಸಲ್ಪಟ್ಟಿರುವುವು. ನಾಗರೀಕತೆಯ ಹೊಳಪಿನಿಂದ ಧರ್ಮದ ಅಂಧಕಾರವು ಅಳಿಸಿಹೋಗಿರುವುದು. ಇನ್ನೂ ಅಲ್ಪಸ್ವಲ್ಪ ಧರ್ಮವು ಉಳಿದಿದ್ದರೆ ಅದು ಬಡ ಕೃಷಿಕನ ಹುಲ್ಲುಜೋಪಡಿಯಲ್ಲಿ; ಭಿಲ್ಲರು-ಮುಂಡರಂತಹ ಕಾಡುಜನಗಳ ಅಸಭ್ಯತೆಯಲ್ಲಿ. ಮಾಡು. ಜಿಹನ್‌ಖಾನ್, ನನ್ನನ್ನು ಖೈದುಮಾಡು.

**ಸಿಪಾರ**– ಹಾಗಾದರೆ ನನ್ನನ್ನೂ ಖೈದು ಮಾಡಿರಿ.

**ಜಿಹನ್**– ನಿನ್ನನ್ನೂ ಬಿಡುವುದಿಲ್ಲ, ಸಾಹೇಬಜಾದಾ. ಸಮ್ರಾಟನು ಹೆಚ್ಚಿಗೆ ಪುರಸ್ಕಾರವನ್ನು ಕೊಡುವನು.

**ದಾರ**– ಪುರಸ್ಕಾರವನ್ನು ಕೊಡುವನಲ್ಲವೆ! ಇಷ್ಟೊಂದು ಕೃತಘ್ನತೆಗೆ ತಕ್ಕ ಬೆಲೆಯನ್ನು ಹೊಂದುವೆಯಾ ಜಿಹನ್‌ಖಾನ್? ಅದು ಹೇಗಾದೀತು! ಬೇಕಾದಷ್ಟು ಹಣವನ್ನು ಹೊಂದುವೆ; ಆಗ ನಿನ್ನೀ ಮುಖವು ಎಷ್ಟೊಂದು ಕಾಂತಿಮಯವಾಗುವುದೆಂಬುದನ್ನು ನಾನೆನ್ನ ಕಲ್ಪನಾದೃಷ್ಟಿಯಿಂದ ನೋಡಬಲ್ಲೆನು. ಬೇಕಾದಷ್ಟು ಹಣವು ಬರುವುದು. ಎಲ್ಲವನ್ನು ನಿನ್ನೊಡನೆ ಪರಲೋಕಕ್ಕೆ ತೆಗೆದುಕೊಂಡು ಹೋಗುವೆ ಜಿಹನ್‌ಖಾನ್!

**ಜಿಹನ್**– ತಡವೇಕೆ? ಖೈದುಮಾಡಿರಿ.

**ದಾರ**– ಮಾಡಿರಿ. ಬೇಡ, ಇಲ್ಲಿ ಬೇಡ; ಹೊರಗೆ ಬನ್ನಿ. ಈ ಸ್ವರ್ಗಸನ್ನಿಧಿಯಲ್ಲಿ ನರಕದ ಅಭಿನಯವೇಕೆ? ಮಾತೇ ವಸುಂಧರೇ, ಹೇಗೆ ನೀನೀ ಹೊರೆಯನ್ನು ಹೊರಬಲ್ಲೆ? ನೀರವದಿಂದ ಎಷ್ಟನ್ನು ಸಹಿಸಬಲ್ಲೆ? ಹೇ! ಜಗನ್ನಿಯಾಮಕಾ, ಕೈಗಳನ್ನು ಕಟ್ಟಿಕೊಂಡು ಎಲ್ಲವನ್ನೂ ನೋಡುತ್ತ ಕುಳಿತಿರುವೆಯೋ? ನಡೆ-ಜಿಹನ್‌ಖಾನ್, ಹೊರಗೆಹೋಗುವ (ಎಲ್ಲರೂ ಹೊರಡಲುದ್ಯುಕ್ತರಾಗುವರು.)

**ದಾರ**– ನಿಲ್ಲಿರಿ; ನಿನ್ನನ್ನೊಂದು ಕೇಳಿಕೊಳ್ಳುವೆನು—ಜಿಹನ್‌ಖಾನ್, ನಡೆಸಿಕೊಡುವೆಯಾ? ಜಿಹನ್‌ಖಾನ್, ನೋಡು! ಈ ದೇವಿಯ ಮೃತದೇಹವನ್ನು ಲಾಹೋರಿಗೆ ಕಳುಹಿಸು; ಅಲ್ಲಿ ಸಮ್ರಾಟನ ಪರಿವಾರದ ಶವಾಗಾರದಲ್ಲದು ಗೋರಿಯಾ

ಗಲಿ. ಇಷ್ಟು ಮಾತ್ರ ಮಾಡುವೆಯಾ? ನಾನು ನಿನ್ನನ್ನೆರಡಾವರ್ತಿ ಪ್ರಾಣದಿಂದ ರಕ್ಷಿಸಿರುವುದರಿಂದ ಇಂದೀ ಭಿಕ್ಷೆಯನ್ನು ಬೇಡುವೆನು. ಇದು ಹೊರತು ಮತ್ತೇನನ್ನೂ ನಿನ್ನಿಂದ ಅಪೇಕ್ಷಿಸುವುದಿಲ್ಲ. ಏನು ಹೇಳುವೆ, ಜಿಹರ್ ಖಾನ್?

**ಜಿಹನ್ ಖಾನ್**--ಆಜ್ಞೆಯಂತೆ ಯುವರಾಜ. ಆ ಕಾರ್ಯವನ್ನು ಮಾಡದೇಹೋದರೆ ನನ್ನ ಪ್ರಭುವಾದ ಔರಂಗಜೀಬನೂ ಕ್ರುದ್ಧನಾಗುವನು.

**ದಾರಾ**--ಔರಂಗಜೀಬನು ನಿನ್ನ ಪ್ರಭು; ಹುಂ! ನನಗೇನೂ ಕೋಪವಿಲ್ಲ; ನಡೆಯಿರಿ. (ಹಿಂದಿರುಗಿ) ನಾದಿರಾ, (ಎಂದು ಹೇಳುತ್ತಾ ಮತ್ತೆ ಹಾಸಿಗೆಯ ಸಮೀಪಕ್ಕೆ ಬಂದು ನಾದಿರಳ ಕೈಗಳಮೇಲೆ ಮುಖವಿಟ್ಟುಕೊಳ್ಳುವನು; ಸ್ವಲ್ಪ ಹೊತ್ತಾದ ಮೇಲೆ ಎದ್ದು) ನಡೆ. ಜಿಹರ್ ಖಾನ್.

(ಎಲ್ಲರೂ ಹೊರಗೆ ಹೋಗುವರು. ಸಿಪಾರನು ಮಾತ್ರ ತಾಯಿಯ ಮೃತದೇಹವನ್ನು ನೋಡಿ ಅಳುತ್ತಾ ನಿಲ್ಲುವನು)

**ದಾರ**—(ತೀವ್ರಕಂಠದಿಂದ) ಸಿಪಾರ್!

(ಭಯದಿಂದ ಸಿಪಾರನು ಅಳುವುದನ್ನು ನಿಲ್ಲಿಸುವನು. ಎಲ್ಲರೂ ನೀರವವವಾಗಿ ಹೊರಗೆ ಹೋಗುವರು.)

# ನಾಲ್ಕನೆಯ ಅಂಕ.

## ಎರಡನೆಯ ನೋಟ.

ಸ್ಥಳ—ಯೋಧಪುರದ ರಾಜಗೃಹ. ಕಾಲ—ಮಧ್ಯಾಹ್ನ.
ಯಶೋವಂತಸಿಂಹ, ಮಹಾಮಾಯೆ ಕುಳಿತಿರುವರು.

**ಮಹಾಮಾಯೆ**-ಹತಭಾಗ್ಯ ದಾರನನ್ನು ವಂಚಿಸಿ, ಪುರಸ್ಕಾರರೂಪವಾಗಿ ಗುರ್ಜರದ ಸುಬೆಯನ್ನು ಹೊಂದಿ ಸಂತುಷ್ಟರಾಗಿರುವಿರಲ್ಲವೆ, ಮಹಾರಾಜ?

**ಯಶೋವಂತ**--ಅದರಲ್ಲಿ ನನ್ನ ತಪ್ಪೇನು, ಮಹಾಮಾಯೆ?

**ಮಹಾಮಾಯೆ**-ಅದರಲ್ಲಿ ನಿಮ್ಮ ತಪ್ಪೇನು? ಅದು ನಿಮಗೆ ದೊಡ್ಡ ಸನ್ಮಾನ, ಪರಮ ಗೌರವ!

**ಯಶೋವಂತ**—ಗೌರವವಾಗಲಾರದು. ಆದರದರಲ್ಲಾವ ಅನ್ಯಾಯವೂ ನನಗೆ

ತೋರುವುದಿಲ್ಲ. ದಾರನಿಗೆ ಸಹಾಯಮಾಡುವುದು, ಮಾಡದಿರುವುದು ನನ್ನ ಇಚ್ಛೆ. ದಾರನು ನನಗೇನಾಗಬೇಕು?

**ಮಹಾಮಾಯೆ**-ಯಾರೂ ಅಲ್ಲ; ನಿನ್ನ ಪ್ರಭು.

**ಯಶೋವಂತ**--ಪ್ರಭು? ಒಂದು ಕಾಲದಲ್ಲಿ ಪ್ರಭುವಾಗಿದ್ದನು ಈಗವನಾರು?

**ಮಹಾಮಾಯೆ**—ಇಂದು ದಾರನು ಅದೃಷ್ಟಚಕ್ರದ ಅಡಿಯಲ್ಲಿ ಭಾಗ್ಯದಿಂದ ವಂಚಿತನಾದವನು, ಮಾನವರಿಂದ ಬಿಡಲ್ಪಟ್ಟವನು. ಅಂತವನೊಡನೆ ನಿನಗೇನು ಸಂಬಂಧವಿದ್ದೀತು? ದಾರನು ನಿನ್ನ ಪ್ರಭುವಾಗಿದ್ದನು. ನಿನಗೆ ಪುರಸ್ಕಾರವನ್ನು ಕೊಡಬಲ್ಲವನಾಗಿದ್ದಾಗ, ಕೊರಡೆಯ ಪೆಟ್ಟಿನಿಂದ ಆಳಬಲ್ಲವನಾಗಿದ್ದಾಗ!

**ಯಶೋವಂತ**—ನನಗೇ?

**ಮಹಾಮಾಹೆ**--ಹೌದು ಮಹಾರಾಜ, 'ಇದ್ದೆನು' ಎಂಬುದಕ್ಕಾವ ಮೂಲ್ಯವೂ ಇಲ್ಲವೆ? ಆಗಿಹೋದುದನ್ನು ಒಮ್ಮೆಗೇ ಮರೆತುಬಿಡಲು ಸಾಧ್ಯವೆ? ವರ್ತಮಾನದಿಂದ ಒಮ್ಮೆಗೇ ಅದನ್ನು ಕಡಿದು ಹಾಕುವಿರಾ? ಒಂದು ದಿನ ಯಾವನು ನಿಮ್ಮ ಪ್ರಭುವಾಗಿದ್ದನೋ ಅಂತವನಿಗಿಂದು ನಿಮ್ಮಲ್ಲಾವ ಗೌರವವೂ ಇಲ್ಲವೆ? ಧಿಕ್ !

**ಯಶೋವಂತ**-ಮಹಾಮಾಯೆ, ನಿನ್ನೊಡನೆ ತರ್ಕವೇಕೆ? ನನಗಾವುದು ಉಚಿತವೆಂದು ತೋರಿತೋ ಅದನ್ನು ಮಾಡಿದೆನು. ನಿನ್ನ ಉಪದೇಶವು ನನಗೆ ಬೇಕಾಗಿಲ್ಲ.

**ಮಹಾಮಾಯೆ**-ಹೇಗೆ ಬೇಕಾದೀತು? ಯುದ್ಧದಲ್ಲಿ ಸೋತು ಹಿಂದಿರುಗಿದಿರಿ, ವಿಶ್ವಾಸಘಾತಕರಾಗಿ ಹಿಂದಿರುಗಿದಿರಿ, ಸ್ವಾಮಿದ್ರೋಹಮಾಡಿ ಹಿಂದಿರುಗಿದಿರಿ. ನಿಮಗೆ ಬೇಕಾದುದು ನನ್ನ ಭಕ್ತಿ ಅಲ್ಲವೆ?

**ಯಶೋವಂತ**-ಆದೇನು ಅಷ್ಟೊಂದು ದೊಡ್ಡ ಆಸೆಯೇ, ಮಹಾಮಾಯೆ?

**ಮಹಾಮಾಯೆ**--ಇಲ್ಲ, ಇಲ್ಲ; ಕೇವಲ ಸ್ವಾಭಾವಿಕವಾದ ಆಸೆ. ನೀನು ಕ್ಷತ್ರಿಯ--ವೀರ ಕ್ಷತ್ರಿಯಕುಲಕ್ಕೆ ಅವಮಾನವನ್ನು ತಂದಿರುವೆ! ತಿಳಿ; ಸಮಗ್ರರಾಜಪುತಾಣವೂ ನಿನ್ನನ್ನು ಧಿಕ್ಕಾರಮಾಡುತ್ತಿರುವುದು. ಸ್ವಯಂ ಔರಂಗಜೀಬನ ಮಾವ ಷಹನಾರಾಜನು ದಾರನಕಡೆ ಯುದ್ಧಮಾಡಿ, ಆ ರಣರಂಗದಲ್ಲಿ ಆನಂದದಿಂದ ಮೃತ್ಯುವನ್ನಾಲಿಂಗಿಸಿದನು. ನೀನಾದರೋ ದಾರನಿಗೆ ಆಸೆಯನ್ನು ತೋರಿಸಿ,

ಕಡೆಗೆ ಕಾಪುರುಷನಂತೆ ತಟಸ್ಥನಾಗಿ ನಿಂತೆ! ಹಾಯ್! ನಾಥ, ಏನು ಹೇಳಲಿ? ನಿವ್ಮಾ ಅಪಮಾನವು ಕ್ಷಣಕ್ಷಣವೂ ನನ್ನ ಶಿರದಲ್ಲಿ ಅಗ್ನಿವೃಷ್ಟಿಯನ್ನು ಸುರಿಸುತ್ತಿರುವುದು. ಆದರೂ ಅದು ನಿಮ್ಮನ್ನು ಸ್ಪರ್ಶಕೂಡಾ ಮಾಡಿಲ್ಲ; ಆಶ್ಚರ್ಯ!

**ಯಶೋವಂತ**–ಮಹಾಮಾಯಾ-

**ಮಹಾಮಾಯೆ**-ಮತ್ತೇನು? ಹೊರಡಿ, ನಿಮ್ಮ ನೂತನಪ್ರಭು ಔರಂಗಜೀಬನಬಳಿಗೆ.

[ಕೋಪದಿಂದ ಹೋಗುವಳು]

**ಯಶೋವಂತ**-ಒಳ್ಳೇದು; ಹಾಗೆಯೇ ಮಾಡುವೆನು. ಇಷ್ಟೊಂದು ಅವಜ್ಞೆಯೆ! ಹಾಗೆಯೇ ಮಾಡುವೆನು. [ಹೋಗುವನು]

## ನಾ ಲ್ಕ ನೆ ಯ ಅಂ ಕ .

### ಮೂರನೆಯ ನೋಟ.

ಸ್ಥಾನ—ಆಗ್ರಾದ ದುರ್ಗಪ್ರಾಸಾದದಲ್ಲಿ ಷಾಜಹಾನನ ಕೊಠಡಿ: ಕಾಲ--ರಾತ್ರಿ.

ಷಾಜಹಾನ್ ಮತ್ತು ಜಹನಾರಾ.

**ಷಹಜಹಾನ್**-ಇಂದೇನು ಕೆಟ್ಟ ಸುದ್ದಿ ಜಹನಾರಾ? ಇನ್ನುಳಿದಿರುವುದೇನು! ದಾರನು ಪರಾಜಿತನಾಗಿ ಕಾಬೂಲಿನ ಕಡೆ ಓಡಿಹೋದನು. ಸೂಜನು ದೂರ ಆರಖಾನದಲ್ಲಿ, ರಾಜಾಶ್ರಯದಲ್ಲಿ, ಸಪರಿವಾರವಾಗಿ. ಭಿಕ್ಷುಕ; ಮುರಾದನು ಗ್ವಾಲಿಯರ್ ದುರ್ಗದಲ್ಲಿ ಬಂದಿ: ಮತ್ತಾವ ಕೆಟ್ಟಸುದ್ದಿಯುಳಿದಿರುವುದು ಮಗಳೆ?

**ಜಹನಾರಾ**--ಪ್ರತಿದಿನವೂ ಈ ಸುದ್ದಿಗಳನ್ನು ನಿನ್ನಲ್ಲಿ ಹೇಳಬೇಕಾದುದು ನನ್ನ ದೌರ್ಭಾಗ್ಯ. ಆದರೇನು ಮಾಡಲಪ್ಪ! ಕಷ್ಟಗಳು ಒಂಟೊಂಟಿಯಾಗಿ ಬರುವುದಿಲ್ಲ.

**ಷಹಜಹಾನ್**--ಹೇಳು ಜಹನಾರಾ, ಇನ್ನುಳಿದುದೇನು?

**ಜಹನಾರಾ**-ಅಪ್ಪ, ದಾರನು ಸೆರೆಹಿಡಿಯಲ್ಪಟ್ಟನು.

**ಷಹಜಹಾನ್**—ಸೆರೆಹಿಡಿಯಲ್ಪಟ್ಟನೇ? ಅದು ಹೇಗೆ ಸಿಕ್ಕಿದನು, ಜಹನಾರಾ?

**ಜಹನಾರಾ**-ಜಿಹನ್‌ಖಾನನು ಮೋಸದಿಂದವನನ್ನು ಹಿಡಿದುಕೊಟ್ಟನು.

**ಷಹಜಹಾನ್**-ಜಿರ್ಹೆಖಾನ್! ಜಿರ್ಹೆಖಾನ್! ಏನು ಹೇಳಿದೆ ಜಹನಾರಾ? ಜಿರ್ಹೆ ಖಾನನೇ ?

**ಜಹನಾರಾ**-ಹೌದಪ್ಪ.

**ಷಹಜಹಾನ್**--ಇದೇನು ಪ್ರಳಯವು ಬಂದೊದಗಿತೇ, ಮಗಳೇ?

**ಜಹನಾರಾ**--ಇಂದು ಪ್ರಾತಃಕಾಲ ದಾರನನ್ನೂ, ಸಿಪಾರನನ್ನೂ ಆನೆಯಮೇಲೆ ಕುಳ್ಳಿರಿಸಿ ಡಿಲ್ಲಿಯನ್ನು ಪ್ರದಕ್ಷಿಣಮಾಡಿ ಕರೆದುತಂದರಂತೆ. ಅವರ ಮಾಸಿದ ಬಟ್ಟೆಗಳನ್ನೂ, ಬಾಡಿದ ಮುಖವನ್ನೂ ನೋಡಿ, ದಿಲ್ಲೀ ನಿವಾಸಿಗಳೆಲ್ಲರೂ ಅತ್ತರಂತೆ.

**ಷಹಜಹಾನ್**--ಅತ್ತುದು ಮಾತ್ರವೆ? ಅವರಲ್ಲಾರೂ ದಾರನನ್ನು ಬಿಡಿಸುವ ಪ್ರಯತ್ನ ಮಾಡಲಿಲ್ಲವೆ? ನಿಸ್ಸಹಾಯಕವಾದ ಕುರಿಗಳ ಹಿಂಡಿನಂತೆ ನೋಡಿ ತಲೆಯನ್ನು ತಗ್ಗಿಸಿದುದು ಮಾತ್ರ. ಅವರ ಹೃದಯವೇನು ಕಲ್ಲಿನಿಂದ ಮಾಡಿದ್ದೆ?

**ಜಹನಾರಾ**-ಇಲ್ಲಪ್ಪ, ಕಲ್ಲೂ ಕರಗುವುದು. ಅವರು ಹೇಡಿಗಳು. ಔರಂಗಜೇಬನ ಕತ್ತಿ, ಬಂದೂಕಗಳಿಗೆ ಹೆದರಿ ಮುಗ್ಧರಾದಂತೆ ನಿಂತುಬಿಟ್ಟರು. ತಲೆಯೆತ್ತಿ ನೋಡುವ ಸಾಹಸವನ್ನೂ ಸಹ ಮಾಡಲಿಲ್ಲ. ಅತ್ತುದೂ ಮರೆಯಲ್ಲಿ, ಔರಂಗಜೇಬನ ಕಡೆಯವರಾರಾದರೂ ಕಂಡಾರೆಂಬ ಭಯದಿಂದ.

**ಷಹಜಹಾನ್**-ಆಮೇಲೆ?

**ಜಹನಾರಾ**--ಆಮೇಲೆ ಔರಂಗಜೇಬನವರನ್ನು ಖಿಜರಾಬಾದಿನ ಒಂದು ಸಾಮಾನ್ಯ ಗೃಹದಲ್ಲಿ ಖೈದುಮಾಡಿಟ್ಟಿರುವನಂತೆ.

**ಷಹಜಹಾನ್**--ಸಿಪಾರ ಮತ್ತು ಜಿಹರತ್-ಇವರ ಗತಿಯೇನು?

**ಜಹನಾರಾ**-ಸಿಪಾರನು ತಂದೆಯ ಸಂಗಡಲೇ ಇರುವನು; ಜಹರತಳು ಔರಂಗಜೇಬನ ಅಂತಃಪುರದಲ್ಲಿ.

**ಷಹಜಹಾನ್**--ಔರಂಗಜೇಬನು ದಾರನನ್ನೇನು ಮಾಡಬೇಕೆಂದಿರುವನು, ಜಹನಾರಾ?

**ಜಹನಾರಾ**--ಏನುಮಾಡುವನೋ ಹೇಳಲಾಗುವುದಿಲ್ಲಪ್ಪ; ಆದರೂ, ಆದರೂ—

**ಷಹಜಹಾನ್**--ಅದೇನು ಜಹನಾರಾ, ಹೀಗೆ ನಡುಗುತ್ತಿರುವೆ?

**ಜಹನಾರಾ**--................ ಅಪ್ಪ--

**ಷಹಜಹಾನ್**-ಅದು ಸಂಭವವೇ ಮಗಳೇ? ಸಹೋದರನು ಸಹೋದರನನ್ನು ಕೊಲ್ಲಿಸುವುದು ಸಂಭವವೇ ?

**ಜಹನಾರಾ**--ಸುಮ್ಮನಿರು ಅಪ್ಪ. ಅದಾರ ಹೆಜ್ಜೆಯ ಸದ್ದು! ಕೇಳಬರುವುದೇ ಅಪ್ಪ? ಅಯ್ಯೊ, ಎಂತಹ ಮಾತನ್ನು ಹೇಳಿದೆ!

**ಷಹಜಹಾನ್**-ಅದೇಕೆ ಜಹನಾರಾ?

**ಜಹನಾರಾ**--ನೀನೇನು ಹೇಳಿಬಿಟ್ಟೆ ಅಪ್ಪ; ಇನ್ನಿದರಿಂದ ದಾರನಿಗೆ ರಕ್ಷೆಯಿಲ್ಲ.

**ಷಹಜಹಾನ್**--ಅದು ಹೇಗೆ?

**ಜಹನಾರಾ**--ಔರಂಗಜೀಬನು ದಾರನನ್ನು ಕೊಲ್ಲದಿರಬಹುದಾಗಿತ್ತು. ಅಷ್ಟೊಂದು ಘೋರಪಾಪವು ಔರಂಗಜೀಬನ ಹೃದಯದಲ್ಲೂ ಹುಟ್ಟದಿರಬಹುದು. ಈಗ ನೀನು ಆ ಮಾತನ್ನು ಅವನಿಗೆ ತೋರಿಸಿಕೊಟ್ಟೆ. ಏನು ಮಾಡಿದೆಯಪ್ಪ ! ಸರ್ವನಾಶವಾಗಿ ಹೋಯಿತು!

**ಷಹಜಹಾನ್**--ಔರಂಗಜೀಬನು ಇಲ್ಲಿಲ್ಲ; ನನ್ನ ಮಾತನ್ನು ಮತ್ತಾರು ಕೇಳಿದರು ?

**ಜಹನಾರಾ**--ಔರಂಗಜೀಬನಿಲ್ಲ; ಆದರೀ ಕಂಬಗಳಿಲ್ಲವೆ, ಈ ಗಾಳಿಯಿಲ್ಲವೆ, ದೀಪವಿಲ್ಲವೆ? ಇಂದು ಈ ಜೀವವಿಲ್ಲದ ಜಡಪದಾರ್ಥಗಳೂ ಔರಂಗಜೀಬನಿಗೆ ಸಹಾಯಮಾಡುತ್ತಿರುವವು. ನೀನಿದು ನನ್ನ ರಂಗಮಹಾಲೆಂದು ಭಾವಿಸುವೆ, ಇದು ಔರಂಗಜೀಬನ ಪಾಷಾಣಮಯವಾದ ಹೃದಯ; ಇಲ್ಲಿ ಬೀಸುತ್ತಿರುವದು ಯಮುನೆಯ ತಂಗಾಳಿಯಲ್ಲ, ಔರಂಗಜೀಬನ ವಿಷಾಕ್ತವಾದ ನಿಶ್ವಾಸ; ಇದು ದೀಪವಲ್ಲ, ಅವನ ಕಣ್ಣುಗಳ ಮರ್ಮಭೇದಿಯಾದ ನೋಟ. ಈ ಮಹಲಿನಲ್ಲಿ ಈ ರಾಜಪುರಿಯಲ್ಲಿ, ಈ ಸಾಮ್ರಾಜ್ಯದಲ್ಲಿ, ನನಗೂ ನಿನಗೂ ಯಾರಾದರೊಬ್ಬ ಬಂಧುವಿರುವನೆಂದು ನಂಬಿರುವೆಯಾ ಅಪ್ಪ? ಇಲ್ಲ, ಇಲ್ಲ; ಎಲ್ಲ ಔರಂಗಜೀಬನ ದಳದವರೇ ಅಪ್ಪ. ಇದಾರ ನೆರಳು!

**ಷಹಜಹಾನ್**--ಎಲ್ಲಿ ?

**ಜಹನಾರ**--ಏನು ಇಲ್ಲವಪ್ಪ; ಅಲ್ಲೇನನ್ನು ನೋಡುತ್ತಿರುವೆ?

**ಷಹಜಹಾನ್**--ಇಲ್ಲಿಂದ ಹಾರಿಬಿಡಲೆ?

**ಜಹನಾರ**--ಅದೇನಪ್ಪ!

ಷಹಜಹಾ೯--ದಾರನನ್ನು ರಕ್ಷಿಸಲುಸಾಧ್ಯವೇ? ಆವನನ್ನು ವಧ್ಯಭೂಮಿಗೆ ಕರೆದುಕೊಂಡು ಹೋಗುತ್ತಿರುವರು; ನಾನಿಲ್ಲಿ ಹೆಂಗಸಿನಂತೆ, ಶಿಶುವಿನಂತೆ--ನಿರುಪಾಯನಾಗಿ ಕುಳಿತಿರುವೆನು! ಕಣ್ಣುಗಳಿಂದ ಈ ಎಲ್ಲ ಘಟನೆಗಳನ್ನೂ ನೋಡುವೆನಾದರೂ ಪಶುವಿನಂತೆ ಉಂಡು, ತಿಂದು, ಮಲಗಿ ನಿದ್ರಿಸುತ್ತಿರುವೆನು. ಧಿಕ್ಕಾರವಿರಲಿ ಈ ಜನ್ಮಕ್ಕೆ! ಇಲ್ಲಿಂದ ಹಾರಿಬಿಡುವೆನು.

ಜಹನಾರಾ--ಇದೇನಪ್ಪ! ಇಲ್ಲಿಂದ ಹಾರಿದರೆ ಸಾವು ಖಂಡಿತ.

ಷಹಜಹಾ೯--ಹಾಗಾದರೂ ಉತ್ತಮವೆ. ಒಮ್ಮೆ ದಾರನನ್ನು ರಕ್ಷಿಸಲು ಪ್ರಯತ್ನಿಸುವೆನು.

ಜಹನಾರಾ--ಅಪ್ಪ ನೀನು ಉನ್ಮತ್ತನಂತೆ ಮಾತಾಡುತ್ತಿರುವೆ; ಸತ್ತಮೇಲೆ ದಾರನನ್ನು ಉಳಿಸುವ ಆಶೆಯಾದರೂ ಎಲ್ಲಿಯದು?

ಷಹಜಹಾ೯--ಅದು ನಿಶ್ಚಯ; ನಾನು ಸತ್ತಮೇಲೆ ದಾರನನ್ನುಳಿಸಬಲ್ಲೆನು ಹೇಗೆ? ಸರಿಯಾಗಿ ಹೇಳಿದೆ, ಜಹನಾರಾ. ಹಾಗಾದರೆ ಮಾಡಬೇಕಾದುದೇನು ಜಹನಾರಾ? ಒಂದುಸಾರಿ ಔರಂಗಜೇಬನನ್ನಿಲ್ಲಿಗೆ ಕರೆದುತರಬಲ್ಲೆಯಾ?

ಜಹನಾರಾ--ಇಲ್ಲ ಅಪ್ಪ, ಅವನು ಬರುವುದಿಲ್ಲ; ಹಾಗಿದ್ದಿದ್ದರೆ ಕೇವಲ ಹೆಂಗಸಾದ ನಾನವನೊಡನೆ ಒಮ್ಮೆ ಕಾಳಗಮಾಡಿ ನೋಡುತ್ತಿದ್ದೆನು. ಆ ದಿನ ಆಸ್ಥಾನಕ್ಕೆ ಹೋಗಿದ್ದೆನಲ್ಲ. ಅಂದಿನಿಂದ ಈ ಮಹಲನ್ನು ಬಿಟ್ಟುಹೋಗಲು ನನಗೆ ಆಜ್ಞೆಯಿಲ್ಲ. ಇಲ್ಲದಿದ್ದರೆ ನೋಡುತ್ತಿದ್ದೆನು.

ಷಾಜಹಾನ್--ನಾನು ಹಾರಿಬಿಡುವೆನು; ಇದೋ ಹಾರಿದೆ! [ಹಾರಲು ಉದ್ಯುಕ್ತನಾಗುವನು.]

ಜಹನಾರಾ--ಅಪ್ಪ, ನಿಲ್ಲು ನಿಲ್ಲು; ಇದೇನು ಹುಚ್ಚು!

ಷಾಜಹಾನ್--ಸರಿ; ಮಗಳೇ. ನಾನು ಹುಚ್ಚನಾಗಿ ಹೋದೆನಲ್ಲವೆ! ಇಲ್ಲ, ಇಲ್ಲ; ನಾನು ಹುಚ್ಚನಲ್ಲ. ಈಶ್ವರನೇ, ಈ ದುರ್ಬಲನಾದ, ಜೀರ್ಣಜೀರ್ಣನಾದ, ಅಸಹಾಯಕನಾದ, ಮುದುಕ ಷಹಜಾನನನ್ನೊಮ್ಮೆ ಕಣ್ಣೆತ್ತಿನೋಡು. ನಿನಗೆ ಕರುಣೆಯಿಲ್ಲವೆ? ಮಗನು ತಂದೆಯನ್ನು ಖೈದುಮಾಡಿಟ್ಟಿರುವನು. ಯಾವ ಮಗನು ತಂದೆಯನ್ನು ಕಂಡರೆಭಯದಿಂದ ಓಡುತ್ತಿದ್ದನೋ, ಅವನ ಇಷ್ಟೊಂದು ಅವಿಚಾರ, ಇಷ್ಟೊಂದು ಅತ್ಯಾಚಾರ, ಹಾಗೂ ಅಂತಹ ಅಸ್ವಾಭಾವಿಕ

ವ್ಯಾಪಾರಗಳನ್ನು ನಿನ್ನ ನಿಯಮವು ಸಹಿಸಬಲ್ಲುದೆ? ಸಹಿಸುವುದು ಸಾಧ್ಯವೇ? ಖುದಾ! ನಾನಿಂತಹ ಪಾಪವನ್ನೇನು ಮಾಡಿರುವೆನು? ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೇ ನನ್ನನ್ನು—

ಜಹನಾರಾ--ಒಂದುವೇಳೆ ಔರಂಗಜೀಬನಿಲ್ಲಿಗೆ ಬರಲಿ, ಆಗ ತೋರಿಸುವೆನು—ನನ್ನ ಕೈಗಳ ಶೀಟಿಯನ್ನು. [ಹಲ್ಲು ಕಡಿಯುವಳು]

ಷಾಜಹಾ್‌--ಮಮತಾಜ್, ನೀನು ಬಹು ಭಾಗ್ಯವಂತೆ. ಈ ಮರ್ಮಾಂತಿಕ ದೃಶ್ಯವನ್ನು ನೀನು ನೋಡಲಿಲ್ಲ. ನೀನು ಬಹು ಪುಣ್ಯವತಿ; ಆದುದರಿಂದಲೇ ಎಲ್ಲರಿಗಿಂತ ಮೊದಲೆ ಸತ್ತುಹೋದೆ. ಜಹನಾರಾ-

ಜಹನಾರಾ--ಅಪ್ಪ-

ಷಾಜಹಾ್‌--ಹೀಗೆ ಬಾ, ಮಗಳೇ. ನಿನ್ನನ್ನು ಹರಸುವೆನು.

ಜಹನಾರಾ--ಏಕೆ ಅಪ್ಪ?

ಷಾಜಹಾ್‌--ನಿನಗೆ ಮಕ್ಕಳಾಗುವುದು ಬೇಡವೆಂದು ಹರಿಸುವೆನೇ ತಾಯಿ; ನನ್ನ ಶತ್ರುಗಳಿಗೂ ಬೇಡ.

[ಹೀಗೆ ಹೇಳುತ್ತಾ ಷಾಜಹಾನನು ಹೊರಟುಹೋಗುವನು. ಜಹನಾರಳು ಮತ್ತೊಂದು ದಿಕ್ಕಿನಿಂದ ಹೋಗುವಳು.]

## ನಾ ಲ್ಕ ನೆ ಯ ಅ ೦ ಕ .

### ನಾಲ್ಕನೆಯ ನೋಟ.

ಸ್ಥಾನ—ಔರಂಗಜೀಬನ ಪ್ರಾಸಾದ. ಕಾಲ—ರಾತ್ರಿ.

[ಔರಂಗಜೀಬನು ಕೈಲೊಂದು ಪತ್ರವನ್ನಿಟ್ಟುಕೊಂಡು ಅಲ್ಲಿಂದಿಲ್ಲಿಗೆ ತಿರುಗಾಡುತ್ತಿರುವನು.]

ಔರಂಗಜೀಬ-ಇದು ದಾರನ ಮೃತ್ಯುದಂಡ. ಖಾಜಿಗಳ ನ್ಯಾಯತೀರ್ಪು! ಅದರಲ್ಲಿ ನನ್ನ ಅಪರಾಧವೇನು? ನಾನು ಮಾಡಬಲ್ಲುದೇನು? ಆದರೆ ಸಹೋದರನೆಂಬ ಪಕ್ಷಪಾತದಿಂದ ನ್ಯಾಯಪಥವನ್ನು ಪ್ರತಿಬಂಧಿಸುವುದು ಒಳಿತಲ್ಲ.

[ದಿಲ್ದಾರ್ ಪ್ರವೇಶಿಸುವನು.]

ದಿಲ್ದಾರ್--ಕೆಲೆ!

ಔರಂಗಜೀಬ--ಯಾರು! ದಿಲ್ದಾರ್, ನೀನು ಈ ಅವೇಳೆಯಲ್ಲಿಲ್ಲಿಗೇಕೆ ಬಂದೆ?

ದಿಲ್ದಾರ್—ನಾನು ಯಾವ ಸಮಯದಲ್ಲಿ ಎಲ್ಲಿಗೆ ಬರಬೇಕೋ ಅಲ್ಲಿಗೆ ಬರುವೆನು, ಜಹಾಪನಾ. ನಾನು ಈಗ ಇಲ್ಲಿಗೆ ಬಾರದೆ ಹೋಗಿದ್ದರೆ ಈ ಘೋರವಾದ ಕೊಲೆಯು.........

ಔರಂಗಜೀಬ-ಕೊಲೆ! ಅಲ್ಲ ದಿಲ್ದಾರ್, ಅದು ಖಾಜಿಗಳ ನ್ಯಾಯತೀರ್ಪು.

ದಿಲ್ದಾರ್-ಸಮ್ರಾಟರೇ, ನಿಜವಾದ ಮಾತನ್ನು ಹೇಳಲೆ?

ಔರಂಗಜೀಬ-ಹೇಳು.

ದಿಲ್ದಾರ್-ಸಮ್ರಾಟ್, ಹಠಾತ್ತಾಗಿ ನೀವು ಹೀಗೆ ನಡುಗುವಿರೇಕೆ? ಬೇಸಿಗೆಯ ಶುಷ್ಕವಾದ ವಾಯುವಿನ ಒಂದಲ್ಪ ಉಚ್ಛ್ವಾಸದಂತೆ ನಿಮ್ಮ ದನಿಯು ಕುಗ್ಗುತ್ತಿರುವುದೇಕೆ? ಏಕೆ ಜಹಪನಾ? ಸತ್ಯವನ್ನು ನುಡಿಯಲೆ !

ಔರಂಗಜೀಬ--ದಿಲ್ದಾರ್ !

ದಿಲ್ದಾರ್—ನೀವು ದಾರನ ಮರಣವನ್ನಿಚ್ಛಿಸುವಿರಿ. ಅದು ನಿಜವಾದ ಮಾತು!

ಔರಂಗಜೀಬ-ನಾನು ?

ದಿಲ್ದಾರ್—ಹೌದು; ನೀವು.

ಔರಂಗಜೀಬ—ಅದು ಖಾಜಿಗಳ ನ್ಯಾಯತೀರ್ಪು.

ದಿಲ್ದಾರ್–ನ್ಯಾಯತೀರ್ಪು! ಜಹಾಪನಾ, ಖಾಜಿಗಳು ದಾರನಿಗೆ ಮರಣದಂಡನೆಯನ್ನು ವಿಧಿಸಿದಾಗ ಈಶ್ವರನಕಡೆ ದೃಷ್ಟಿಯನ್ನಿಟ್ಟರಲಿಲ್ಲ. ಅವರು ನೋಡುತ್ತಿದ್ದದು ಜಹಾಪನಾವಿನ ನಗುಮುಖವನ್ನು. ಮಧ್ಯೆ ಮಧ್ಯೆ ತಮ್ಮ ಹೆಂಡತಿಯರ ನೂತನ ರತ್ನಾಭರಣಗಳನ್ನು ಕಲ್ಪಿಸಿಕೊಳ್ಳುತ್ತಿದ್ದರು. ಯಾವೆಡೆಯಲ್ಲಿ ಪ್ರಭುವಿನ ಆರಕ್ತ ದೃಷ್ಟಿಯು ಒರೆ ಕಳಚಿದ ಕತ್ತಿಯಂತೆ ತಲೆಯ ಮೇಲೆ ತೂಗಾಡುತ್ತಿರುವುದೋ, ಅಲ್ಲಿ ನ್ಯಾಯತೀರ್ಪು! ಒಮ್ಮೆಗೇ ಜಗತ್ತೆಲ್ಲವನ್ನೂ ವಂಚಿಸಬಲ್ಲೆನೆಂದು ತಿಳಿದಿರಾ, ಜಹಾಪನಾ? ಆಗಲೇ ಜನರಿಗೆಲ್ಲ ಮಂದಟ್ಟಾಗಿರುವುದು. ಕೇವಲ ಭಯದಿಂದ ಬಾಯಿಬಿಡುವುದಿಲ್ಲ. ಬಲಾತ್ಕಾರದಿಂದ ಜನಗಳ ಬಾಯಿ ಮುಚ್ಚಬಹುದು! ಆದರೆ ಬರೀಮಾತಿನಿಂದ ಕರಿಯದನ್ನು ಬಿಳಿದುಮಾಡಲಾಗುವುದಿಲ್ಲ. ನೀವು ನ್ಯಾಯದ ಹೆಸರಿನಿಂದ ನಿಮ್ಮ ಸಿಂಹಾ

ಸನವನ್ನು ನಿರಾಪದವಮಾಡಲು ದಾರನ ಕೊಲೆಮಾಡಿದಿರೆಂದು ಜನರು ತಿಳಿಯು ವರು; ಭವಿಷ್ಯವು ತಿಳಿಯುವುದು.

ಔರಂಗಜೇಬ--ಅದು ನಿಜ, ದಿಲ್ದಾರ್; ನೀನು ಸತ್ಯವಾದ ಮಾತನ್ನು ಹೇಳಿದೆ. ದಾರನ ಪ್ರಾಣವನ್ನು ನೀನಿಂದು ಉಳಿಸಿದೆ. ಹಿಂದೊಮ್ಮೆ ನನ್ನ ಪುತ್ರ ಮಹಮದ ನನ್ನು ಕಾಪಾಡಿದೆ. ಇಂದು ಅಣ್ಣ ದಾರನನ್ನು ಉಳಿಸಿದೆ! ಹೋಗು ದಿಲ್ದಾರ್, ಷಯಸ್ತಾಖಾನನನ್ನು ಇಲ್ಲಿಗೆ ಬೇಗ ಕಳುಹಿಸು. [ದಿಲ್ದಾರ್ ಹೋಗುವನು]

ಔರಂಗಜೇಬ--ದಾರನು ಉಳಿದುಕೊಳ್ಳಲಿ, ನಾನದರ ಸಲುವಾಗಿ ಸಿಂಹಾಸನವನ್ನು ತ್ಯಜಿಸಬೇಕಾದರೂ ತ್ಯಜಿಸುವೆನು. ಇಷ್ಟೊಂದು ಪಾಪಕೃತ್ಯವನ್ನು ಮಾತ್ರ-- ಈ ಮರಣದಂಡನೆಯನ್ನು ಹರಿದುಹಾಕುವುದೊಳಿತು (ಹರಿಯಲು ತೊಡಗಿ ಮತ್ತೆ ಸುಮ್ಮನಾಗಿ) ಬೇಡ, ಈಗ ಬೇಡ; ಷಯಸ್ತಾಖಾನನ ಸಮ್ಮುಖದಲ್ಲಿ ದನ್ನು ಹರಿದುಹಾಕಿ, ಈ ಮಹತ್ವದ ಕಾರ್ಯದಲ್ಲಿ ಪದಾರ್ಪಣಮಾಡುವೆನು.

(ಷಯಿಸ್ತಾಖಾನ್ ಮತ್ತು ಜಿಹನ್‌ಖಾನ್ ಬಂದು ಅಭಿವಾದನ ಮಾಡುವರು.)

ಔರಂಗಜೇಬ--ಸೇನಾಪತಿ, ವಿಚಾರಣೆಯಲ್ಲಿ ಅಣ್ಣ ದಾರನಿಗೆ ಮರಣದಂಡನೆಯಾಗಿ ರುವುದು.

ಜಿಹನ್‌ಖಾನ್--ದಂಡಾಜ್ಞೆಯು ತಮ್ಮ ಕೈಲೇ ಇರುವಂತಿದೆ! ನನಗದನ್ನು ಕೊಡಿ ಖುದಾಬಂದ್; ನಾನೇ ಸ್ವಯಂ ದಂಡವಿಧಾನ ಮಾಡಿಬರುವೆನು. ಕಾಫರನ ನ್ಯಾಯವಧೆಯನ್ನು: ಕೈಯಾರೆಮಾಡಲು ನನ್ನ ಕೈಗಳು ತವಕಗೊಳ್ಳುತ್ತಿರುವವು

ಔರಂಗಜೇಬ--ನಾನವನನ್ನು ಮನ್ನಿಸಿರುವೆನು.

ಷಯಸ್ತಾ--ಇದೇನು ಜಹಾಪನಾ? ವೈರಿಗೆ ಮನ್ನಣೆಯೇ! ಅವನು ನಿನ್ನ ಪ್ರತಿಕಕ್ಷಿ.

ಔರಂಗಜೇಬ--ಅದನ್ನು ಬಲ್ಲೆನು. ಆದುದರಿಂದಲೇ ಅವನನ್ನು ಮನ್ನಿಸುವುದು ಪರ ಮಗೌರವವೆಂದು ಬೋಧೆಯಾಗುತ್ತಿರುವುದು.

ಷಯಸ್ತಾಖಾನ್--ಜಹಾಪನಾ, ಈ ಗೌರವವನ್ನು ಕೊಂಡುಕೊಳ್ಳುವ ಸಲುವಾಗಿ ನಿಮ್ಮ ಸಿಂಹಾಸನವನ್ನು ವಿಕ್ರಯಮಾಡಬೇಕಾದೀತೆಂಬುದನ್ನು ಬಲ್ಲಿರಾ?

ಔರಂಗಜೇಬ--ಯಾವ ತೋಳುಗಳ ಬಲದಿಂದ ಈ ಸಿಂಹಾಸನವನ್ನು ಸಂಪಾದಿಸಿದೆ ನೋ. ಅವುಗಳ ಬಲದಿಂದಲೇ ರಕ್ಷಿಸಿಕೊಳ್ಳುವೆನು.

ಷಯಿಸ್ತಾಖಾ--ಜಹಾಪನಾ, ಒಂದು ಮಹಾ ವಿಪತ್ತನ್ನು ಹೆಗಲೇರಿಸಿಕೊಂಡು ಆ ಜೀವವೂ ರಾಜ್ಯವಾಳಬೇಕಾಗುವುದು! ಸಮಸ್ತಪ್ರಜೆಗಳೂ, ಸೈನ್ಯವೂ ದಾರನ ಪಕ್ಷವೆಂಬುದನ್ನು ಬಲ್ಲಿರಾ? ಅಂದವರೆಲ್ಲರೂ ದಾರನ ಸಲುವಾಗಿ ಮಕ್ಕಳಂತೆ ಅತ್ತರು, ಮತ್ತು ಜಹಪನಾಯವರನ್ನು ಶಪಿಸಿದರು; ಅವರಿಗೆಂದಾದರೊಮ್ಮೆ ಸುಯೋಗವು ದೊರೆಕಿತೆಂದರೆ—

ಔರಂಗಜೇಬ—ಏನಾಗುವುದು ?

ಷಯಿಸ್ತಾಖಾ-ತಾವು ದಾರನನ್ನು ಒಂದು ಗಳಿಗೆಯೂ ಬಂಧನದಲ್ಲಿಡಲಾಗುವುದಿಲ್ಲ; ತಿಳಿಯಿರಿ. ಜಹಾಪನಾ, ಎಂದಾದರೊಂದುದಿನ ಸ್ವಲ್ಪ ಸುಯೋಗವು ದೊರಕಿತೆಂದರೆ ಸೈನಿಕರು ದಾರನನ್ನು ಮುಕ್ತನನ್ನಾಗಿ ಮಾಡಿಬಿಡುವರು. ಆಮೇಲೆ...... ಜಹಪನಾಯವರಿಗೆ ತಿಳಿದೇ ಇದೆ.

ಔರಂಗಜೇಬ--ಹೌದು.

ಷಯಿಸ್ತಾ--ಅಲ್ಲದೆ, ವೃದ್ಧ ಸಮ್ರಾಟರೂ ದಾರನ ಪಕ್ಷವನ್ನು ವಹಿಸಿರುವರು. ಮತ್ತು ಸೈನ್ಯದವರೂ ಆತನನ್ನು ಗುರುವಿನಂತೆ ಆದರಿಸುವರು, ತಂದೆಯಂತೆ ಪ್ರೀತಿಸುವರು.

ಔರಂಗಜೇಬ--ಹುಂ ! (ಅಡ್ಡಾಡುತ್ತಾ) ಬೇಕಾದರೆ ಈ ಸಿಂಹಾಸನವನ್ನೇ ತ್ಯಜಿಸಿಬಿಡುವೆನು.

ಷಯಿಸ್ತಾ--ಹಾಗಾದರಿಷ್ಟೊಂದು ಶ್ರಮದಿಂದ ಅದನ್ನು ಹೊಂದಿದುದರ ಪ್ರಯೋಜನವೇನು? ತಂದೆಯನ್ನು ರಾಜ್ಯಭ್ರಷ್ಟನನ್ನಾಗಿಮಾಡಿ, ತಮ್ಮನನ್ನು ಸೆರೆಹಿಡಿದು ಇಷ್ಟೊಂದು ಸಾಹಸದ ಅರ್ಥವೇನು, ಜಹಪನಾ?

ಔರಂಗಜೇಬ-ಆದರೂ—

ಜಿಹರ್‌ಖಾ--ಖೋದಾಬಂದ್, ದಾರನು ಕಾಫರ; ತಾವು ಕಾಫರನನ್ನು ಮನ್ನಿಸುವುದೇ ಖೋದಾಬಂದ್? ಈ ಇಸ್ಲಾಮಿ ಧರ್ಮವನ್ನು ರಕ್ಷಿಸುವ ಸಲುವಾಗಿ ನೀವಿಂದು ಸಿಂಹಾಸನದಮೇಲೆ ಕುಳಿತಿರುವಿರಿ; ಅದು ನೆನಪಿರಲಿ. ಧರ್ಮದಮೇಲೆ ದೃಷ್ಟಿಯಿರಲಿ.

ಔರಂಗಜೇಬ-ಸರಿಯಾಗಿ ಹೇಳಿದೆ ಜಿಹರ್‌ಖಾ, ದಾರನು ನನ್ನ ವಿಷಯದಲ್ಲಿ ಮಾಡಿದ ಸರ್ವಾಪರಾಧ ಅನ್ಯಾಯಗಳನ್ನು ಕ್ಷಮಿಸಬಲ್ಲೆನು. ಆದರೆ ಇಸ್ಲಾಮಿ

ಧರ್ಮದ ವಿರುದ್ಧವಾಗಿ ಸ್ವಲ್ಪಮಾತ್ರ ಅಪಮಾನವನ್ನೂ ಸಹಿಸಲಾರೆನು. ತೆಗೆದುಕೋ ಜಿಹನ್‌ಖಾನ್, ದಂಡಾಜ್ಞೆಯನ್ನು. [ಕೊಡುವನು]

ಜಿಹನ್‌ಖಾನ್-ಆಜ್ಞೆ. ಜಹಾಪನಾ, ಇಂದಿನರಾತ್ರಿಯೇ ದಾರನ ಛಿನ್ನಮುಂಡವನ್ನು ತಮಗೆ ತಂದುತೋರುವೆನು.

ಔರಂಗಜೀಬ-ಎಲ್ಲಿ, ದಂಡಾಜ್ಞೆಯನ್ನು ಕೊಡು. ದಸ್ತುಖತನ್ನು ಮಾಡಿಕೊಡುವೆನು.

(ಕಾಗದವನ್ನು ತೆಗೆದುಕೊಂಡು ರುಜುಮಾಡುವನು. ಬಳಿಕ ಕೊಡಲು ಹಿಂದುಮುಂದು ನೋಡುವನು)

ಜಿಹನ್‌ಖಾನ್--ಜಹಾಪನಾ, ನನ್ನ ಕುದುರೆಯು ಪ್ರಸ್ತುತವಾಗಿ ಹೊರಗೆ ಕಾದಿರುವುದು. ತಮ್ಮಾಜ್ಞೆಯನ್ನು ಕೊನೆಗಾಣಿಸುವ ಮೊದಲು ನಾನಿಂದು ನಿದ್ರೆ ಹೋಗುವುದಿಲ್ಲ.

ಔರಂಗಜೀಬ--ತೆಗೆದುಕೊ [ಕೊಡುವನು]

ಜಿಹನ್‌ಖಾನ್-(ತೆಗೆದುಕೊಂಡು) ಆಜ್ಞೆ ಖೊದಾಬಂದ್ [ಹೊರಡುವನು]

ಔರಂಗಜೀಬ--ನಿಲ್ಲು ನೋಡುವ (ದಂಡಾಜ್ಞೆಯನ್ನು ತೆಗೆದುಕೊಂಡು ಓದಿ ಮತ್ತೆ ಹಿಂದಿರುಗಿ ಕೊಡುವನು) ಒಳ್ಳೇದು ಹೋಗು.

(ಜಿಹನ್‌ಖಾನನು ಹೊರಡುತ್ತಲೆ ಔರಂಗಜೀಬನು ಮತ್ತೆ ಅವನನ್ನು ಕರೆಯುವನು.)

ಔರಂಗಜೀಬ-ಎಲ್ಲಿ ? (ದಂಡಾಜ್ಞೆಯನ್ನು ಮತ್ತೆ ಓದಿ ಹಿಂದಿರುಗಿ ಕೊಡುವನು) ಒಳ್ಳೇದು; ಹೋಗು. [ಜಿಹನಖಾನನು ಹೋಗುವನು.]

ಔರಂಗಜೀಬ—(ಜಿಹನಖಾನನು ಹೋದಕಡೆಯೇ ನೋಡಿ ಪುನಃ ಒಂದು ಕ್ಷಣಮಾತ್ರ ಚಿಂತಿಸಿ) ಅದು ಕಾರ್ಯವಲ್ಲ; ಜಿಹನ್ ಆಲಿ! ಜಿಹನ್ ಆಲಿ! ಹೊರಟು ಹೋದನು. ಷಯಿಸ್ತಾಖಾನ್ !

ಷಯಿಸ್ತಾಖಾರ್--ಖೋದಾಬಂದ್–

ಔರಂಗಜೀಬ--ಏನನ್ನು ಮಾಡಿಬಿಟ್ಟೆನು ?

ಷಯಿಸ್ತಾಖಾರ್-ತಮಗೆ ಯೋಗ್ಯವಾದ ಕಾರ್ಯವನ್ನೇ ಮಾಡಿದಿರಿ, ಜಹಾಪನಾ.

ಔರಂಗಜೀಬ--ಆದರೂ ..... [ಮೆಲ್ಲನೆ ಹೋಗುವನು]

ಷಯಿಸ್ತಾಖಾನ—[ಸ್ವಗತ]‘ಔರಂಗಜೀಬ, ಹಾಗಾದರೆ ನಿನಗೂ ಸ್ವಲ್ಪ ವಿವೇಕವಿದೆ! [ಹೋಗುವನು.]

## ಐದನೆಯ ನೋಟ.

ಸ್ಥಾನ—ಖಿಜಿರಾಬಾದಿನಲ್ಲಿ ಒಂದು ಮನೆ. ಕಾಲ—ರಾತ್ರಿ

(ಸಿಪಾರನು ಬಂದು ಹಾಸಿಗೆಯಮೇಲೆ ಮಲಗಿರುವನು. ದಾರನು ಜಾಗರನಾಗಿ ಅವನಕಡೆ ನೋಡುತ್ತಿರುವನು)

ದಾರಾ-ನಿದ್ರೆಮಾಡು ಸಿಪಾರ್, ನಿದ್ರೆಮಾಡು. ನಿದ್ರೆಯೇ, ಸರ್ವ ಸಂತಾಪಗಳನ್ನು ಹರಿಸುವ ನಿದ್ರೆಯೇ, ನೀನೀ ಸಿಪಾರನ ಸರ್ವ ದುಃಖಗಳೂ ಮರೆಯುವಂತೆ ಮಾಡು. ಮಗುವು ಈ ಮಳೆ ಬಿಸಿಲಲ್ಲಿ ನನ್ನೊಡನೆ ಅಲೆದಾಡಿ ಬಹು ಆಯಾಸಗೊಂಡಿರುವುದು; ನಿನ್ನ ಕೈಲಾದಷ್ಟು ಸಮಾಧಾನಮಾಡು. ನಾನು ಹೇಡಿ; ಮಗನನ್ನು ಸಾಕಿಸಲಹಿ, ಅನ್ನಬಟ್ಟೆಗಳನ್ನು ಕೊಡುವುದು ತಂದೆಯ ಕಾರ್ಯ; ಅದೂ ನನ್ನ ಕೈಲಾಗುತ್ತಿಲ್ಲ. ಮಗನೇ, ನೀನು ಹಸಿವಿನಿಂದ ಬೇಯುತ್ತಿದ್ದರೂ ತಿನ್ನಲೇನನ್ನೂ ಕೊಡಲಾರದೆ ಹೋದೆನು; ಬಾಯಾರಿಕೆಯಿಂದ ನಿನ್ನ ಗಂಟಲು ಒಣಗುತ್ತಿದ್ದರೂ ಸ್ವಲ್ಪ ನೀರನ್ನು ತಂದುಕೊಡಲಾರದೆ ಹೋದೆನು; ಛಳಿಯಲ್ಲಿ ಉಡುವ ಬಟ್ಟೆಯನ್ನು ಕೊಡಲಾರದೆ ಹೋದೆನು. ನನಗೂ ಅನ್ನವಿಲ್ಲ, ನಿದ್ರೆಯಿಲ್ಲ; ಆದರೆ ನನ್ನ ಹೃದಯವು ಅದಕ್ಕೋಸ್ಕರ ಸ್ವಲ್ಪವೂ ದುಃಖಿತವಾಗಿಲ್ಲ. ನಿನ್ನ ದುಃಖ, ನಿನ್ನ ದೈನ್ಯ, ನಿನ್ನ ಅಪಮಾನ ಇವುಗಳಿಂದ ಪ್ರತಿ ಕ್ಷಣದಲ್ಲೂ ನನ್ನ ಹೃದಯವು ವಿಕ್ಷುಬ್ಧವಾಗುತ್ತಿದೆ. ಮಗನೇ, ನನ್ನ ಪ್ರಾಣಾಧಿಕನೇ, ಇಂದು ನಿನ್ನನ್ನು ನೋಡುವುದರಿಂದ ನನ್ನ ಮನಸ್ಸಿಗೆ ಭಾಸವಾಗುವುದು:—ಈ ವಿಶಾಲ ಜಗತ್ತಿನಲ್ಲಿ ನೀನು ಮತ್ತು ನಾನು ಹೊರತು ನಮಗೆ ಮತ್ತಾರೂ ಇಲ್ಲವೆಂದು. ಇಂದು ನಾನು ಕಾರಾಗಾರದಲ್ಲಿ ಬಂದಿ! ಇಷ್ಟೊಂದುದುಃಖವು ಈಗಲೂ ನಿನ್ನಮುಖವನ್ನು ನೋಡುವುದರಿಂದ ಮರೆತು ಹೋಗುವುದು.

[ದಿಲ್ದಾರನ ಪ್ರವೇಶ.]

ದಾರಾ- ಯಾರು ನೀನು?

ದಿಲ್ದಾರ್--ನಾನು. ಹಾ! ಇಂದೆಂತಹ ನೋಟ!

ದಾರಾ—ನೀನು ಯಾರು?

ದಿಲ್ದಾರ್--ನಾನು. ಹಿಂದೆ ಸುಲ್ತಾನ್ ಮೊರಾದನ ವಿದೂಷಕನಾಗಿದ್ದೆನು; ಈಗ ಸಮ್ರಾಟ್ ಔರಂಗಜೀಬನ ಸಭಾಸದ.

ದಾರಾ—ಇಲ್ಲಿಗೆ ಬರುವ ಕಾರಣವೇನು ?

ದಿಲ್ದಾರ್--ಕಾರಣವೇನೂ ಇಲ್ಲ. ಒಂದು ಸಾರಿ ನೋಡಿಹೋಗೋಣವೆಂದು ಬಂದೆ.

ದಾರಾ--ಯಾಕೆ ತಮ್ಮ? ನನ್ನನ್ನು ನೋಡಿ ನಗುವ ಸಲುವಾಗಿಯೇ? ಆಗಬಹುದು.

ದಿಲ್ದಾರ್--ಇಲ್ಲ, ಯುವರಾಜ; ನಾನು ನಗುವಸಲುವಾಗಿ ಬರಲಿಲ್ಲ. ಹಾಗೊಂದು ವೇಳೆ ಅದೇ ಅಭಿಪ್ರಾಯದಿಂದ ಬಂದಿದ್ದರೂ ಇಲ್ಲಿನ ನೋಟವನ್ನು ನೋಡಿ ಆ ನಗುವು ಕಂಠದಲ್ಲಿಯೇ ಲೀನವಾಗಿ ಹೋಗಿ ಫಳ ಫಳ ಕಣ್ಣೀರು ಸುರಿಯುತ್ತಿತ್ತು. ಇದೆಂತ ನೋಟ! ಯುವರಾಜ ದಾರನು ಇಂದೀಯವಸ್ಥೆಯಲ್ಲಿಯೆ! [ಭಗ್ನಕಂಠದಿಂದ] ದೇವರೇ, ..........

ದಾರಾ--ಇದೇನು ತಮ್ಮ, ನಿನ್ನ ಕಣ್ಣುಗಳಿಂದ ನೀರು ತೊಟಗುಟ್ಟುತ್ತಿರುವುದು! ಅಳುವಿಯೋ, ಅಳು!

ದಿಲ್ದಾರ್-ಇಲ್ಲ; ಅಳುವುದಿಲ್ಲ. ಇದು ಬಹಳ ಮಹತ್ವದ ನೋಟ; ಒಂದು ಪರ್ವತವು ಮುರಿದು ಬೀಳುತ್ತಿರುವುದು; ಒಂದು ಸಮುದ್ರವು ಬತ್ತಿಹೋಗುತ್ತಿರುವುದು; ಸೂರ್ಯಮಂಡಲವೊಂದು ಕಾಂತಿಗುಂದುತ್ತಿರುವುದು. ಬ್ರಹ್ಮಾಂಡದಲ್ಲೊಂದೆಡೆ ಸೃಷ್ಟಿಯೂ, ಮತ್ತೊಂದೆಡೆ ಧ್ವಂಸವೂ ಆಗುತ್ತಿರುವುದು. ಇಹ ಸಂಸಾರದಲ್ಲಿಯೂ ಹಾಗೆಯೇ! ಇಂದಿಲ್ಲಿ ಧ್ವಂಸ; ಮಹತ್ವಾದ, ಪವಿತ್ರವಾದ, ಮಹಿಮಾಮಯವಾದ ಧ್ವಂಸ'

ದಾರಾ--ನೀನೊಬ್ಬ ದಾರ್ಶನಿಕನಹಾಗೆ ಕಾಣುವಿ, ತಮ್ಮ.

ದಿಲ್ದಾರ್-ಇಲ್ಲ ಯುವರಾಜ, ನಾನು ದಾರ್ಶನಿಕನಲ್ಲ, ವಿದೂಷಕನುಮಾತ್ರ; ಪರಿಷತ್ ಪದವಿಯನ್ನು ಹೊಂದಿರುವೆನು; ದಾರ್ಶನಿಕನ ಪದವಿಗಿನ್ನೂ ಏರಿಲ್ಲ. ಅಥವಾ ಹುಲ್ಲನ್ನು ತಿನ್ನುತ್ತಾ ಮಧ್ಯೆ ಮಧ್ಯೆ ಒಂದೊಂದು ಬಾರಿ ತಲೆಯೆತ್ತಿ ಆಕಾಶವನ್ನು ನೋಡುವುದರ ಹೆಸರು ದರ್ಶನವೆಂದಾದರೆ ನಾನೂ ಒಬ್ಬ ದಾರ್ಶನಿಕ!

ಷಹಜಾದಾ--ಮೂರ್ಖರು ತಿಳಿಯುವರು:-ದೀಪವು ಉರಿಯುವುದು ಸ್ವಾಭಾವಿಕ, ಆರಿಹೋಗುವುದು ಅನ್ಯಾಯವೆಂದು; ಬೀಜವು ಅಂಕುರಿಸಿ ಮರವಾಗುವುದು ಉಚಿತ, ಮರವುಮುದಿಯಾಗಿ ಒಣಗುವುದು ಉಚಿತವಲ್ಲವೆಂದು; ಮನುಷ್ಯನಿಗೆ ಸುಖವನ್ನು ಕೊಡುವುದು ಮಾತ್ರ ದೇವರಿಗೆ ಯುಕ್ತ, ದುಃಖವನ್ನು ಕೊಡು

ವುದು ಅತ್ಯಾಚಾರವೆಂದು! ಆದರಾ ಸುಖದುಃಖಗಳೆರಡೂ ಒಂದೇ ನಿಯತಿಯು ಎರಡು ದಿಕ್ಕುಗಳು.

ದಾರಾ—ನಾನದನ್ನು ಚಿಂತಿಸುತ್ತಿಲ್ಲ. ಆದರೀ ದುಃಖದಲ್ಲೂ ನಗುವುದು ಯಾರಿಂದ ಸಾಧ್ಯ? ಸಾವನ್ನಾರು ಆದರದಿಂದೆದುರುಗೊಳ್ಳುವರು?

ದಿಲ್ದಾರ್—ಯುವರಾಜ, ನಿನ್ನ ಪ್ರಾಣದಂಡನೆಯ ಆಜ್ಞೆಯನ್ನು ನಾನಿಂದು ವ್ಯರ್ಥ ಮಾಡಲು ಬಂದಿರುವೆನು. ನಿನಗೀ ಕಾರಾಗಾರದಿಂದ ಪಾರಾಗುವ ಇಷ್ಟವಿದ್ದರೆ ಇದೋ ನನ್ನ ಉಡುಪನ್ನು ಧರಿಸಿಕೊಂಡು ಹೊರಟುಹೋಗು. ಯಾರೂ ಅಡ್ಡಿ ಮಾಡುವುದಿಲ್ಲ. ಬಾ ಯುವರಾಜ, ಬೇಗ ನಮ್ಮ ಉಡುಪನ್ನು ಬದಲಾಯಿಸಿ ಕೊಳ್ಳುವ.

ದಾರ--ಆಮೇಲೆ ನಿನ್ನ ಪಾಡು?

ದಿಲ್ದಾರ್-ನಾನು ಸಾಯಲಪೇಕ್ಷಿಸುವೆನು; ಸಾಯುವುದಕ್ಕೆ ನನಗೆ ಪರಮಾನಂದ. ಇಹಸಂಸಾರದಲ್ಲಿ ನನಗೋಸುಗವಾಗಿ ಅಳುವವರು ಯಾರೂ ಇಲ್ಲ.

ದಾರ—ನೀನು ಸಾಯಲಪೇಕ್ಷಿಸುವೆಯ!

ದಿಲ್ದಾರ್--ಹೌದು ಷಹಜಾದಾ, ನಾನು ಸಾಯಲು ಒಂದು ಸುಯೋಗವನ್ನು ಹುಡು ಕುತ್ತಿದ್ದೆನು. ಸಾಯುವುದರಲ್ಲಿ ನನಗೆ ಬಹಳ ಪ್ರೀತಿ. ನಾನು ನಿನ್ನ ವಿಷ ಯದಲ್ಲಾವಾಗಲೂ ಕೃತಜ್ಞನಾಗಿರಬೇಕೆಂಬ ಇಚ್ಛೆಯಿದ್ದಲ್ಲಿ-

ದಾರ-ಏನು?

ದಿಲ್ದಾರ್-ಇಂದೆನಗೆ ನೀನಾ ಸುಯೋಗವನ್ನು ಒದಗಿಸಿಕೊಡು; ಬೇಗ-

ದಾರ-ಈಶ್ವರನೇ, ಇದೇನು ಸ್ವರ್ಗದ ಆಟವೇ! ಅಲ್ಲದೆ ಏನು? ಇಲ್ಲ ತಮ್ಮ, ನಾನು ಹೋಗುವುದಿಲ್ಲ.

ದಿಲ್ದಾರ್-ಏಕೆ? ಸಾಯಲೊಂದು ಸುಯೋಗವನ್ನು ಬೇಡಿದರೂ ಕೊಡುವವರಿಲ್ಲವೆ, ಯುವರಾಜ? [ಕಾಲುಗಳನ್ನು ಹಿಡಿದುಕೊಳ್ಳುವನು]

ದಾರ-ನೀನು ಸಾಯುವುದೆನಗೆ ಸಮ್ಮತವಿಲ್ಲ. ಅಲ್ಲದೆ ಈ ಹುಡುಗನನ್ನು ಬಿಟ್ಟು ನಾನೆಲ್ಲಿಗೂ ಹೋಗಲಾರೆನು.

[ಜಿಹೆನ್‌ಖಾನನು ಪ್ರವೇಶಿಸುವನು]

ಜಿಹನ್‌ಖಾನ್-ಇನ್ನೆಲ್ಲಿ ಹೋಗುವುದು - ಸಾಧ್ಯವೂ ಇಲ್ಲ. ಇದು ದಾರನ ಪ್ರಾಣ ದಂಡನೆಯ ಆಜ್ಞೆ.

ದಿಲ್ದಾರ್--ಏನು ?

ಜಿಹನ್‌ಖಾ್‌--ಸಾಯಲು ಸಿದ್ಧನಾಗು, ಷಹಜಾದಾ; ಕಟುಕರು ಕಾದಿರುವರು.

ದಿಲ್ದಾರ್--ಹಾಗಾದರೆ ಸಮ್ರಾಟನ ಮನಸ್ಸು ಬದಲಾಯಿಸಿತೊ ?

ಜಿಹನ್‌ಖಾ್‌-ಹೌದು ದಿಲ್ದಾರ್, ನೀನು ಅನುಗ್ರಹಮಾಡಿ ಹೊರಗೆ ಹೋಗು; ನಮ್ಮ ಕೆಲಸವನ್ನು ನಾವು ಮಾಡುವೆವು.

ದಾರಾ--ಔರಂಗಜೀಬನು ತನ್ನ ಪ್ರಕಾಂಡ ಸಾಮ್ರಾಜ್ಯದಲ್ಲಿ ಉಸಿರಾಡಲು ನನಗೊಂದು ಮಾರು ಭೂಮಿಯನ್ನೂ ಕೊಡಲಾರದೆ ಹೋದನು. ನಾನೀ ಕ್ಷುದ್ರವಾದ ಅಂಧಕಾರಮಯವಾದ ಮನೆಯಲ್ಲಿರುವೆನು; ಮೈಮೇಲೆ ಮಾಸಿದ ಚಿಂದಿಯ ಬಟ್ಟೆ; ತಿನ್ನಲು ಈ ಒಣಗಿದ ರೊಟ್ಟಿ. ಕಡೆಗಿಷ್ಟನ್ನೂ ಕೊಡಲಾರದೆ ಹೋದನೆ?

ದಿಲ್ದಾರ್--ನೀನಿಂದು ಸ್ವಲ್ಪ ತಡೆದಿರು ಜಿಹನ್ ಆಲಿ. ನಾನು ಸಮ್ರಾಟನಿಂದ ಆಜ್ಞೆಯನ್ನು ತೆಗೆದುಕೊಂಡು ಬರುವೆನು.

ಜಿಹನ್‌ಖಾ್‌—ಇಲ್ಲ ದಿಲ್ದಾರ್, ಈ ರಾತ್ರಿಯೇ ಷಹಜಾದನ ಛಿನ್ನ ಮುಂಡವನ್ನು ತನಗೆ ತಂದು ತೋರಬೇಕೆಂದು ಸಮ್ರಾಟನ ಆಜ್ಞೆ.

ದಾರಾ—ಈ ರಾತ್ರಿಯೇ ! ಅಷ್ಟೊಂದು ಆತುರ ! ನನ್ನ ಛಿನ್ನ ಮಸ್ತಕವನ್ನು ಅವನು ನೋಡಬೇಕೋ? ಅನ್ಯಥಾ ಅವನ ಕಣ್ಣುಗಳಿಗೆ ನಿದ್ರೆ ಹತ್ತವೊಲ್ಲದೆಂದು ತೋರುವುದು ! ನನ್ನ ರುಂಡಕ್ಕಿಷ್ಟೊಂದು ಬೆಲೆಯಿತ್ತೆಂಬುದು ನನಗೆ ತಿಳಿದಿರಲಿಲ್ಲ.

ಜಿಹನ್‌ಖಾ್‌—ಈ ರಾತ್ರಿಯೇ ನಿನ್ನ ಛಿನ್ನಮುಂಡವನ್ನು ತೆಗೆದುಕೊಂಡು ಹೋಗಲಾರವಾದರೆ ನಮ್ಮ ಪ್ರಾಣಗಳು ಉಳಿಯುವುದಿಲ್ಲ.

ದಾರಾ—ಓ ! ಹಾಗಿದ್ದಲ್ಲಿ ನೀನೇನು ಮಾಡಬಲ್ಲೆ? ಜಿಹನ್‌ಖಾ್, ಒಳ್ಳೇದು; ನನ್ನನ್ನು ವಧೆಮಾಡು. ಅದು ಸಮ್ರಾಟನ ಆಜ್ಞೆ ! ಇಂದು ಸಮ್ರಾಟನಾರು, ಪ್ರಜೆಯಾರು? ನಗುವೆಯಾ, ನಗು !

ಜಿಹ್‌ಖಾ್‌--ನೀವು ಸಿದ್ಧರಾಗಿರುವಿರಾ ?

ದಾರಾ--ಸಿದ್ಧನಾಗಿರುವೆನು. ಒಂದು ವೇಳೆ ನಾನು ಸಿದ್ಧನಾಗಿಲ್ಲದ ಪಕ್ಷಕ್ಕೆ ನಿಮಗೇನಾಯಿತು ? [ದಿಲ್ದಾರನೊಡನೆ] ಒಂದು ದಿನ ಈ ಜಿಹ್‌ಆಲಿಖಾನನು ಕೈ

ಜೋಡಿಸಿ ನನ್ನಲ್ಲಿ ಪ್ರಾಣಭಿಕ್ಷೆಯನ್ನು ಬೇಡಿದನು; ನಾನು ಕೊಟ್ಟೆನು. ಇಂದು ದೇವರೇ, ನಿನ್ನ ರಚನಾಕೌಶಲವು ಎಷ್ಟೊಂದು ಚಮತ್ಕಾರ !

ಜಿರ್ಹಖಾ-- ಸಮ್ರಾಟನ ಆಜ್ಞೆ; ಖಾಜಿಗಳ ನ್ಯಾಯತೀರ್ಪು. ನಾನು ಮಾಡುವುದೇನು ಷಹಜಾದಾ ?

ದಾರಾ--ಸಮ್ರಾಟನ ಆಜ್ಞೆ; ಖಾಜಿಗಳ ನ್ಯಾಯತೀರ್ಪು ! ನಿಜ. ನೀನೇನು ಮಾಡಬಲ್ಲೆ ? ಹೋಗು ಬಂಧುವೆ. ನಮ್ಮಿರ್ವರಿಗೆ ಇದೆ ಮೊದಲನೆಯ ಮತ್ತು ಕಡೆಯ ಸಂದರ್ಶನ.

ದಿಲ್ದಾರ್--ಸಹಿಸಲಾರೆನು, ಈ ಅತ್ಯಾಚಾರವನ್ನು ಸಹಿಸಲಾರೆನು, ಯುವರಾಜ. ಅದರಿಂದಿದು ದೇವರ ಇಚ್ಛೆ ನಮಗೇನು ತಿಳಿಯದು. ಆದರೂ ನಿಶ್ಚಯವಾಗಿ ಇದಕ್ಕೇನೋ ಒಂದು ಮಹದುದ್ದೇಶವಿರಬೇಕು; ಒಂದು ಮಹತ್ಪರಿಣಾಮವಿರಬೇಕು. ಅಲ್ಲದೆಹೋದರೆ ಇಷ್ಟೊಂದು ನಿರ್ಮಮತೆಯು ಇಷ್ಟೊಂದು ಪಾಪವು ನಿರರ್ಥಕವಾಗುವುದೆ? ತಿಳಿ, ಯುವರಾಜ; ನಿನ್ನಂತವನ ಬಲಿಯಿಂದಾಗಬೇಕಾದ ಯಾವದೋ ಒಂದು ಮಹತ್ಕಾರ್ಯವು ನಿಶ್ಚಯವಾಗಿಯೂ ಇರುವುದು. ಅದೇನೆಂಬುದು ನಮ್ಮ ಅಲ್ಪಬುದ್ಧಿಗೆ ಗೋಚರವಾಗಿಲ್ಲ. ಅಷ್ಟೆ, ಯುವರಾಜ; ಸಂತೋಷಚಿತ್ತನಾಗಿ ಪ್ರಾಣಬಲಿಯನ್ನು ಕೊಡು.

ದಾರಾ-ಅದು ನಿಶ್ಚಯ; ದುಃಖವೇಕೆ? ಎಂದಾದರೊಂದು ದಿನ ಸಾಯಲೇಬೇಕು; ಎರಡು ದಿನ ಹಿಂದು ಅಥವಾ ಎರಡು ದಿನ ಮುಂದು ! ನಾನು ಸಿದ್ಧನಾಗಿರುವೆನು. ಸ್ನೇಹಿತನೇ, ನನಗೆ ಅಪ್ಪಣೆಯನ್ನು ಕೊಡು. ಇಂದು ಕೊನೆಗಾಲದಲ್ಲಿ ನಿನ್ನನ್ನು ಒಂದು ಕ್ಷಣಮಾತ್ರ ನೋಡಿದೆನು; ನೀನಾರೆಂಬುದು ನನಗೆ ತಿಳಿಯದು; ಆದರೂ ನೀನೆನ್ನ ಬಹುದಿನಗಳ ಹಳೆಯ ಸ್ನೇಹಿತನೆಂದು ಬೋಧೆಯಾಗುವುದು.

ದಿಲ್ದಾರ್--ನಾನು ಹೋಗುವೆನು ಯುವರಾಜ; ಇದೇ ನಮ್ಮ ಕೊನೆಯ ಸಂದರ್ಶನ.

[ಹೋಗುವನು]

ದಾರಾ--ಇನ್ನು ನಿನ್ನ ಕೆಲಸವನ್ನು ಮಾಡು ಜಿರ್ಹಆಲಿ.

ಜಿರ್ಹಖಾ-ನಾಜೀರ್ !

[ಇಬ್ಬರು ಕಟುಕರು ಬರುವರು]

ಜಿಹನ್ ಖಾನನು ಸನ್ನೆಮಾಡುವನು.

ದಾರಾ–ಸ್ವಲ್ಪ ತಡೆ; ಒಂದು ಬಾರಿ ..ಸಿಪಾರ್! ಸಿಪಾರ್! ಬೇಡ. ಅಯ್ಯೋ, ಏಕೆ ಕೂಗಿದೆ?

ಸಿಪಾರ್—[ಎದ್ದು] ಅಪ್ಪ, ಇದೇನು! ಇವರಾರಪ್ಪ! ನನಗೆ ಭಯವಾಗುವುದು.

ದಾರಾ—ಇವರೆನ್ನನ್ನು ವಧೆಮಾಡಲು ಬಂದಿರುವರು. ಕೊನೆಯಬಾರಿ ನಿನ್ನ ಅನುಜ್ಞೆಯನ್ನು ತೆಗೆದುಕೊಳ್ಳಲು ಎಚ್ಚರಿಸಿದೆನು. ಹೀಗೆ ಬಾ ವತ್ಸ, [ಆಲಿಂಗಿಸುವನು] ಇನ್ನು ಹೋಗುವೆನು ಜಿಹನ್‌ಖಾ್ನ, ಈ ಮಗುವಿನ ಸಮ್ಮುಖದಲ್ಲಿ ನನ್ನನ್ನು ವಧೆಮಾಡುವಂತ ಪಿಶಾಚನಾಗಿರಲಾರೆ ನೀನು! ಇವನನ್ನು ಬೇರೊಂದು ಕೊಠಡಿಗೆ ಕರೆದುಕೊಂಡು ಹೋಗು.

ಜಿಹನ್‌ಖಾ್ನ-[ಒಬ್ಬ ಕಟುಕನೊಡನೆ] ಈ ಹುಡುಗನನ್ನು ಬೇರೊಂದು ಕಡೆ ಕರೆದುಕೊಂಡು ಹೋಗು.

[ಕಟುಕನು ಸಿಪಾರನನ್ನು ಹಿಡಿದುಕೊಳ್ಳುವನು]

ಸಿಪಾರ-ಇಲ್ಲ; ನಾನು ಹೋಗುವುದಿಲ್ಲ. ನಮ್ಮ ತಂದೆಯನ್ನು ಕೊಲ್ಲುವಿರಾ! ಏಕೆ ಕೊಲ್ಲುವಿರಿ? [ಅವನ ಕೈಯಿಂದ ಬಿಡಿಸಿಕೊಂಡು ಬಂದು] ಅಪ್ಪ, ನಾನು ನಿನ್ನನ್ನು ಬಿಟ್ಟುಹೋಗುವುದಿಲ್ಲ. [ಗಟ್ಟಿಯಾಗಿ ತಂದೆಯ ಕಾಲನ್ನು ಹಿಡಿದುಕೊಳ್ಳುವನು]

ದಾರಾ--ನನ್ನನ್ನು ಹಿಡಿದುಕೊಳ್ಳುವುದರಿಂದಾಗುವುದೇನು ಮಗನೆ? ಈ ಘಾತುಕರಿಂದ ನನ್ನನ್ನು ಕಾಪಾಡಬಲ್ಲೆಯ? ಹೋಗು ವತ್ಸ, ಇವರೆನ್ನನ್ನು'ವಧೆಮಾಡುವರು; ನೀನಾ ನೋಟವನ್ನು ನೋಡಲಾರೆ

[ಕಟುಕರು ಮುಖ ಮುಚ್ಚಿಕೊಳ್ಳುವರು]

ಜಿಹನ್‌ಖಾ್ನ--ಕರೆದುಕೊಂಡು ಹೋಗು.

[ಕಟುಕನು ಮತ್ತೊಮ್ಮೆ ಸಿಪಾರನನ್ನು ಹಿಡಿದುಕೊಳ್ಳುವನು]

ಸಿಪಾರ--[ಚೀತ್ಕಾರಮಾಡುತ್ತಾ] ಇಲ್ಲ. ನಾನು ಹೋಗುವುದಿಲ್ಲ; ಹೋಗುವುದಿಲ್ಲ. [ಎಂದು ಬಿಡಿಸಿಕೊಳ್ಳಲು ಪ್ರಯತ್ನಮಾಡುವನು]

ದಾರಾ--ನಿಲ್ಲಿ; ನಾನವನಿಗೆ ತಿಳಿಯಹೇಳುವೆನು. ಆಮೇಲೆ ರಗಳೆಮಾಡುವುದಿಲ್ಲ; ಈಗ ಬಿಡಿ. [ಕಟಕನು ಸಿಪಾರನನ್ನು ಬಿಡುವನು]

ದಾರಾ--[ಪುತ್ರನ ಕೈ ಹಿಡಿದು] ಸಿಪಾರ್;

ಸಿಪಾರ--ಅಪ್ಪಾ !

ದಾರಾ—ಸಿಪಾರ, ನನ್ನ ಪ್ರಿಯತಮ ಕುಮಾರ, ನನಗೆ ಅಪ್ಪಣೆಯನ್ನು ಕೊಡು; ಇಷ್ಟುದಿನಗಳು ಈ ದುಃಖದಲ್ಲೂ ನೀನು ನನ್ನನ್ನು ತ್ಯಜಿಸಲಿಲ್ಲ. ಮಳೆ ಬಿಸಿಲೆನ್ನದೆ, ಚಳಿಗಾಳಿಯೆನ್ನದೆ, ರಾತ್ರಿ ಹಗಲು ಅನ್ನವಿಲ್ಲದೆ, ನೀರಿಲ್ಲದೆ ನನ್ನೊಡನೆ ಕಾಡು ಕಾಡು ಸುತ್ತಿದರೂ ನನ್ನನ್ನು ತ್ಯಜಿಸಲಿಲ್ಲ. ದುಃಖದ ಆವೇಗವನ್ನು ತಡೆಯಲಾರದೆ ನಾನು ಅಂಧನಾಗಿ ನಿನ್ನನ್ನು ಕೊಲ್ಲಲು ಕತ್ತಿಯೆತ್ತಿದೆನು; ಆಗಲೂ ನನ್ನನ್ನು ತ್ಯಜಿಸಲಿಲ್ಲ. ನನ್ನ ಪ್ರವಾಸದಲ್ಲಿ, ಯುದ್ಧದಲ್ಲಿ, ಕಾರಾಗಾರದಲ್ಲಿ ಪ್ರಾಣದಂತೆ ನನ್ನೊಡನಿದ್ದು ಎಲ್ಲ ಯಾತನೆಗಳನ್ನೂ ಅನುಭವಿಸಿದೆ; ಆದರೂ ನನ್ನನ್ನು ತ್ಯಜಿಸಲಿಲ್ಲ. ಇಂದು ನಿನ್ನ ನಿಷ್ಠುರನಾದ ತಂದೆಯು- (ಹೇಳುತ್ತಾ ದಾರನ ಕಂಠವು ಗದ್ಗದಿತವಾಯಿತು. ಅದನ್ನು ಕಷ್ಟದಿಂದ ಸವರಿಸಿಕೊಂಡು ಹೇಳುವನು) ನಿನ್ನ ನಿಷ್ಠುರನಾದ ತಂದೆಯು ಇಂದು ನಿನ್ನನ್ನು ಬಿಟ್ಟು ಹೋಗುವನು.

ಸಿಪಾರ--ಅಪ್ಪ, ಅಮ್ಮನು ಹೋದಳು; ನೀನೂ--

ದಾರಾ--ಏನು ಮಾಡುವುದು? ಉಪಾಯವಿಲ್ಲ ಪುತ್ರ. ನಾನಿಂದು ಸಾಯಲೇಬೇಕು. ಆದರೆ ಕುಮಾರ, ಇಂದು ನಿನ್ನನ್ನು ಬಿಟ್ಟು ಹೋಗುವುದರಿಂದೆನಗಾಗುವಷ್ಟು ದುಃಖವು ನನ್ನ ದೇಹವನ್ನು ಬಿಟ್ಟು ಹೋಗುವುದಕ್ಕೂ ಆಗುತ್ತಿಲ್ಲ. [ಕಣ್ಣುಗಳನ್ನು ಮುಚ್ಚಿಕೊಂಡು] ಹೋಗು ಕುಮಾರ, ಇವರೆನ್ನನ್ನು ವಧೆಮಾಡುವರು. ಅದು ಬಹು ಭಯಂಕರವಾದ ನೋಟ, ಅದನ್ನು ನೀನು ನೋಡಲಾರೆ.

ಸಿಪಾರ—ಅಪ್ಪ, ನಾನು ನಿನ್ನನ್ನು ಬಿಟ್ಟುಹೋಗುವುದೇ? ಎಂದಿಗೂ ಇಲ್ಲ.

ದಾರಾ--ಸಿಪಾರ್, ನೀನಾವಾಗಲೂ ನನ್ನ ಮಾತುಗಳನ್ನು ಧಿಕ್ಕಾರಮಾಡಿಲ್ಲ. ಯಾವಾಗಲೂ ಇಲ್ಲ. ಹೋಗು ಮಗನೆ. ಇದು ನನ್ನ ಕಡೆಯ ಆಜ್ಞೆ. ನನ್ನೀ ಕೊನೆಯ ಆಜ್ಞೆಯನ್ನು ನಡೆಸಿಕೊಡು ಹೋಗು. ನನ್ನ ಮಾತನ್ನು ಕೇಳುವುದಿಲ್ಲವೆ ಸಿಪಾರ್, ಹೋಗು.

[ಸಿಪಾರ್ ತಲೆತಗ್ಗಿಸಿಕೊಂಡು ಹೋಗಲುದ್ಯುಕ್ತನಾಗುವನು ಆಗ ದಾರನು ಮತ್ತೆ ಸಿಪಾರ್ ಎಂದು ಕೂಗುವನು, ಸಿಪಾರನು ನಿಲ್ಲುವನು]

ದಾರಾ-ಒಂದು ಸಾರಿ, ಕೊನೆಯ ಸಾರಿ ನಿನ್ನನ್ನಾಲಿಂಗಿಸುವೆನು [ಆಲಿಂಗಿಸಿ] ಈಗ ಹೋಗು ವತ್ಸ.

(ಸಿಪಾರನು ಮಂತ್ರಮುಗ್ಧನಂತೆ ಒಬ್ಬ ಕಟುಕನೊಡನೆ ಹೋಗುವನು)

ದಾರಾ-(ಆಕಾಶವನ್ನು ನೋಡುತ್ತಾ ಕೈ ಚಾಚಿಕೊಂಡು) ಈಶ್ವರನೇ, ಪೂರ್ವಜನ್ಮದಲ್ಲಿ ಯಾವ ಮಹತ್ಪಾಪವನ್ನು ಮಾಡಿದ್ದೆ? ಓ! ಹೋಗಲಿ, ಆಗಿಹೋಯಿತು. ಘಾತುಕರೇ, ನಿಮ್ಮ ಕೆಲಸವನ್ನು ಮಾಡಿ.

ಜಿರ್ಹ-ಬೇರೊಂದು ಕೊಠಡಿಗೆ ಕರೆದುಕೊಂಡು ಹೋಗಿ ನಿಮ್ಮ ಕೆಲಸವನ್ನು ಮುಗಿಸಿ. ಇಲ್ಲಿ ಬೇಡ.

(ಘಾತಕರೊಡನೆ ದಾರನು ಹೋಗುವನು)

ಜಿಹನ್--ನನ್ನ ಪ್ರಾಣದಾತನ ವಧೆಯನ್ನು ಎದುರಿಗೆ ನಿಂತು ನೋಡುವುದೆ! ಇದೋ ಕೊಡಲಿಯ ಧ್ವನಿ! ಮೃತ್ಯುವಿನ ಆರ್ತಸ್ವರ!

(ನೇಪಥ್ಯದಲ್ಲಿ ಹಾಹಾಕಾರ)

ಜಿಹನ್-ಮುಗಿಯಿತು.

[ನೇಪಥ್ಯದಲ್ಲಿ ಸಿಪಾರನು ಅಪ್ಪ, ಅಪ್ಪ ಎಂದು ಕೂಗುತ್ತಾ ಬಾಗಿಲನ್ನು ಒಡೆಯ ಹತ್ತುವನು. ಕಟುಕರು ದಾರನ ಛಿನ್ನರುಂಡವನ್ನು ತೆಗೆದುಕೊಂಡು ಬರುವರು]

ಜಿಹನ್ ಖಾನ್--ಎಲ್ಲಿ? ರುಂಡವನ್ನೆನಗೆ ಕೊಡು. ಸಮ್ರಾಟನ ಬಳಿ ತೆಗೆದುಕೊಂಡು ಹೋಗುವೆನು.

(ಈ ಸಮಯಕ್ಕೆ ಸರಿಯಾಗಿ ಸಿಪಾರನು ಬಾಗಿಲನ್ನು ಮುರಿದುಕೊಂಡು-ಅಪ್ಪಾ, ಅಪ್ಪಾ ಎಂದು ಕೂಗುತ್ತಾ ಪ್ರವೇಶಿಸಿ, ತಂದೆಯ ಛಿನ್ನರುಂಡವನ್ನು ನೋಡಿ ಮೂರ್ಛಿತನಾಗಿ ಬೀಳುವನು.)

——— : o : ———

# ಐ ದ ನೆ ಯ ಅ ೦ ಕ .

## ನೋಟ ೧

ಸ್ಥಾನ—ದಿಲ್ಲಿಯಲ್ಲಿ ದರ್ಬಾರ್‌ಗೃಹ. ಪ್ರಾತಃಕಾಲ.

ಮಯೂರ ಸಿಂಹಾಸನದಲ್ಲಿ ಔರಂಗಜೇಬನು ಕುಳಿತಿರುವನು. ಎದುರಿನಲ್ಲಿ ಮೀರಜುಮ್ಲಾ, ಷಯಸ್ತಾಖಾ, ಯಶೋವಂತಸಿಂಹ, ಜಯಸಿಂಹ ಮುಂತಾದವರು

ಔರಂಗಜೇಬ--ನಾನು ಪ್ರತಿಜ್ಞೆಯಂತೆ ಮಹಾರಾಜರಿಗೆ ಗುರ್ಜರಪ್ರದೇಶವನ್ನು ಕೊಟ್ಟಿರುವೆನು.

ಯಶೋವಂತ--ಅದರ ಪ್ರತಿಯಾಗಿ ಜಹಪನಾಯವರಿಗೆ ಸೈನ್ಯಸಹಾಯಮಾಡಲು ನಾನು ಬಂದಿರುವೆನು.

ಔರಂಗಜೇಬ-ಮಹಾರಾಜ ಯಶೋವಂತಸಿಂಹರೇ, ಔರಂಗಜೇಬನಾವಾಗಲೂ ಯಾರನ್ನೂ ಎರಡಾವರ್ತಿ ನಂಬುವುದಿಲ್ಲ. ಆದರೂ ನಾವು ಮಹಾರಾಜ ಜಯಸಿಂಹನ ಮಾತಿನಮೇಲೆ ಮಾರವಾಡೇಶ್ವರನಿಗೆ ರಾಜಭಕ್ತ ಪ್ರಜನಾಗುವ ಸುಯೋಗವನ್ನು ಮತ್ತೊಮ್ಮೆ ಕೊಟ್ಟಿರುವೆವು.

ಜಯಸಿಂಹ-ಜಹಾಪನಾಯವರ ಅನುಗ್ರಹ.

ಯಶೋವಂತ--ಜಹಾಪನಾ, ಮೋಸದಿಂದಲೋ, ಶಕ್ತಿಬಲದಿಂದಲೋ ಈಗ ನೀವು ಸಿಂಹಾಸನವನ್ನಾಕ್ರಮಿಸಿ, ದೇಶದಲ್ಲೊಂದು ವಿಧವಾದ ಶಾಂತಿಯನ್ನು ಸ್ಥಾಪಿಸಿರುವಿರಿ. ಆ ಶಾಂತಿಯನ್ನು ಭಂಗಪಡಿಸುವುದು ಪಾಪವೆಂದು ನಾನು ತಿಳಿದಿರುವೆನು.

ಔರಂಗಜೇಬ-ಮಹಾರಾಜರ ಮುಖದಿಂದೀ ಮಾತನ್ನು ಕೇಳಿ ನಾವು ತೃಪ್ತರಾದೆವು. ಇನ್ನುಮೇಲೆ ಮಹಾರಾಜರನ್ನು ನಮ್ಮ ಬಂಧುವರ್ಗದಲ್ಲಿ ಗಣನೆಮಾಡುವೆವು.

ಯಶೋವಂತ--ಸರಿ.

ಔರಂಗಜೇಬ-ಒಳ್ಳೇದು ಮಹಾರಾಜ. ವಜೀರ್‌ಸಾಹೇಬ, ಸುಲ್ತಾನ್ ಷೂಜನು ಈಗ ಆರಖಾನದ ರಾಜಾಶ್ರಯದಲ್ಲಿರುವನಲ್ಲವೆ?

ಮೀರಜುಮ್ಲಾ--ಗುಲಾಮನವನನ್ನು ಅರಖಾನದ ಎಲ್ಲೆಯವರೆಗೂ ಅಟ್ಟಿಕೊಂಡು ಹೋಗಿದ್ದನು.

ಔರಂಗಜೀಬ--ವಜೀರಸಾಹೇಬಾ, ನಾವು ನಿನ್ನ ಬಾಹುಬಲವನ್ನು ಪ್ರಶಂಸೆಮಾಡದಿರಲಾರೆವು. ಸೇನಾಪತೀ, ಕುಮಾರ ಮಹಮುದನನ್ನು ಗ್ವಾಲಿಯರ್ ದುರ್ಗದಲ್ಲಿ ಸೆರೆಹಾಕಿ ಬಂದೆಯಾ?

ಷಯಸ್ತಾಖಾನ್-ಹೌದು, ಜಹಪನಾ.

ಔರಂಗಜೀಬ-ನನ್ನ ನತದ್ರಷ್ಟ ಮಗನೇ, ಜಗತ್ತು ಮಾರಿಹೋದರೂ ನಾನು ನೀತಿಯನ್ನು ತಪ್ಪಿ ನಡೆಯುವವನಲ್ಲ. ಪುತ್ರನಾಗಲೀ, ಮಿತ್ರನಾಗಲೀ ನನಗೆಲ್ಲರೂ ಒಂದೇ.

ಜಯಸಿಂಹ-ಸರಿಯಾಗಿ ಹೇಳಿದಿರಿ, ಜಹಪನಾ.

ಔರಂಗಜೀಬ--ಹತಭಾಗ್ಯ ದಾರನ ಮರಣದಿಂದ ನನ್ನ ಸಮಸ್ತ ಜಯವೂ ಮ್ಲಾನವಾಗಿಹೋಗಿದೆ! ಆದರೆ ಸೋದರರು, ಪುತ್ರರು, ಕೊನೆಗೆ ಸರ್ವಸ್ವವೂ ಹೋದರೂ ಧರ್ಮವು ಮಾತ್ರ ಪ್ರಬಲವಾಗಿರಲಿ. ಸೇನಾಪತಿ, ಗ್ವಾಲಿಯರ್ ದುರ್ಗದಲ್ಲಿ ಮುರಾದನು ಸೌಖ್ಯವಾಗಿರುವನೆ?

ಷಯಸ್ತಾಖಾ್ನ್—ಅಲ್ಲಾವಿನ ದಯ

ಔರಂಗಜೀಬ--ಹುಚ್ಚ ಸಹೋದರ, ಒಂದು ದೋಷದಿಂದ ನೀನು ಸಾಮ್ರಾಜ್ಯವನ್ನು ಕಳೆದುಕೊಂಡೆ; ಮತ್ತು ನಾನು ಮಕ್ಕಾಯಾತ್ರೆಯ ಮಹಾಸುಖದಿಂದ ವಂಚಿತನಾದೆನು; ಅಲ್ಲಾವಿನ ಇಚ್ಛೆ. ದಿಲೀರಖಾನ, ನೀನು ಕುಮಾರ ಸುಲೇಮಾನನನ್ನು ಹೇಗೆ ಬಂದಿಯನ್ನಾಗಿ ಮಾಡಿದೆ?

ದಿಲೀರಖಾನ್-ಜಹಾಪನಾ, ಶ್ರೀನಗರದ ರಾಜಾ ಪೃಥ್ವಿಸಿಂಹನು ಸೈನ್ಯ ಸಹಿತವಾಗಿ ಕುಮಾರನಿಗೆ ಆಶ್ರಯಕೊಡಲು ಸಮ್ಮತಿಸಲಿಲ್ಲ. ಆದ್ದರಿಂದ ಕುಮಾರನು ನಮ್ಮನ್ನು ಬಿಡಬೇಕಾಗಿ ಬಂತು! ಆಮೇಲೆ ನನಗೆ ಜಹಾಪನಾಯವರ ಪತ್ರವು ದೊರೆತು ರಾಜನನ್ನು ನೋಡಿ ತಮ್ಮ ಆಜ್ಞೆಯಂತೆ ಹೇಳಿದೆನು. ಕುಮಾರನು ಸಮ್ರಾಟರ ಭ್ರಾತೃಪುತ್ರನು. ಸಮ್ರಾಟರವನನ್ನು ಪುತ್ರನಂತೆ ಪ್ರೀತಿಸುವರು. ಆದ್ದರಿಂದ ಕುಮಾರನನ್ನು ಸಮ್ರಾಟರಿಗೊಪ್ಪಿಸುವುದು ಕ್ಷಾತ್ರಧರ್ಮದ ವಿರುದ್ಧವಲ್ಲ ಎಂದು ಮೊದಲು ಕುಮಾರನನ್ನು ನನ್ನ ಕೈಗೊಪ್ಪಿಸಲು ಪೃಥ್ವಿಸಿಂಹನು ಸಮ್ಮತಿಸಲಿಲ್ಲ. ಆದರೆ ಮಾರನೇ ದಿನವೇ ಕುಮಾರನನ್ನು ತನ್ನ ರಾಜ್ಯದಿಂದ ಹೊರಡಿಸಿಬಿಟ್ಟನು. ಕಾರಣವು ತಿಳಿಯದು.

ಔರಂಗಜೀಬ–ಅಭಾಗ್ಯ ಸುಲೇಮಾನ್! ಆಮೇಲೆ ?

ದಿಲೀರಖಾನ್–ಕುಮಾರನು ಟಿಬೆಟ್ಟಿಗೆಹೋಗುವ ಉದ್ದೇಶದಿಂದ ಹೊರಟನು; ಆದರೆ ದಾರಿ ತಿಳಿಯದೆ ರಾತ್ರಿಯೆಲ್ಲವು ಸುತ್ತಿಸುತ್ತಿ ಪ್ರಾತಃಕಾಲಕ್ಕೆ ಪುನಃ ಶ್ರೀನಗರದ ಪ್ರಾಂತವನ್ನೇ ಬಂದು ಸೇರಿದನು. ಆಗ ನಾನು ಸಸೈನ್ಯನಾಗಿ ಹೋಗಿ ಕುಮಾರನನ್ನು ಸೆರೆಹಿಡಿದೆನು. ಇದರಲ್ಲಿ ನನ್ನ ಅಪರಾಧವೇನಾದರೂ ಇದ್ದರೆ ದೇವರು ನನ್ನನ್ನು ಶಿಕ್ಷಿಸಲಿ; ನಾನು ಯಾವನೊಬ್ಬ ಸಾಮಾನ್ಯ ಮನುಷ್ಯನ ಭೃತ್ಯನಲ್ಲ. ಸಮ್ರಾಟರ ಸೇನಾಧ್ಯಕ್ಷನು; ಸಮ್ರಾಟರ ಆಜ್ಞೆಯನ್ನು ಪಾಲಿಸಲುಳ್ಳವನು.

ಔರಂಗಜೀಬ--ಕುಮಾರನನ್ನಿಲ್ಲಿ ಕರೆದುಕೊಂಡು ಬಾ, ಖಾನ್‌ಸಾಹೇಬ.

ದಿಲೀರಖಾನ್--ಆಜ್ಞೆ. (ಹೋಗುವನು)

ಔರಂಗಜೀಬ--ಮಹಾರಾಜ, ಜಿಹನ ಆಲಿಖಾನನನ್ನು ನಾಗರಿಕರು ವಧೆಮಾಡಿದರು.

ಜಯಸಿಂಹ–ಹೌದು; ಜಹಾಪನಾ, ಪ್ರಜೆಗಳು ಕೃದ್ಧರಾಗಿ ಅವನನ್ನು ಕಲ್ಲುಗಳಿಂದ ಹೊಡೆದು ಕೊಂದರಂತೆ.

ಔರಂಗಜೀಬ–ಪಾಪಾತ್ಮನಿಗೆ ಸಮುಚಿತವಾದ ಶಿಕ್ಷೆಯನ್ನು ದೇವರು ವಿಧಿಸಿದನು. ಬಾ, ಕುಮಾರ.

(ಸುಲೇಮಾನನೊಡನೆ ದಿಲೀರಖಾನನು ಪ್ರವೇಶಿಸುವನು)

ಔರಂಗಜೀಬ–ಬಾ, ಕುಮಾರ, ಸುಲೇಮಾನ್, ಇದೇಕೆ? ತಲೆಯನ್ನು ತಗ್ಗಿಸಿಕೊಂಡಿರುವೆ, ವತ್ಸ?

ಸುಲೇಮಾನ್–ಸಮ್ರಾಟ, (ಹೇಳುತ್ತಾ ಹೇಳುತ್ತಾ ಗಂಟಲುಕಟ್ಟಿ ಸುಮ್ಮನಾಗುವನು)

ಔರಂಗಜೀಬ--ಹೇಳು, ಏನು ಹೇಳುವಿಯೋ ಹೇಳು ವತ್ಸ! ನಿನಗೇನು ಭಯವಿಲ್ಲ. ನಿಮ್ಮ ತಂದೆಯ ಮರಣವು ಅವಶ್ಯಕವಾಗಿ ಆಗಬೇಕಾದ್ದಿತ್ತು; ಇಲ್ಲವೆ?

ಸುಲೇಮಾನ್–ಜಹಪನಾ, ನಾನು ನಿಮ್ಮ ಕೃಪೆಯತ್ತನ್ನು ಅಪೇಕ್ಷಿಸಲಿಲ್ಲ; ಅಥವ ದಿಗ್ವಿಜಯಿಯಾ ಔರಂಗಜೀಬನು ಇಂದಾರ ಸಮ್ಮುಖದಲ್ಲೂ ಕೃಪೆಯತ್ತನ್ನು ಕೊಡುವ ಅವಶ್ಯಕವೂ ಇಲ್ಲ. ಅದನ್ನು ವಿಚಾರಮಾಡುವರಾದರೂ ಯಾರು? ಜಹಪನಾ, ನನ್ನನ್ನು ವಧೆಮಾಡಿರಿ. ತಮ್ಮ ಕತ್ತಿಯ ಧಾರೆಯು ಬೇಕಾದಷ್ಟಿರುವುದು. ಅದನ್ನುಳಿದು ವಿಷಪ್ರಯೋಗದ ಅವಶ್ಯಕತೆಯೇಕೆ?

ಔರಂಗಜೀಬ-ಸುಲೇಮಾನ್, ನಾನು ನಿನ್ನನ್ನು ವಧೆಮಾಡುವುದಿಲ್ಲ. ಆದರೆ-

ಸುಲೇಮಾನ್-ಆ 'ಆದರೆ' ಎಂಬುದರ ಅರ್ಥವನ್ನು ಬಲ್ಲೆನು, ಸಮ್ರಾಟ. ಮರಣಕ್ಕಿಂತ ಭಯಂಕರವಾದ ಏನನ್ನೋ ಮಾಡಲಿರುವಿರಲ್ಲವೆ? ಸಮ್ರಾಟರ ಮನಸ್ಸಿನಲ್ಲಿ ಒಂದು ನಿಷ್ಠುರಕಾರ್ಯವನ್ನು ಮಾಡಬೇಕೆಂಬ ದುಷ್ಪ್ರವೃತ್ತಿಯು ಜಾಗರಿತವಾಯಿತೆಂದರೆ ಶತ್ರುವಿಗೆ ಅದಕ್ಕಿಂತ ಭಯಕಾರಿಯಾದುದು ಮತ್ತಾವುದೂ ಇಲ್ಲ; ಏಕೆಂದರೆ ಅವರ ಪ್ರತಿಹಿಂಸೆಗಿಂತ ಅವರ ಕರುಣೆಯು ಭಯಾನಕ ವಸ್ತು! ಹೇಳುವರಾಗಿ ಜಹಪನಾ, 'ಆದರೆ' ಏನು?

ಔರಂಗಜೀಬ-ಕ್ಷುಬ್ಧನಾಗಬೇಡ, ಕುಮಾರ.

ಸುಲೇಮಾನ್-ಇಲ್ಲ; ಅದರಿಂದೀಗಾಗುವುದೇನು? ಓ! ಮನುಷ್ಯನು ಇಷ್ಟೊಂದು ಮೃದುವಾಗಿ ಮಾತಾಡುವುದು ಮತ್ತು ಅಂತ ದುರಾತ್ಮನಾಗುವುದು ಶಕ್ಯವೆ?

ಔರಂಗಜೀಬ-ಸುಲೇಮಾನ್, ನಿನ್ನನ್ನು ಪೀಡೆಮಾಡುವುದೆನ್ನ ಅಭಿಮತವಲ್ಲ. ನಿನ್ನ ಇಚ್ಛೆಯೇನೆಂಬುದನ್ನು ತಿಳಿಸು. ಅನುಗ್ರಹಮಾಡುವೆನು.

ಸುಲೇಮಾನ್-ನನ್ನ ಇಚ್ಛೆಯು ಜಹಪನಾಯುವರು ನನ್ನನ್ನು ಸಾಧ್ಯವಾದಷ್ಟು ಪೀಡೆಮಾಡಬೇಕೆಂಬುದೇ; ನನ್ನ ತಂದೆಯನ್ನು ಕೊಂದ ಕೊಲೆಗಡಕನ ಕೈಯಿಂದ ಕರುಣೆಯ ಒಂದಲ್ಪಕಣವನ್ನೂ ನಾನಪೇಕ್ಷಿಸುವುದಿಲ್ಲ. ಸಮ್ರಾಟ್, ಏನು ಮಾಡುತ್ತಿರುವಿರೆಂಬುದನ್ನು ಒಮ್ಮೆ ಚಿಂತಿಸಿರಿ. ಸ್ವಂತ ಸಹೋದರನನ್ನು-ಒಬ್ಬ ತಾಯಿಯ ಹೊಟ್ಟೆಯಲ್ಲಿ ಹುಟ್ಟಿದವರು, ಒಬ್ಬ ತಂದೆಯ ಸ್ನೇಹಸಿಕ್ತ ದೃಷ್ಟಿಯ ತಲದಲ್ಲಿ ಪಾಲಿತರಾದವರು! ನರಗಳಲ್ಲಿ ಒಂದೇ ರಕ್ತ! ಅಂತ ನಿನ್ನ ಸಹೋದರನನ್ನು ಕೊಂದೆಯಲ್ಲ! ಯಾವನು ಚಿಕ್ಕಂದಿನ ಆಟಗಳ ಗೆಳೆಯನೋ, ಯಾವನು ಯೌವ್ವನದಲ್ಲಿ ಸ್ನೇಹಮಯ ಸಹಪಾಟಿಯೋ, ಯಾವನ ಮೇಲೆ ರೋಷ ಕಟಾಕ್ಷವನ್ನು ಬೀರಿದರೆ ಆ ಕಟಾಕ್ಷವು ನಿನ್ನ ಹೃದಯದಲ್ಲಿ ವಜ್ರಘಾತವಾದಂತೆ ತೋರುವುದು ಸಮಂಜಸವೋ, ಯಾವನನ್ನು ಆಘಾತದಿಂದ ತಪ್ಪಿಸುವ ಸಲುವಾಗಿ ನಿನ್ನ ದೇಹವನ್ನು ಅಡ್ಡಗಿಸುವುದುಚಿತವೋ, ಅಂತ ನಿನ್ನ ಅಣ್ಣನನ್ನು ಕೊಂದಿರುವೆ. ಅಣ್ಣನು--ಎಂತಹ ಅಣ್ಣನು! ನೀನು ಅಪೇಕ್ಷಿಸಿದ್ದರೆ ನಿನ್ನ ಸಲವಾಗೀ ಸಾಮ್ರಾಜ್ಯವನ್ನು ಮಣ್ಣಿನಮಾಟೆಯಂತೆ ತುಚ್ಛವಾಗಿ ಭಾವಿಸಿ ತ್ಯಜಿಸಬಲ್ಲವನು. ಅವನಿಂದ ನಿನಗಾವ ಅನಿಷ್ಟವಾಗಿರುವುದು? ಅವನ ಏಕಮಾತ್ರ ಅಪರಾಧವೆಂದರೆ ಸರ್ವಜನಪ್ರಿಯನಾಗಿದ್ದುದೇ.

ಅಂತಹ ಅಣ್ಣನನ್ನು ಕೊಂದೆ! ಪರಲೋಕದಲ್ಲಿ ಅವನಿಗೆ ಮುಖದೋರ ಬೇಕಾದಾಗ ಅವನಕಡೆ ನೋಡಲು ಹೇಗೆ ಶಕ್ತನಾಗುವೆ? ಹಿಂಸ್ರ, ಪಿಶಾಚ, ಸೈತಾನ, ನಿನ್ನ ಅನುಗ್ರಹವೆ? ನಿನ್ನ ಅನುಗ್ರಹವನ್ನು ನಾನು ಹೀಗೆ ಕಾಲಿಂದ ಒದೆಯುವೆನು

ಔರಂಗಜೀಬ-ಆಗಬೇಕಾದ್ದು ಆಗಿ ಹೋಗಲಿ. ನಾನು ನಿನಗೆ ಪ್ರಾಣದಂಡನೆಯನ್ನು ವಿಧಿಸುವೆನು. ತೆಗೆದುಕೊಂಡು ಹೋಗಿ (ಸಿಂಹಾಸನದಿಂದಿಳಿದು) .ಅಲ್ಲಾವಿನ ಹೆಸರನ್ನು ಸ್ಮರಿಸು, ಸುಲೇಮಾನ್.

(ಬಾಲಕನ ವೇಷವನ್ನು ಧರಿಸಿದ ಜಹರತ್ತುನ್ನೀಸಳ ಪ್ರವೇಶ)

ಜಹರತ್ —ಅಲ್ಲಾವಿನ ಹೆಸರನ್ನು ಸ್ಮರಿಸು, ಔರಂಗಜೀಬ. (ಕಠಾರಿಯಿಂದಿರಿಯ ಹೋಗುವಳು)

ಸುಲೇಮಾನ್--ಇದೇನು, ಜಹರತ್ ಉನ್ನೀಸಾ? (ಅವಳ ಕೈಯನ್ನು ಹಿಡಿದು ತಡೆಯುವನು)

ಜಹರತ್--ಬಿಡು; ಬಿಟ್ಟುಬಿಡು. ನೀನು ಯಾರು? ಪಾಪಾತ್ಮನನ್ನು ನಾನು ವಧೆ ಮಾಡುವೆನು. ಮಧ್ಯೆ ಬರಲು ನೀನಾರು? ಬಿಡು, ಬಿಡು.

ಸುಲೇಮಾನ್--ಇದೇನು ಜಹರತ್? ಶಾಂತಳಾಗು. ಹತ್ಯೆಯು ಪ್ರತಿಶೋಧವು ಹತ್ಯೆಯಲ್ಲ ಪಾಪದಿಂದ ಪುಣ್ಯದ ಪ್ರತಿಷ್ಠೆಯಾಗುವದಿಲ್ಲ. ನನಗೆ ಶಕ್ಯವಿದ್ದರೆ ಸಮ್ಮುಖ ಯುದ್ಧದಲ್ಲಿವನನ್ನು ಕೊಲ್ಲುತ್ತಿದ್ದೆನು. ಆದರೆ ಹತ್ಯೆ, ಮಹಾ ಪಾಪ!

ಜಹರತ್-ಹೇಡಿಗಳು; ನನ್ನ ತಂದೆಯ ಕುಲಾಂಗಾರ ಪುತ್ರರು ನೀವು, ಹೊರಟು ಹೋಗಿ. ನಾನು ನಮ್ಮ ತಂದೆಯನ್ನು ಕೊಂದುದರ ಸೇಡು ತೀರಿಸಿಕೊಳ್ಳುವೆನು; ಬಿಡು. ಈ ಭಂಡ! ದಸ್ಯು! ಘಾತಕ! [ಮೂರ್ಛೆಬೀಳುವಳು]

ಔರಂಗಜೀಬ-ಎಂತ ಉದಾರ ಯುವಕನು ಇವನು! ಹೋಗು, ನಿನ್ನನ್ನು ನಾನು ವಧೆ ಮಾಡುವುದಿಲ್ಲ. ಷಯಸ್ತಾಖಾ, ಇವನನ್ನು ಗ್ವಾಲಿಯರ್ ದುರ್ಗದಲ್ಲಿಡು. ಈ ದಾರನ ಮಗಳು ಆಗ್ರಾದ ದುರ್ಗಪ್ರಾಸಾದದಲ್ಲಿ ನಮ್ಮ ತಂದೆಯ ಬಳಿ ಇರಲಿ. [ಹೋಗುವರು]

## ಎರಡನೆಯ ನೋಟ.

ಸ್ಥಾನ—ಅರಖಾನದಲ್ಲಿ ರಾಜಪ್ರಾಸಾದ. ಕಾಲ—ರಾತ್ರಿ.

ಷೂಜ ಮತ್ತು ಪಿಯಾರ

ಷೂಜ—ನಿಯತಿಯು ನಮ್ಮನ್ನು ಅಟ್ಟಿಕೊಂಡು ಬಂದು ಕಡೆಗೆ ಅರಖಾನದ ರಾಜಾಶ್ರಯದಲ್ಲಿ ತಂದುಹಾಕುವುದೆಂದು ಯಾರು ತಿಳಿದಿದ್ದರು ?

ಪಿಯಾರ-ಇನ್ನುಮೇಲೆ ಎಲ್ಲಿಗೆ ಕರೆದುಕೊಂಡು ಹೋಗಲಿರುವುದೋ ಬಲ್ಲವರಾರು ?

ಷೂಜ--ಈ ಕಾಡುಜನರ ಅರಸು ಏನು ತಿಳಿದಿರುವನು ಗೊತ್ತೆ, ಪಿಯಾರಾ ?

ಪಿಯಾರ-ತನ್ನ ದೇಶದಂತೆ ನೀರಸವಾದ ಒಂದು ಪೈಶಾಚಿಕ ನಿಶ್ಚಯ; ಜಾಗ್ರತೆ ಹೇಳು, ಏನು ತಿಳಿದಿರುವನೆಂಬುದನ್ನು ಕೇಳಲು ಪ್ರಾಣಬಿಡುತ್ತಿರುವೆನು.

ಷೂಜ-ನಾನು ಈ ನಾಲ್ವತ್ತುಜನ ಅಶ್ವಾರೋಹಿಗಳನ್ನು ಕರೆದುಕೊಂಡು ಬಂದಿರುವುದು ಅರಖಾನವನ್ನು ಜಯಿಸುವ ಸಲುವಾಗೆಂದು !

ಪಿಯಾರ - ಏಕಾಗಬಾರದು ? ಭಕ್ತಿಯಾರ್ ಖಿಲ್ಜಿಯು ೭೬ ಜನ ಸವಾರರಿಂದ ಬಂಗಾಳವನ್ನು ಜಯಿಸಿದನೆಂಬುದನ್ನು ಕೇಳಿಲ್ಲವೆ ?

ಷೂಜ--ಅಸಂಭವ ; ಯಾರೋ ವಿದ್ವೇಷದಿಂದ ರಾಜನ ಮನಸ್ಸನ್ನು ಕೆಡಿಸಿರುವರು.

ಪಿಯಾರ-ಕೆಡಿಸಲಿ; ಏನಾಯಿತು ?

ಷೂಜ--ಪಿಯಾರಾ, ರಾಜನು ಏನೆಂದು ಅಪ್ಪಣೆ ಮಾಡಿರುವನು, ಗೊತ್ತೆ ? ನಾಳಿನ ಬೆಳಗ್ಗೆ ನಾವು ಇಲ್ಲಿಂದ ಹೊರಟುಹೋಗಬೇಕೆಂದು.

ಪಿಯಾರಾ--ಎಲ್ಲಿಗೆ ಹೋಗುವುದು ? ಈಗವನು ನಮಗೋಸುಗ ಕೊಟ್ಟಿರುವ ಮನೆಯೇ ಸೊಗಸಾಗಿದೆ.

ಷೂಜಾ-ಪಿಯಾರಾ, ಈ ಕಠಿಣ ಪ್ರಸಂಗದಲ್ಲೂ ನೀನು ಹೀಗೆ ಮಾತಾಡುವೆ ? ಈಗಲೂ ಈ ಪರಿಹಾಸ !

ಪಿಯಾರಾ-ಹಾಗಾದರೆ ಈಗ ಪರಿಹಾಸಮಾಡಬಾರದೊ? ನನಗೆ ತಿಳಿಯದೆಹೋಯ್ತು, ಇದೋ ಗಂಭೀರಳಾದೆನು.

ಷೂಜ-ಹೌದು, ಗಂಭೀರಳಾಗಿ ಕೇಳು ; ಇನ್ನೊಂದು ಮಾತಿದೆ ಪಿಯಾರಾ; ನೀನ

ದನ್ನು ಕೇಳಿದರೆ ಕೋಪದಿಂದ ಕಣ್ಣುಗಳು ಕೆಂಪಾಗುವವು, ಕಂಠವು ಸ್ತಂಭಿತವಾಗುವುದು, ಸರ್ವಾಂಗದಲ್ಲೂ ಬೆಂಕಿಯಿಟ್ಟಂತಾಗುವುದು—

ಪಿಯಾರ--ಅಪ್ಪಯ್ಯ ! ಇದೆಂತ ಮಾತು !

ಷೂಜ-ಅದನ್ನೇ ಹೇಳುವೆನು ಕೇಳು : ನಮಗೆ ಆಶ್ರಯವನ್ನು ಕೊಟ್ಟುದರ ಮೂಲ್ಯವಾಗಿ ಆ ದುರಾತ್ಮನು ಏನಪೇಕ್ಷಿಸಿದನು ಬಲ್ಲೆಯ? ನಿನ್ನನ್ನು ! ತಿಳಿಯಿತೆ ? ಏಕೆ ಸ್ತಬ್ಧಳಾದೆ ? ಪರಿಹಾಸಮಾಡು.

ಪಿಯಾರಾ–ನಿಶ್ಚಯವಾಗಿ ! ನನಗೀಗ ರಾಜನಮೇಲೆ ಭಕ್ತಿಯೂ ಹುಟ್ಟುತ್ತಿರುವದು. ಅವನು ಪ್ರಪಂಚವನ್ನು ಬಲ್ಲವನು.

ಷೂಜಾ--ಪಿಯಾರಾ, ಈರೀತಿ ಮಾತಾಡಬೇಡ. ನನಗೆ ರೇಗಿಹೋಗುವದು. ನಿನಗಿದು ಪರಿಹಾಸವಾಗಿ ತೋರಬಹುದು; ಆದರೆನಗೆ ಮರ್ಮಶಲ್ಯವು. ಪಿಯಾರ, ನೀನು ನನಗೇನಾಗಬೇಕು ಗೊತ್ತೆ ?

ಪಿಯಾರಾ--ಹೆಂಡತಿಯೆಂದು ತೋರುವುದು.

ಷೂಜಾ–ಇಲ್ಲ; ನೀನೇ ನನ್ನ ರಾಜ್ಯ, ಸಂಪತ್ತು, ಸರ್ವಸ್ವ, ಇಹಕಾಲ ಮತ್ತು ಪರಕಾಲ; ನಾನು ರಾಜ್ಯವನ್ನು ಕಳೆದುಕೊಂಡೆನು. ಆದರೂ ಇಷ್ಟು ದಿನಗಳೂ ಅದರ ಅಭಾವವನ್ನು ಅನುಭವಮಾಡಲಿಲ್ಲ; ಇಂದು ಮಾಡುತ್ತಿರುವೆನು.

ಪಿಯಾರಾ-ಏಕೆ ?

ಷೂಜಾ—ನನಗೆ ಜೀವನ-ಮರಣಗಳಷ್ಟು ಪ್ರಗಾಢವಾದ ವಿಷಯದಲ್ಲಿ ನೀನು ಪರಿಹಾಸಮಾಡುತ್ತಿರುವೆ.

ಪಿಯಾರಾ—ಏಕಿಷ್ಟು ರಗಳೆ ! ಎರಡನೆ ಸಾರಿ ಎಷ್ಟು ಜನರು ಮದುವೆಮಾಡಿಕೊಂಡಿರುವರು? ಆದರೆ ನಿನ್ನ ಹಾಗಾರೂ ಆಡುವುದಿಲ್ಲ.

ಷೂಜಾ--ಇಲ್ಲ; ನನಗೆ ತಿಳಿಯಿತು. ನೀನು ಮೇಲೆ ಹಾಸ್ಯಮಾಡುತ್ತಿರುವೆ, ಒಳಗೆ ಕೋಪದಿಂದ ಉರಿದುಬೀಳುತ್ತಿರುವೆ. ನಿನ್ನ ಮುಖದಲ್ಲಿ ನಗು, ಕಣ್ಣಿನಲ್ಲಿ ನೀರು.

ಪಿಯಾರಾ--ಸಿಕ್ಕಿಬಿದ್ದೆನು ! ಯಾರು ಹೇಳಿದರು ನಾನು ಅಳುವೆನೆಂದು? ಇದೋ ನೋಡು [ಕಣ್ಣು ಮುಚ್ಚಿಕೊಂಡು] ಇನ್ನು ಅಳುವದಿಲ್ಲ.

ಷೂಜಾ--ಈಗೇನುಮಾಡಲಿ?

ಪಿಯಾರಾ--ನನ್ನನ್ನುದ್ಧಾರಮಾಡು.

ಷೂಜಾ-ಪಿಯಾರಾ, ನನ್ನನ್ನು ಪ್ರೀತಿಸುವುದಾದರೆ ಈ ಕೆಟ್ಟ ಪರಿಹಾಸವನ್ನು ಸಾಕು ಮಾಡು. ಕೇಳು, ನಾನೇನು ಮಾಡಬೇಕೆಂದಿರುವೆನು, ಗೊತ್ತೆ?

ಪಿಯಾರಾ-ಗೊತ್ತಿಲ್ಲ.

ಷೂಜಾ-ನನಗೂ ಗೊತ್ತಿಲ್ಲ! ಔರಂಗಜೀಬನ ಬಾಗಿಲಿಗೆ ಹೋಗಿ ನಿಲ್ಲಲೆ? ಬೇಡ. ಅದಕ್ಕಿಂತ ಸಾಯುವದು ಮೇಲು. ಏಕೆ, ಮಾತಾಡು, ಪಿಯಾರಾ.

ಪಿಯಾರಾ-ಯೋಚಿಸುತ್ತಿರುವೆನು.

ಷೂಜಾ--ಯೋಚಿಸು.

ಪಿಯಾರಾ-(ಸ್ವಲ್ಪ ಹೊತ್ತಾದಮೇಲೆ) ಆದರೀ ಮಕ್ಕಳ ಗತಿ?

ಷೂಜಾ--ಏನು?

ಪಿಯಾರಾ--ಏನೂ ಇಲ್ಲ.

ಷೂಜಾ-ನಾನೇನು ಮಾಡುವೆನು, ಗೊತ್ತೆ?

ಪಿಯಾರಾ-ಅವನ್ನು ಹೇಗೆ ಹೇಳಲಿ!

ಷೂಜ-ಆತ್ಮಹತ್ಯೆ ಮಾಡಿಕೊಳ್ಳಬೇಕೆಂಬ ಇಚ್ಛೆಯಿರುವದು; ಆದರೆ ನಿನ್ನನ್ನು ಬಿಡಲಾರದವನಾಗಿರುವೆನು.

ಪಿಯಾರಾ-ನಾನೂ ಸಂಗಡ ಬಂದರೆ!

ಷೂಜ-ಸುಖದಿಂದ ಸ್ಸಾಯುವೆನು. ಆದರೆ ನನಗೋಸ್ಕರ ನೀನು ಸಾಯುವಿಯೇಕೆ, ಪಿಯಾರಾ?

ಪಿಯಾರಾ--ಇಲ್ಲ; ಹಾಗಾಗಲೇಬೇಕು. ನಾಳಿನ ಪ್ರಾತಃಕಾಲ ನಮಗೆ ಉಚ್ಚಾಟನೆ; ಇಲ್ಲಿ ಘೋರಯುದ್ಧ. ಈ ನಾಲ್ವತ್ತು ಜನ ಸವಾರರಿಂದಲೇ ನೀನೀ ರಾಜ್ಯವನ್ನು ಆಕ್ರಮಣಮಾಡು. ವೀರನಂತೆ ಮರಣಹೊಂದು; ನಾನೂ ನಿನ್ನ ಪಾರ್ಶ್ವದಲ್ಲಿದ್ದು ಸಾಯುವೆನು. ಮತ್ತು ಮಕ್ಕಳು— ಅವರು ತಮ್ಮ ಮರ್ಯಾದೆಯನ್ನು ತಾವು ಹೇಗಾದರೂ ಕಾಪಾಡಿಕೊಳ್ಳುವರು. ಅಲ್ಲವೆ?

ಷೂಜಾ-ಭೇಷ್! ಆದರೆ ಯುದ್ಧದಿಂದಾಗುವ ಲಾಭವೇನು?

ಪಿಯಾರಾ—ಬೇರೆ ಉಪಾಯವೇನಿರುವುದು? ನೀನು ಸತ್ತರೆ ನನ್ನನ್ನು ರಕ್ಷಿಸುವರಾರು? ಮತ್ತು ನೀನು--ಇಷ್ಟು ದಿನವೂ ವೀರನಂತೆ ಬದುಕಿಬಾಳಿದ ನೀನು, ವೀರನಂತೆ ಸಾಯುವಿ! ಈ ಕಾಡುಜನರ ಆರಸನ ಘೃಣ್ಯವಾದ ಪ್ರಸ್ತಾವಕ್ಕೆ ತಕ್ಕ ಪ್ರತೀಕಾರವನ್ನು ಮಾಡು.

ಷೂಜಾ--ಅದು ಸರಿ; ನಾಳಿನ ಬೆಳಿಗ್ಗೆ ನಾವಿಬ್ಬರೂ ಒಟ್ಟಿಗೆ ಸಾಯುವ. ಪಿಯಾರಾ, ನಮ್ಮ ಜೀವನದಲ್ಲಿದು ಕಡೆಯ ಸಮ್ಮಿಳನದ ರಾತ್ರಿಯಲ್ಲವೆ? ಇಂದು ನಿನ್ನ ನಗುವನ್ನು ತೋರು, ಮಾತಾಡು, ಹಾಡು. ಇಷ್ಟು ದಿನವೂ ಯಾವುದರಿಂದ ನಾನು ಪ್ರಪಂಚವನ್ನು ಮರೆಯುವಂತೆ ಮಾಡುತ್ತಿದ್ದೆಯೋ, ಆ ಸಕಲ ವಿಭ್ರಮ-ವ್ಯಯಾರಗಳನ್ನು ತೋರಿಸು ಕಡೆಗೊಂದುಸಾರಿ ನೋಡುವೆನು; ಕೇಳುವೆನು. ವೀಣಾಸದೃಶವಾದ ನಿನ್ನ ಸಂಗೀತವನ್ನು ಹಾಡು! ಸ್ವರ್ಗವು ಮರ್ತ್ಯಕ್ಕಿಳಿಯಲಿ, ಝೇಂಕಾರದಿಂದ ಆಕಾಶವು ತುಂಬಿಹೋಗಲಿ, ನಿನ್ನ ಸೌಂದರ್ಯದಿಂದ ಈ ಅಂಧಕಾರವು ಒಮ್ಮೆ ಬೆಳಗುವಂತೆ ಮಾಡು, ನೋಡುವೆನು. ನಿನ್ನ ಪ್ರೇಮದಿಂದ ನನ್ನನ್ನು ಮುಚ್ಚಿಬಿಡು. ನಾನಾ ಸವಾರರಿಗೆ ಸಮಾಚಾರವನ್ನು ತಿಳುಹಿಸಿ ಬರುವೆನು. ಇಂದಿನ ರಾತ್ರಿ ನಿದ್ರಿಸುವುದೇ ಬೇಡ.

ಪಿಯಾರಾ—ಮೃತ್ಯು-ಆಗಕೂಡದೇಕೆ? ಮೃತ್ಯು--ಐಹಿಕವಾದ ಸಕಲ ಆಶೆಗಳ ವಿಶ್ರಾಮಸ್ಥಾನ, ಸುಖದುಃಖಗಳ ಸಮಾಧಿ; ಮೃತ್ಯು-ಮತ್ತೆ ಎಚ್ಚರವಿಲ್ಲದ ಗಾಢನಿದ್ರೆ ಮತ್ತೆ ಬೆಳಕು ಹರಿಯದ ಪ್ರಗಾಢರಾತ್ರಿ; ಮೃತ್ಯು ಭಯವೇನು? ಒಂದುದಿನ ಬಂದೇಬರುವದು. ಆದರಿನ್ನೂ ದಿನವಿರುವಾಗಲೇ ಸಾಯುವದು ಮೇಲು. ಇಂದು ಈ ರೂಪವು ನಿರ್ವಾಣೋನ್ಮುಖ ದೀಪದಂತೆ ಉಜ್ವಲತಮ ಪ್ರಭೆಯಿಂದ ಬೆಳಗಲಿ; ಈ ಗಾನವು ತಾರಸ್ವರದಿಂದ ಆಕಾಶಕ್ಕೆ ಹಾರಿ ನಕ್ಷತ್ರರಾಜ್ಯವನ್ನು ಧಾಳಿಮಾಡಲಿ; ಇಂದಿನ ಸುಖವು ವಿಪತ್ತಿನಂತೆ ಕಂಪಿತವಾಗಲಿ, ಆನಂದವು ದುಃಖದಂತೆ ಅಳತೊಡಗಲಿ, ಸಮಸ್ತ ಜೀವನವೂ ಒಂದು ಚುಂಬನದಲ್ಲಿ ಕೊನೆಗೊಳ್ಳಲಿ—ಇಂದೆಮ್ಮ ಶೇಷಮಿಳನ ರಾತ್ರಿ. (ಹೋಗುವಳು)

## ಮೂರನೆಯ ನೋಟ.

ಸ್ಥಾನ—ಆಗ್ರಾದ ದುರ್ಗಪ್ರಾಸಾದ. ಕಾಲ—ರಾತ್ರಿ.

ಹೊರಗೆ ವೃಷ್ಟಿ, ಗುಡುಗು, ಮಿಂಚು, ಮತ್ತು ಸಿಡಿಲು. ಷಾಜಹಾನ್--ಜಹರತ್ಉನ್ನೀಸಾ

ಷಾಜಹಾನ್—ದಾರನನ್ನು ಕೊಲ್ಲಲಾರಿಗೆ ಸಾಧ್ಯ? ನಾನು—ಸಮ್ರಾಟ ಷಾಜಹಾನನು

ಅವನಮೇಲೆ ಕಾವಲಿರುವೆನು. ಯಾರಿಗೆ ಸಾಧ್ಯ? ಔರಂಗಜೀಬನೆ? ತುಚ್ಛ! ನಾನೊಮ್ಮೆ ಕಣ್ಣುಬಿಟ್ಟರೆ ಔರಂಗಜೀಬನು ಭಯದಿಂದ ನಡಗುವನು. ನಾನು ಮಳೆ ಬರಲೆಂದು ಹೇಳಿದರೆ ಮಳೆ ಬರುವುದು. ಸಿಡಿಲು ಬೀಳಲೆಂದು ಹೇಳಿದರೆ ಸಿಡಿಲು ಬೀಳುವುದು. (ಹೊರಗೆ ಗುಡುಗು ಮಿಂಚು)

ಜಹರತ್—ಓ! ಎಂತ ಶಬ್ದ! ಹೊರಗೆ ಪಂಚಭೂತಗಳ ಘೋರ ಸಂಗ್ರಾಮ; ಒಳಗೆ ಉನ್ಮತ್ತಪ್ರಾಯನಾದ ತಾತನ ಹೃದಯ; ಮಧ್ಯದಲ್ಲೂ ಅದೇ ಯುದ್ಧ. (ಗುಡುಗು) ಇದೋ ಮತ್ತೆ ಘರ್ಜನೆ.

ಷಾಜಹಾನ್--ಅಸ್ತ್ರಗಳನ್ನು ತೆಗೆದುಕೊಂಡು ಬನ್ನಿ—ಕತ್ತಿ, ಕಠಾರಿ, ಭಲ್ಲೆ, ಫಿರಂಗಿ ಎಲ್ಲವೂ ಸಿದ್ಧವಾಗಲಿ. ಅವರು ಬರುತ್ತಿರುವರು; ಅವರು ಬರುತ್ತಿರುವರು. ನಾನು ಯುದ್ಧಮಾಡುವೆನು, ರಣಭೇರಿಯನ್ನು ಹೊಡೆಯಿರಿ, ಪತಾಕೆಯನ್ನು ಎತ್ತಿ ಹಿಡಿಯಿರಿ. ಇದೋ ಅವರು ಬಂದರು. ತೊಲಗಿರಿ, ರಕ್ತಲೋಲುಪರಾದ ಸೈತಾನನ ದೂತರೆ ನಾವಾರೆಂಬುದು ತಿಳಿಯದೊ? ನಾನು ಸಮ್ರಾಟ್ ಷಾಜಹಾನನು--ದೂರ ನಿಲ್ಲಿರಿ.

ಜಹರತ್--ತಾತ, ಸುಮ್ಮನೆ ಕೂಗಾಡಬೇಡಿ; ನಡೆಯಿರಿ, ಮಲಗಿ ನಿದ್ರೆಹೋಗು ವಿರಂತೆ.

ಷಾಜಹಾನ್--ಬೇಡ; ನಾನು ಹೊರಟುಹೋದರೆ ಇವರೆಲ್ಲರೂ ಸೇರಿಕೊಂಡು ದಾರ ನನ್ನು ಕೊಂದುಬಿಡುವರು. ಸಮೀಪಕ್ಕೆ ಬರಬೇಡಿ. ಖಬರ್ದಾರ್!

ಜಹರತ್--ತಾತಾ-

ಷಾಜಹಾನ್—ಸಮೀಪಕ್ಕೆ ಬರಬೇಡಿ. ನಿಮ್ಮ ನಿಶ್ವಾಸದಲ್ಲಿ ವಿಷವಿರುವುದು; ಈ ನಿಶ್ವಾಸವು ಕಾರಾಗಾರದ ಕತ್ತಲೆಕೋಣೆಯ ಗಾಳಿಗಿಂತ ವಿಷಾಕ್ತ, ಬೇಯುವ ಮಾಂಸಕ್ಕಿಂತ ದುರ್ಗಂಧವಾಗಿರುವುದು.

ಜಹರತ್--ತಾತ, ರಾತ್ರಿ ಬಹಳ ಹೊತ್ತಾಗಿರುವುದು. ಇನ್ನಾದರೂ ಮಲಗಿ.

(ಜಹನಾರಳು ಬರುವಳು)

ಜಹನಾರಾ--ಎಂತ ಕರುಣದೃಶ್ಯ! ತಂದೆಯನ್ನು ಕಳೆದುಕೊಂಡ ಬಾಲಿಕೆಯು ಮಗನನ್ನು ಕಳೆದುಕೊಂಡ ವೃದ್ಧನನ್ನು ಸಂತೈಸುತ್ತಿರುವಳು. ಇಬ್ಬರ ಹೃದಯ ಮಧ್ಯದಲ್ಲೂ ದುಸ್ಸಹವಾದ ದುರ್ಭರ ಚಿಂತಾಗ್ನಿ. ಎಂತ ನೋಟ! ನೋಡು ಔರಂಗಜೀಬ, ನಿನ್ನ ಕೀರ್ತಿಯನ್ನು ನೋಡು.

ಜಹರತ್--ಚಿಕ್ಕತ್ತೇ, ನೀನೂ ಎದ್ದು ಬಂದೆಯಾ?

ಜಹನಾರಾ--ಮೇಘ ಗರ್ಜನೆಯಿಂದ ನಿದ್ರಾಭಂಗವಾಯಿತು. ತಂದೆಯು ಮತ್ತೆ ಹುಚ್ಚುಹುಚ್ಚಾಗಿ ನುಡಿಯುತ್ತಿರುವನು.

ಜಹರತ್-ಹೌದು, ಚಿಕ್ಕತ್ತೆ.

ಜಹನಾರಾ-ಔಷಧವನ್ನು ಕೊಟ್ಟೆಯಾ?

ಜಹರತ್--ಕೊಟ್ಟೆನು. ಆದರೀಬಾರಿ ಜ್ಞಾನ ಬರಲು ಏಕೆ ವಿಳಂಬವಾಯಿತೋ, ಕಾಣೆ.

ಷಾಜಹಾನ್-ಏನು ಮಾಡಿದರು, ಏನು ಮಾಡಿದರು!

ಜಹರತ್—ಏನು ತಾತ ?

ಷಾಜಹಾನ್--ಸತ್ತು ಹೋದನು! ಸತ್ತುಹೋದನು! ಇದೋ ರಕ್ತವು ತುಂಬಿ ಕೋಡಿಯಾಗಿ ಹರಿಯುತ್ತಿರುವದು. ಮನೆಯಲ್ಲಾ ತುಂಬಿಹೋಯಿತು! (ಕುಳಿತು ದಾರನ ಕಲ್ಪಿತ ರಕ್ತದಲ್ಲಿ ಕೈಯನ್ನು ಅದ್ದಿ) ಇನ್ನೂ ಬಿಸಿಯಾಗಿರುವದು. ಅಯ್ಯೋ!

ಜಹನಾರಾ-ಅಪ್ಪ, ರಾತ್ರಿಯಿಷ್ಟು ಹೊತ್ತಾದರೂ ನೀನು ನಿದ್ರೆಮಾಡಿಲ್ಲ.

ಷಾಜಹಾನ್-ಔರಂಗಜೀಬ, ನನ್ನಕಡೆ ನೋಡಿ ನಗುತ್ತಿರುವೆಯಾ? ನಗು ದುರಾತ್ಮಾ, ನಿನಗೆ ತಕ್ಕ ಶಾಸ್ತಿಮಾಡುವೆನು. ನಿಲ್ಲು ಕೊಲೆಗಡಕಿ, ಕೈಗಳನ್ನು ಜೋಡಿಸಿ ನಿಲ್ಲು; ಏನು--ಕ್ಷಮೆಬೇಡುವಿಯಾ, ಕ್ಷಮೆ? ಕ್ಷಮೆಯಿಲ್ಲ. ತನ್ನ ಮಗನೆಂದು ಕ್ಷಮಿಸುವನೆಂದು ತಿಳಿದೆಯಾ? ಇಲ್ಲ; ನಿನ್ನನ್ನು ತುಷಾನಲದಲ್ಲಿ ಸುಡುವಂತೆ ಆಜ್ಞೆಮಾಡಿರುವೆನು. ಹೋಗಿ, ಕರೆದುಕೊಂಡು ಹೋಗಿ.

ಜಹನಾರಾ -ಅಪ್ಪ, ಇನ್ನು ಮಲಗುಹೋಗು.

ಜಹರತ್—ಬಾ, ತಾತ. [ಕೈಯನ್ನು ಹಿಡಿಯುವಳು]

ಷಾಜಹಾನ್—ಏನು ಮಮತಾಜ್, ನೀನೂ ಅವನ ಸಲುವಾಗಿ ಕ್ಷಮೆ ಬೇಡುವಿಯಾ? ಇಲ್ಲ, ನಾನು ಕ್ಷಮಿಸುವದಿಲ್ಲ; ಇವನು ದಾರನನ್ನು ಕೊಂದಿರುವನು.

ಜಹನಾರಾ—ಇಲ್ಲ, ಅಪ್ಪ; ಕೊಲ್ಲಲಿಲ್ಲ. ನೀನು ನಿದ್ರೆಮಾಡು ಹೋಗು.

ಷಾಜಹಾನ್-ಕೊಲ್ಲಲಿಲ್ಲ, ಕೊಲ್ಲಲಿಲ್ಲ. ಅದು ನಿಶ್ಚಯವೆ? ಹಾಗಾದರೆ ನಾನು ನೋಡಿದುದೇನು, ಕನಸೆ?

ಜಹನಾರಾ— ಹೌದಪ್ಪ, ಕನಸು.

ಷಾಜಹಾನ್-ಹಾಗಾದರೆ ಸರಿ; ಆದರೆಂತಹ ದುಸ್ವಪ್ನ ! ಒಂದು ವೇಳೆ ಸತ್ಯವಾಗಿದ್ದರೆ! ಏಕೆ ಜಹರತ್, ಅಳುತ್ತಿರುವೆ? ಇದು ಕನಸಲ್ಲ! ಕನಸಲ್ಲ! ಹೋ! ಹೋ! ಹೋ!

[ಗುಡುಗು-ಮಿಂಚು]

ಜಹರತ್--ಇದೇನು ಹೊರಗೆ ! ಇಂದಿನರಾತ್ರಿಯು ಪ್ರಪಂಚದ ಪ್ರಳಯದ ರಾತ್ರಿಯೆ? ಎಲ್ಲವೂ ಪ್ರಕೋಪಗೊಂಡಿರುವುದು. ಭೂಮಿ, ಆಕಾಶ, ಜಲ, ಅಗ್ನಿ, ವಾಯು-ಎಲ್ಲವೂ. ಓ! ಎಂತ ಭಯಾನಕ ರಾತ್ರಿ!

ಷಾಜಹಾನ್--ಇದೆಲ್ಲ ಏನು, ಜಹನಾರಾ ?

ಜಹನಾರಾ-ಅಪ್ಪ, ರಾತ್ರಿ ಹೊತ್ತಾಗಿದೆ; ನಿದ್ರೆಹೋಗು. ನೀನೇನು ಉನ್ಮತ್ತನಲ್ಲ.

ಷಾಜಹಾನ್-ನಾನು ಉನ್ಮತ್ತನಲ್ಲ, ಉನ್ಮತ್ತನಲ್ಲ; ತಿಳಿದೆನು. ಹೊರಗಿದೇನು, ಜಹನಾರಾ ?

ಜಹನಾರಾ-ಹೊರಗೊಂದು ಪ್ರಳಯವಾಗುತ್ತಿರುವದು. ಕೇಳು ಅಪ್ಪ, ಕೇಳು: ವೃಷ್ಟಿಯ ಶಬ್ದವನ್ನು, ಬಿರುಗಾಳಿಯ ಹುಂಕಾರವನ್ನು, ಗುಡಿಗಿನ ದನಿಯನ್ನು; ಆಕಾಶವು ಕಳಚಿಬಿದ್ದಂತೆ ಮಳೆಸುರಿಯುತ್ತಿರುವದು. ಬಿರುಗಾಳಿಯು ವೃಷ್ಟಿಧಾರೆಯನ್ನು ತೀವ್ರವೇಗದಿಂದ ಭೂಮಿಗೆಅಪ್ಪಳಿಸಿತಂದು ಹೊಡೆಯುತ್ತಿರುವುದು

ಷಾಜಹಾನ್-ಹೊಡೆಯಿರಿ ನನ್ನ ಮಕ್ಕಳಿರಾ, ಚನ್ನಾಗಿ ಹೊಡೆಯಿರಿ. ಪೃಥ್ವಿಯು ನೀರವವಾಗಿ ಎಲ್ಲವನ್ನೂ ಸಹಿಸುವಳು. ಅವಳು ನಿಮ್ಮನ್ನು ಹೆತ್ತುದೇಕೆ? ತೊಡೆಯಮೇಲಿಟ್ಟುಕೊಂಡು ಸಾಕಿದಳೇಕೆ? ಈಗ ನೀವು ದೊಡ್ಡವರಾದಿರಿ; ಇನ್ನೇಕೆ ಅವಳನ್ನು ಮನ್ನಿಸುವಿರಿ? ಕರ್ಮಾಕ್ಕನುಸಾರವಾದ ಫಲ! ಹೊಡೆಯಿರಿ, ಮಕ್ಕಳೇ ! ಅವಳೇನು ಮಾಡಬಲ್ಲಳು? ರಾಶಿರಾಶಿ ಗೈರಿಕಜ್ವಾಲೆಯನ್ನು ಉಗುಳುವಳೋ? ಆಗಲಿ, ಆ ಗೈರಿಕಜ್ವಾಲೆಯು ಆಕಾಶಕ್ಕೆ ನೆಗೆದು ದ್ವಿಗುಣವಾದ ವೇಗದಿಂದ ಅವಳ ಮೈಮೇಲೇ ಬಂದು ಬೀಳುವದು. ಕ್ರೋಧದಿಂದ ಸಮುದ್ರದ ತೆರೆಗಳನ್ನು ಎಬ್ಬಿಸುವಳೋ? ಎಬ್ಬಿಸಲಿ. ತರಂಗವು ದೀರ್ಘನಿಶ್ವಾಸದಿಂದ ಮತ್ತೆ ಅವಳ ವಕ್ಷದಮೇಲೆಯೇ ಬೀಳುವುದು. ಅವಳ ಅಂತರ್ನಿರುದ್ಧವಾದ ಬಾಷ್ಪದಿಂದ ಭೂಮಿಕಂಪವು ನಡುಗುತ್ತ ಏಳುವುದೋ? ಏಳಲಿ, ಭಯವೇನು? ಆದರಿಂದವಳ ದೇಹವೇ ಭಗ್ನವಾಗುವದು. ನಿಮ್ಮನ್ನವಳೇನೂ ಮಾಡಲಾರಳು. ಕೈಲಾಗದ ಜೀರ್ಣವೃದ್ಧೆಯವಳು. ಕೇವಲ ಗಿಡ

ಗಳನ್ನು ಕೊಡಬಲ್ಲಳು, ನೀರನ್ನು ಕೊಡಬಲ್ಲಳು, ಹೂಗಳನ್ನು ಕೊಡಬಲ್ಲಳು; ಅಷ್ಟೇ ಅವಳ ಕೈಲಾಗುವುದು. ಮಾಡಿ, ನಿಮ್ಮಿಷ್ಟಬಂದಂತೆ ಮಾಡಿ. ಎಳೆದು ಕಳೆದು, ಹೊಡೆದು ಬಡಿದು, ಸಾಕುಮಾಡಿರಿ. ಅವಳಿಂದೇನೂಆಗದು. ಅಮ್ಮ, ಒಂದುಬಾರಿ ನಿನ್ನ ಘರ್ಜನೆಯನ್ನು ತೋರಬಾರದೆ? ಪ್ರಳಯದ ಕೂಗಿನಿಂದ ಅಬ್ಬರಿಸಿ, ಶತಸೂರ್ಯ ಪ್ರಕಾಶದಿಂದ ಜ್ವಲಿಸುತ್ತಾ, ಅಚಿಂತಿತವೇಗದಿಂದ ಆಕಾಶದ ಅನಂತ ಶೂನ್ಯತೆಯನ್ನು ಅಲ್ಲಾಡಿಸಿ, ಹೊರಟುಹೋಗಬಾರದೆ, ತಾಯಿ? ನೋಡುವ, ಆಗವರೆಲ್ಲಿ ಹೋಗುವರೊ? [ಹಲ್ಲುಕಡಿಯುವನು]

ಜಹನಾರಾ-ಅಪ್ಪ, ಈ ವ್ಯರ್ಥಕೋಪದಿಂದ ಏನಾಗುವುದು? ನಿದ್ರೆಮಾಡುವೆ, ಬಾ.

ಷಾಜಹಾನ್--ಸತ್ಯ, ಮಗಳೇ. ವ್ಯರ್ಥ! ವ್ಯರ್ಥ! ವ್ಯರ್ಥ! [ಮೇಘಗರ್ಜನೆ]

ಜಹರತ್--ಎಂತ ರಾತ್ರಿ, ಚಿಕ್ಕತ್ತೆ? ಎಷ್ಟೊಂದು ಭಯಂಕರ!

ಷಾಜಹಾನ್-ಜಹನಾರಾ, ಈ ದುರ್ದಿನದ ಅಂಧಕಾರದಲ್ಲೊಮ್ಮೆ ಹೊರಗೆಹೋಗಿ ತಿರುಗಾಡಿ ಬರಬೇಕೆಂಬ ಆಶೆಯಾಗುವದು. ಬೆಂಕಿಯಂತೆ ಪ್ರಜ್ವಲಿತವಾದ ಈ ನನ್ನ ನರೆಗೂದಲಿಂದ ತುಂಬಿದ ತಲೆಯನ್ನು ಆ ವೃಷ್ಟಿಯ ಅಜಸ್ರಧಾರೆಯಲ್ಲಿ ತೋಯಿಸಬೇಕೆಂದು ಆಸೆಯಾಗುತ್ತಿರುವುದು; ಈ ನನ್ನ ಹೃದಯವನ್ನು ಕೈಯಾರೆ ಕಿತ್ತು ಸಿಡಿಲಿನ ಸಮ್ಮುಖದಲ್ಲಿ ಹಾಕಿ ಬಿಡಬೇಕೆಂದು ಆಸೆಯಾಗುತ್ತಿರುವುದು; ಈ ದೇಹದಿಂದ ನನ್ನ ಆತ್ಮನನ್ನು ಒಮ್ಮೆಗೆ ಬೇರೆಮಾಡಿ ದಯಾಮಯನಾದ ಈಶ್ವರನಿಗದನ್ನು ತೋರಬೇಕೆಂಬಆಸೆಯಾಗುತ್ತಿರುವುದು. ಇದೋ ಮತ್ತೆ ಘರ್ಜನೆ. ಛಿ! ಮೇಘರಾಜ, ಬಾರಿಬಾರಿಗೆ ಈ ನಿಷ್ಫಲ ಘರ್ಜನೆಯೇಕೆ? ನಿನ್ನ ಆಘಾತದಿಂದ ಪೃಥುವಿಯ ವಕ್ಷವನ್ನು ಒಮ್ಮೆಗೇ ಭೇದಿಸಬಲ್ಲೆಯಾ? ಕತ್ತಲು! ಎಂತಹ ಕತ್ತಲು? ಚಂದ್ರಸೂರ್ಯರನ್ನು, ಗಗನದ ಸಮಸ್ತ ನಕ್ಷತ್ರಗಳನ್ನು ತನ್ನ ಗಭೀರ ಉದರದಲ್ಲಿ ಅಡಗಿಸಬಲ್ಲುದೆ, ಇದು? [ಮತ್ತೆ ಮೇಘಗರ್ಜನೆ]

ಜಹನಾರಾ-ಜಹರತ್, ತಂದೆಗೆ ಮತ್ತೆ ಜ್ಞಾನಹೋಗಿರುವುದು. ಎಲ್ಲಿ, ಔಷಧಿಯನ್ನು ತೆಗೆದುಕೊಂಡು ಬಾ.

ಜಹರತ್–ಇದೋ ಚಿಕ್ಕತ್ತೆ. [ಕೊಡುವಳು]

[ಜಹನಾರಳು ಔಷಧವನ್ನು ಕುಡಿಸುತ್ತಿರುವಳು. ಹೊರಗೆ ಮತ್ತೆ ಮೇಘ ಗರ್ಜನೆಯಾಗುವುದು]

ಜಹರತ್ ಮತ್ತು ಜಹನಾರಾ–ಓಹೋ! ಎಂತ ಭಯಾನಕ ರಾತ್ರಿ!

## ನಾಲ್ಕನೆಯ ನೋಟ.

ಸ್ಥಾನ--ಗ್ವಾಲಿಯರ್ ದುರ್ಗ. ಕಾಲ--ಪ್ರಭಾತ.

ಸುಲೇಮಾನ್ ಮತ್ತು ಮಹಮ್ಮದ್.

ಸುಲೇಮಾನ್-ಕೇಳಿದೆಯಾ, ಮಹಮ್ಮದ್? ವಿಚಾರಣೆಯಲ್ಲಿ ಚಿಕ್ಕಪ್ಪನಿಗೆ ಮರಣ ದಂಡನೆಯಾಯಿತು.

ಮಹಮದ್-ವಿಚಾರಣೆಯಲ್ಲಲ್ಲ ಅಣ್ಣಾ, ವಿಚಾರಣೆಯ ಹೆಸರಿನಲ್ಲಿ. ಚಿಕ್ಕಪ್ಪನೊಬ್ಬನು ಉಳಿದಿದ್ದನು. ಇಂದದೂ ಕೊನೆಯಾಯಿತು.

ಸುಲೇಮಾನ್-ಮಹಮದ್, ನಿಮ್ಮ ಮಾವನು ಹೇಗೆ ಸತ್ತನು?

ಮಹಮದ್-ಸರಿಯಾಗಿ ತಿಳಿಯದು. ಕೆಲವರು ಹೆಂಡತಿಯೊಡನೆ ಜಲಮಗ್ನನಾದನೆಂದು ಹೇಳುವರು; ಕೆಲವರು ಸಪತ್ನೀಕನಾಗಿ ಯುದ್ಧದಲ್ಲಿ ಮಡಿದನೆಂದು ಹೇಳುವರು. ಮಕ್ಕಳು ಆತ್ಮಹತ್ಯಮಾಡಿಕೊಂಡರಂತೆ.

ಸುಲೇಮಾನ್-ಹಾಗಾದರಾತನ ಪರಿವಾರದಲ್ಲಾರೂ ಉಳಿಯಲಿಲ್ಲ?

ಮಹಮದ್--ಇಲ್ಲ.

ಸುಲೇಮಾನ್--ನಿನ್ನ ಹೆಂಡತಿಗೀ ಸಮಾಚಾರವು ತಿಳಿಯಿತೆ?

ಮಹಮದ್-ತಿಳಿಯಿತು. ರಾತ್ರಿಯೆಲ್ಲಾ ಅಳುತ್ತಿದ್ದಳು; ನಿದ್ರೆಯಿಲ್ಲ.

ಸುಲೇಮಾನ್--ಇಷ್ಟೊಂದು ದುಃಖವನ್ನು ನೀನು ಸಹಿಸಬಲ್ಲೆಯಾ, ಮಹಮದ್ ?

ಮಹಮದ್-ನೀನುಮಾತ್ರ ಸುಖದಲ್ಲಿರುವೆಯಾ ಅಣ್ಣಾ? ತಂದೆತಾಯಿಗಳ ಸಲುವಾಗಿ ರಾತ್ರಿ-ಹಗಲೂ ದುಃಖಿಸುತ್ತಿರುವೆ.

ಸುಲೇಮಾನ್--ಮತ್ತದನ್ನು ನೆನಪಿಗೆ ತಂದೆಯಾ, ಮಹಮದ್? ಇಷ್ಟೊಂದು ನಿಷ್ಠುರನೇ ನೀನು? ನಿತ್ಯವೂ ನನ್ನನ್ನೀರೀತಿಯಾಗಿ ಸುಡಲು ನಿನ್ನನ್ನಿಲ್ಲಿಗೆ ಕಳುಹಿಸಿದನೋ, ನಿಮ್ಮ ತಂದೆಯು? ಯಾರು, ನನ್ನನ್ನು ಸಮಾಧಾನಮಾಡುವರು!

ಮಹಮದ್--ಅಣ್ಣಾ, ಈ ಎದೆಯ ರಕ್ತವನ್ನು ಚೆಲ್ಲಿಕೊಡುವುದರಿಂದ ನಿನಗೆ ಸ್ವಲ್ಪ ಸಮಾಧಾನವಾಗಬಹುದಾದರೆ ಹೇಳು, ಈಗ--ಈ ಕ್ಷಣದಲ್ಲೀ ಕಠಾರಿಯನ್ನಿರಿದುಕೊಳ್ಳುವೆನು.

ಸುಲೇಮಾನ್--ನಿಜವನ್ನು ಹೇಳಿದೆ, ಮಹಮದ್--ಈ ದುಃಖಕ್ಕೆ ಶಾಂತಿಯಿಲ್ಲ. ಆತೀ

ತವನ್ನು ಒಮ್ಮೆಗೇ ಅಳಿಸಿಬಿಡಬಹುದಾದರೆ, ಸಂಪೂರ್ಣವಾದ ವಿಸ್ಮೃತಿಯನ್ನು ತಂದುಕೊಳ್ಳಬಹುದಾದರೆ, ಆಗ.. ...

ಮಹಮದ್-ಅಂತ ಔಷಧವಾವುದೂ ಇಲ್ಲವೆ, ಅಣ್ಣ? ಅಂತ ಯಾವುದಾದರೊಂದು ವಿಷವು . ...

ಸುಲೇಮಾನ್-ಇತ್ತ ನೋಡು ಮಹಮದ್, ಸಿಪಾರನನ್ನು! [ಸೇತುವೆಯಮೇಲೆ ಸಿಪಾರನು ಬರುವನು]

ಸುಲೇಮಾನ್--ನೋಡು, ಆ ಬಾಲಕನನ್ನು-ನನ್ನ ತಮ್ಮ ಸಿಪಾರನನ್ನು; ನೋಡು ನೋಡು ಆ ಮೂಕ ಸ್ಥಿರಮೂರ್ತಿಯನ್ನು. ಎದೆಯಮೇಲೆ ಕೈಗಳನ್ನು ಕಟ್ಟಿಕೊಂಡು ಸ್ಥಿರಶೂನ್ಯದೃಷ್ಟಿಯಿಂದ ನೋಡುತ್ತಿರುವನು. ನೀರವ ! ಇಂತ ಭಯಾನಕ ಕರುಣದೃಶ್ಯವನ್ನೆಲ್ಲಿಯಾದರೂ ನೋಡಿರುವೆಯಾ, ಮಹಮದ್? ಇದರಮೇಲೆ ನಮ್ಮ ಸ್ವಂತದುಃಖಗಳಿಗಾಗಿ ಚಿಂತಿಸುವದು ಸಾಧ್ಯವೇ?

ಮಹಮದ್--ಓ! ಎಷ್ಟೊಂದು ಭಯಾನಕ ! ನಮ್ಮ ದುಃಖವನ್ನು ಹೇಳಿಕೊಳ್ಳಬಹುದು; ಈ ಮಗುವಿನ ದುಃಖವು ಮಾತಿಗೆ ನಿಲುಕದು. ಮಕ್ಕಳು ಅಳುವಾಗ ಪಕ್ಕದಲ್ಲಿ ಭೀಷಣ ಆರ್ತನಾದವು ಕೇಳಿಬಂದರೆ ಮಗುವಿನ ಅಳುವು ಹೇಗೆ ಒಮ್ಮಿಂದೊಮ್ಮೆ ನಿಂತುಹೋಗುವುದೋ, ಹಾಗೆ ನಮ್ಮ ದುಃಖವು ಇದರ ಸಮೀಪದಲ್ಲಿ ಭಯದಿಂದ ನೀರವವಾಗಿ ಹೋಗುವುದು.

ಸುಲೇಮಾನ್--ನೋಡು, ಕಣ್ಣುಗಳನ್ನು ಮುಚ್ಚಿಕೊಂಡು ಎರಡು ಕೈಗಳಿಂದ ಉಜ್ಜಿಕೊಳ್ಳುತ್ತಿರುವನು. ಮನಸ್ಸಿನ ದುರ್ಭರ ಯಾತನೆಯು ಹಾಹಾಕಾರಮಾಡುತ್ತಾ ಏಳಲಿಚ್ಛಿಸುವುದು; ಆದರೆ ವಾಕ್ಸ್ಫೂರ್ತಿಯಿಲ್ಲ. ಸಿಪಾರ್, ಸಿಪಾರ್, ಪ್ರಿಯಸಹೋದರ!

(ಸಿಪಾರನು ಒಮ್ಮೆ ಸುಲೇಮಾನನಕಡೆ ನೋಡಿ ಹೊರಟುಹೋಗುವನು)

ಮಹಮದ್--ಅಣ್ಣ-

ಸುಲೇಮಾನ್—ಮಹಮದ್—

ಮಹಮದ್--ನನ್ನನ್ನು ಕ್ಷಮಿಸು !

ಸುಲೇಮಾನ್-ನಿನ್ನದೇನು ದೋಷ ?

ಮಹಮದ್-ಇಲ್ಲ ಅಣ್ಣ, ಕ್ಷಮಿಸು. ಇಷ್ಟೊಂದು ಪಾಪದ ಭಾರವನ್ನು ತಂದೆಯು

ಸಹಿಸಲಾರನು. ಆದುದರಿಂದ ಇವನ ಅರ್ಧಾಪರಾಧವನ್ನು ನಾನು ವಹಿಸಿಕೊಳ್ಳುವೆನು; ನಾನು ಘೋರ ಪಾತಕಿಯು. ನನ್ನನ್ನು ಕ್ಷಮಿಸು.

[ಮೊಣಕಾಲೂರಿ ಬೇಡುವನು.]

ಸುಲೇಮಾನ್--ಏಳು ತಮ್ಮ, ಉದಾರವೀರ, ನಿನ್ನನ್ನು ನಾನು ಕ್ಷಮಿಸುವೆನು. ನೀನೆಲ್ಲವನ್ನು ಸ್ವೇಚ್ಛೆಯಿಂದ ಧರ್ಮಕ್ಕೋಸುಗ ಸಹಿಸಿದೆ. ನಾನು ಕೇವಲ ಹತಭಾಗ್ಯನು.

ಮಹಮುದ್-ಹಾಗಾದರೆ ನನ್ನಮೇಲೆ ನಿನಗೆ ವಿದ್ವೇಷವಿಲ್ಲವೆಂದು ಹೇಳು, ಅಣ್ಣ. ನಿನ್ನ ಪ್ರಿಯ ಸಹೋದರನೆಂದು ನನ್ನನ್ನು ಆಲಿಂಗಿಸು.

ಸುಲೇಮಾನ್-ನನ್ನ ಪ್ರಿಯಸಹೋದರ--[ಆಲಿಂಗಿಸುವನು]

ಮಹಮುದ್-ನೋಡು, ಚಿಕ್ಕತಂದೆಯನ್ನು ವಧ್ಯಭೂಮಿಗೆ ಕೊಂಡೊಯ್ಯುತ್ತಿರುವರು.

(ಸುಲೇಮಾನನು ಸೇತುವೆಯಕಡೆ ನೋಡುವನು. ಸೇತುವೆಯಮೇಲೆ ಪ್ರಹರಿಗಳೊಡನೆ ಮುರಾದನು ಪ್ರವೇಶಿಸುವನು)

ಮುರಾದ್-(ಉಚ್ಚಸ್ವರದಿಂದ) ಅಲ್ಲಾ! ನನ್ನ ಪಾಪದ ಫಲವನ್ನುನಾನು ಹೊಂದಿದೆನು, ದುಃಖವಿಲ್ಲ. ಆದರೆ ಔರಂಗಜೀಬನನ್ನು ಮರೆತೆಯೇಕೆ?

[ನೇಪಥ್ಯದಲ್ಲಿ]-ಯಾರನ್ನೂ ಮರೆಯುವುದಿಲ್ಲ; ಯಾವದೂ ಮರೆತುಹೋಗುವುದಿಲ್ಲ.

ಸುಲೇಮಾನ್-ಅದಾರ ಸ್ವರ?

ಮಹಮುದ್-ನನ್ನ ಪತ್ನಿಯದು.

[ನೇಪಥ್ಯದಲ್ಲಿ]--ಅವನಿಗಾಗುವ ಶಿಕ್ಷೆಯ ಸಮ್ಮುಖದಲ್ಲಿ ನಿನ್ನ ಶಿಕ್ಷೆಯು ಪುರಸ್ಕಾರವೆಂದು ತಿಳಿ. ಯಾರನ್ನೂ ಮರೆಯುವುದಿಲ್ಲ; ಯಾವದೂ ಮರೆತುಹೋಗುವದಿಲ್ಲ.

ಮುರಾದ-ಅವನಿಗೂ ಶಿಕ್ಷೆಯಾಗುವುದು! ಹಾಗಾದರೆನ್ನನ್ನು ವಧ್ಯಭೂಮಿಗೆ ಕರೆದುಕೊಂಡು ಹೋಗಿ; ಇನ್ನು ದುಃಖವಿಲ್ಲ.

[ಮುರಾದನೂ, ಪ್ರಹರಿಗಳೂ ಹೋಗುವರು]

ಸುಲೇಮಾನ್-ಮಹಮುದ್, ಇದೇನು! ಸ್ಥಿರದೃಷ್ಟಿಯಿಂದ ಆ ಕಡೆ ನೋಡುತ್ತಿರುವೆ, ಏನನ್ನು?

ಮಹಮದ್–ನರಕ! ಇದನ್ನುಳಿದು ಬೇರೊಂದು ನರಕವಿರುವುದೆ? ಇದ್ದರೆ ಅದೆಂತಹುದು? ದೇವಾ!

## ಐದನೆಯ ನೋಟ.

ಸ್ಥಾನ—ಔರಂಗಜೀಬನ ಮಂದಿರ. ಕಾಲ—ಮಧ್ಯರಾತ್ರಿ.

ಔರಂಗಜೀಬ-ಏಕಾಂಗಿ

ಔರಂಗಜೀಬ--ನಾನು ಮಾಡಿದುದೆಲ್ಲ ಧರ್ಮದ ಸಲುವಾಗಿ. ಬೇರೆ ಉಪಾಯದಿಂದ ಸಾಧ್ಯವಾಗಿದ್ದರೆ!-(ಹೊರಗೆನೋಡಿ) ಎಂತಹ ಕಾರ್ಗತ್ತಲೆ? ದೋಷಿಯಾರು? ನಾನೇ! ಅದು ಹೇಗೆ? ಇದಾರ ಶಬ್ದ! ಗಾಳಿಯು ಬೀಸುತ್ತಿರುವುದು. ಇದೇನು, ಯಾವ ರೀತಿಯಿಂದಲೂ ಈ ಚಿಂತೆಯನ್ನು ಮನಸ್ಸಿನಿಂದ ದೂರಮಾಡಲಾಗದಿರುವುದು! ರಾತ್ರಿ ತೂಕಡಿಸುತ್ತಾ ಹಾಸಿಗೆಯಮೇಲೆ ಮಲಗುವೆನು, ನಿದ್ರೆಯು ಮಾತ್ರ ಬರುವದಿಲ್ಲ. [ನಿಟ್ಟುಸಿರು ಬಿಟ್ಟು] ಏಕೀ ಸ್ತಬ್ಧತೆ! [ಸ್ವಲ್ಪಹೊತ್ತು ತಿರುಗಾಡಿ ಆಮೇಲೆ ಹಠಾತ್ತಾಗಿ ನಿಂತು] ಇದೇನು? ಮತ್ತೆ ಅದೇ ದಾರನ ಛಿನ್ನ ಮಸ್ತಕ! ಷೂಜನ ರಕ್ತಾಕ್ತದೇಹ! ಮುರಾದನ ತಲೆಯಿಲ್ಲದ ಕಬಂಧ! ಹೋಗಿ ನನ್ನಿದಿರಿನಿಂದ; ನನಗೆ ವಿಶ್ವಾಸವಿಲ್ಲ. ಇದೋ ಮತ್ತೆ! ನನ್ನ ಸುತ್ತು ಕುಣಿಯತೊಡಗಿದರು! ನೀವು ಯಾರು? ನನ್ನ ಜಾಗ್ರತೆಯಲ್ಲಿ, ನನ್ನ ನಿದ್ರೆಯಲ್ಲಿ, ಜ್ಯೋತಿರ್ಮಯವಾದ ಧೂಮಕೇತುವಿನಂತೆ ಬಾರಿಬಾರಿಗೂ ಬಂದು ದರ್ಶನಕೊಡುವಿರೇಕೆ? ತೊಲಗಿರಿ, ಇಲ್ಲಿಂದ. ಇದೋ! ಮುರಾದನ ಕಬಂಧವು ನನ್ನನ್ನು ಕರೆಯುತ್ತಿರುವುದು; ದಾರನ ರುಂಡವು ನನ್ನನ್ನು ಸ್ಥಿರ ದೃಷ್ಟಿಯಿಂದ ನೋಡುತ್ತಿರುವುದು; ಷೂಜನು ವಿಕಟವಾಗಿ ನಗುತ್ತಿರುವನು. ಇದೆಲ್ಲವೂ ಏನು? (ಕಣ್ಣುಗಳನ್ನು ಮುಚ್ಚಿಕೊಂಡು ಸ್ವಲ್ಪಹೊತ್ತಿನಮೇಲೆ ತೆಗೆದು) ಹೋದವು, ಎಲ್ಲವೂ ಹೊರಟುಹೋದವು. ಓ! ಇದೇನು, ನನ್ನ ಕೈಯಿಂದ ಇಷ್ಟೊಂದು ರಕ್ತವು ಸುರಿಯುತ್ತಿರುವುದೇಕೆ? ತಲೆಯಮೇಲೆ ಬಿಟ್ಟದಂತ ಈ ಭಾರವೇನು?

(ದಿಲ್ದಾರನು ಬರುವನು)

ಔರಂಗಜೀಬ--(ಚಮಕಿತನಾಗಿ) ದಿಲ್ದಾರ್!

ದಿಲ್ದಾರ್-ಜಹಪನಾ—

ಔರಂಗಜೀಬ--ನಾನೇನು ನೋಡುತ್ತಿರುವೆನು ಬಲ್ಲೆಯ?

ದಿಲ್ದಾರ್–ವಿವೇಕವೆಂಬ ಯವನಿಕೆಯಮೇಲೆ ಉತ್ತಪ್ತ ಚಿಂತೆಯ ಪ್ರತಿಚ್ಛವಿ! ಹಾಗಾದರೆ ಪ್ರಾರಂಭವಾಯಿತು?

ಔರಂಗಜೀಬ–ಏನು ?

ದಿಲ್ದಾರ್–ಅನುತಾಪ! ತಿಳಿಯಲಿಲ್ಲವೆ? ಇಂತ ಅಸ್ವಾಭಾವಿಕ ಆಚರಣೆಯನ್ನು, ನಿಯಮದ ಇಂತ ವ್ಯತಿಕ್ರಮವನ್ನು ಪ್ರಕೃತಿಯು ಎಷ್ಟು ದಿನ ಸಹಿಸುವಳು? ಇಲ್ಲ.

ಔರಂಗಜೀಬ–ನಿಯಮದ ವ್ಯತಿಕ್ರಮವೇನು, ದಿಲ್ದಾರ್?

ದಿಲ್ದಾರ್–ವೃದ್ಧನಾದ ತಂದೆಯನ್ನು ಕಾರಾಗಾರದಲ್ಲಿಟ್ಟಿರುವುದು; ತಿಳಿದಿರಾ, ಜಹಪನಾ? ಇಂದು ನಿಮ್ಮ ತಂದೆಯು ನಿಮ್ಮ ನಿರ್ಮಮತೆಯಿಂದ ಉನ್ಮತ್ತನಾಗಿರುವನು. ಅಲ್ಲದೆ ಮೇಲಿಂದಮೇಲೆ ಈ ಭ್ರಾತೃಹತ್ಯೆ. ಇಷ್ಟೊಂದು ಪಾಪವು ಸುಮ್ಮನೆ ತೀರುವುದೆ?

ಔರಂಗಜೀಬ--ಯಾರು ಹೇಳಿದರು, ನಾನು ಭ್ರಾತೃಹತ್ಯೆ ಮಾಡಿದೆನೆಂದು ? ಅದು ಖಾಜಿಗಳ ನ್ಯಾಯತೀರ್ಪು.

ದಿಲ್ದಾರ್–ಇಷ್ಟುದಿನವೂ ಪರರನ್ನು ವಂಚಿಸಿ, ಈಗ ಜಹಪನಾಯವರು ತಮ್ಮನ್ನು ತಾವೇ ವಂಚಿಸಿಕೊಳ್ಳುವ ವಿದ್ಯೆಯನ್ನು ಕಲಿತಂತಿದೆ! ಸಹೋದರನನ್ನು ಕೊಂದು ಜನರಿಂದ ತಮ್ಮ ದೋಷವನ್ನು ಮುಚ್ಚಿಟ್ಟುಕೊಳ್ಳುವದು ಸಾಧ್ಯವಿರಬಹುದು; ಆದರೆ ವಿವೇಕವನ್ನು ವಂಚಿಸುವುದು ಸಾಧ್ಯವಿಲ್ಲ. ಸಾವಿರ ಕೈಗಳಿಂದ ಕಂಠವನ್ನು ಹಿಡಿದೆಯಾದರೂ ಹೃದಯಾಂತರಾಳನಲ್ಲದು ತನ್ನ ನಿಮ್ನ, ಗಭೀರ, ಆಚ್ಛಾದಿತ, ಭಗ್ನದ್ವನಿಯಿಂದ ಕೂಗುತ್ತಲೇ ಇರುವದು ಈಗ ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತಮಾಡು.

ಔರಂಗಜೀಬ--ತೊಲಗಿಹೋಗು ಇಲ್ಲಿಂದ. ಔರಂಗಜೀಬನಿಗೆ ಉಪದೇಶಮಾಡಲು ನೀನಾರು, ದಿಲ್ದಾರ್?

ದಿಲ್ದಾರ್ ನಾನಾರೇ ಔರಂಗಜೀಬ? ನಾನು ಮಿರ್ಜಾ ಮಹಮುದ್ ನಿಯಮತ್‌ಖಾ.

ಔರಂಗಜೀಬ--ಹಾಜಿ ನಿಯಮತ್‌ಖಾ! ಆಸಿಯದ ವಿಜ್ಞತಮಸುಧೀ ನಿಯಮತ್ ಖಾನ್ !

ದಿಲ್ದಾರ್–ಹೌದು, ಔರಂಗಜೀಬ. ನಾನದೇ ನಿಯಮತ್‌ಖಾನನು! ಕೇಳು; ನಾನು ರಾಜನೀತಿಯ ರಹಸ್ಯವನ್ನು ತಿಳಿಯುವ ಸಲುವಾಗಿ ಹಿಂದೂಸ್ಥಾನಕ್ಕೆ ಬಂದು

ಘಟನಾಕ್ರಮದಿಂದ ಈ ಪಾರಿವಾರಿಕ ವೇಷಗಳ ಆವರ್ತದಲ್ಲಿ ಬಿದ್ದೆನು. ಆ ಅಭಿಜ್ಞತೆಯ ಲೋಭದಿಂದಲೇ ಜಘನ್ಯವಾದ ವಿದೂಷಕನ ಪಾತ್ರವನ್ನು ವಹಿಸಿದೆನು. ಆದರೆ ಇಂದಾವ ಅಭಿಜ್ಞತೆಯನ್ನು ಹೊಂದಿ ಹಿಂತಿರುಗುವೆನೋ, ಅದನ್ನು ಹೊಂದದಿದ್ದರೆ ಉತ್ತಮವಾಗಿತ್ತೆಂದು ಬೋಧೆಯಾಗುವುದು. ಔರಂಗಜೇಬ, ನಿನ್ನ ಅಪರಪಿಗಳ ಸಲುವಾಗಿ ಇಷ್ಟು ದಿನವೂ ನಿನ್ನ ಸೇವೆಯನ್ನು ಮಾಡಿದೆನೆಂದು ತಿಳಿದೆಯಾ? ವಿದ್ಯೆಗಿನ್ನೂ ಐಶ್ವರ್ಯದ ತಲೆಯಮೇಲೆ ಪದಾಘಾತಮಾಡುವ ತೇಜವಿರುವದು. ನಾನು ಹೋಗುವೆನು, ಸಮ್ರಾಟ್.

(ಹೊರಡುವನು)

ಔರಂಗಜೇಬ--ಜನಾಬ್—

ದಿಲ್ದಾರ್-ಇಲ್ಲ; ನನ್ನನ್ನು ಹಿಂದಿರುಗಿಸಲಾರೆ ಔರಂಗಜೇಬ, ನಾನು ಹೋಗುವೆನು. ಆದರೊಂದು ಮಾತನ್ನು ಹೇಳಿಹೋಗುವೆನು:—ಈ ಜೀವನ ಸಂಗ್ರಾಮದಲ್ಲಿ ನಿನಗೆ ಜಯವಾಯಿತೆಂದು ಭಾವಿಸಿರುವೆಯಾ? ಇಲ್ಲ, ಇದು ನಿನ್ನ ಜಯವಲ್ಲ ಔರಂಗಜೇಬ, ಪರಾಜಯ; ನಿನ್ನ ಮಹತ್ಪಾಪದ ಮಹತ್‌ಶಿಕ್ಷೆ; ನಿನ್ನ ಅಧಃಪತನ. ನೀನು ಮೇಲೆ ಹತ್ತಿದೆನೆಂದು ತಿಳಿದಷ್ಟೂ ಕೆಳಗೆ ಬೀಳುತ್ತಿರುವೆ. ಮತ್ತು ಈ ಯೌವನದ ಅಮಲು ಸ್ವಲ್ಪ ಇಳಿದು, ಪ್ರಕೃತಸ್ಥವಾದ ಕಣ್ಣುಗಳಿಂದ ಸ್ವರ್ಗಕ್ಕೂ ನಿನಗೂ ಮಧ್ಯೆ ಎಂತ ಕಠಿಣಪ್ರಪಾತವನ್ನು ಅಗಿದುಕೊಂಡೆಯೆಂಬುದನ್ನು ನೋಡಬಲ್ಲೆಯಾದಾಗ ವಿಭ್ರಾಂತನಾಗಿ ಬೀಳುವೆ. ನೆನಪಿರಲಿ! (ಹೋಗುವನು.)

(ಔರಂಗಜೇಬನು ನತಶಿರನಾಗಿ ಬೇರೊಂದು ಕಡೆ ಹೋಗುವನು)

## ಆರನೆಯ ನೋಟ.

ಸ್ಥಾನ—ಆಗ್ರಾದ ದುರ್ಗಪ್ರಾಸಾದ ಕಾಲ—ಅಪರಾಹ್ನ.

(ಜಹನಾರಾ ಮತ್ತು ಜಹರತ್ತುನ್ನೀಸಾ ಕುಳಿತು ಮಾತಾಡುತ್ತಿರುವರು)

ಜಹನಾರಾ-ಜಹರತ್‌ಉನ್ನೀಸಾ, ಔರಂಗಜೇಬನಂತ ಸೌಮ್ಯ, ಸಹಾಸ್ಯ, ಮನೋಹರ ಪಾಷಂಡನನ್ನು ನೀನೆಲ್ಲಾದರೂ ನೋಡಿರುವೆಯ?

ಜಹರತ್-ಇಲ್ಲ; ನನಗೊಂದು ದೊಡ್ಡ ಭಯ ಚಿಕ್ಕತ್ತೆ ಅಂತರಂಗದಲ್ಲಿ ಇಷ್ಟೊಂದು ಕ್ರೂರತೆ, ಹೊರಗೆ ಇಷ್ಟೊಂದು ಸರಳತೆ; ಒಳಗೆ ಇಷ್ಟೊಂದು ಪ್ರಬಲ, ಮೇಲೆ ಇಷ್ಟೊಂದು ಸ್ಥಿರ; ಒಳಗಂತ ಕಾಲಕೂಟ, ಹೊರಗಿಂತ ಮಾಧುರ್ಯ. ಇದು ಸಂಭವವೇ! ನನಗೆ ಭಯವಾಗುತ್ತಿರುವುದು.

ಜಹನಾರಾ-ನನಗೊಂದು ವಿಧ ಭಕ್ತಿ ಹುಟ್ಟುತ್ತಿರುವುದು. ಮನುಷ್ಯನು ಒಮ್ಮೆಗೆ ಹೀಗೆ ನಗಬಲ್ಲನು, ಸಂಗಡಲೇ ವ್ಯಾಘ್ರದಂತೆ ಹಿಂಸ್ರಲೋಲುಪವಾದ ದೃಷ್ಟಿಯನ್ನು ಬೀರಬಲ್ಲನು; ಇಂತ ಮೃದುವಾದ ಮಾತುಗಳನ್ನು ಆಡಬಲ್ಲನು, ಸಂಗಡ ಅಂತರಂಗದ ವಿದ್ವೇಷದ ಜ್ವಾಲೆಯಿಂದ ಉರಿಯುಬಲ್ಲನು; ಈಶ್ವರನ ಸನ್ನಿಧಿಯಲ್ಲಿ ಎರಡು ಕೈಗಳನ್ನು ಜೋಡಿಸಿ ನಿಲ್ಲಬಲ್ಲನು, ಮನಸ್ಸಿನಲ್ಲಿ ಸೈತಾನನಂತೆ ಒಂದು ಅಚಿಂತಿತ ಪಾಪವನ್ನು ಕಲ್ಪಿಸಬಲ್ಲನು. ಆಶ್ಚರ್ಯ!

ಜಹರತ್--ತಾತನನ್ನು ಈ ರೀತಿಯಾಗಿ ಬಂಧನದಲ್ಲಿಟ್ಟು ರಾಜಕಾರ್ಯದಲ್ಲಿ ಅವನ ಉಪದೇಶದ ಸಲವಾಗಿ ಹೇಳಿಕಳುಹಿಸುವನು. ಆತನ ಸಮ್ಮುಖದಲ್ಲಿ ಒಬ್ಬೊಬ್ಬರಾಗಿ ಆತನ ಪುತ್ರರನ್ನು ಕೊಂದು, ಮತ್ತೆ ಕ್ಷಮಿಸಬೇಕೆಂದು ಹೇಳಿಕಳುಹಿಸುವನು. ಅವನಿಗೇನು ಲಜ್ಜೆ, ಸಂಕೋಚ, ಸ್ವಲ್ಪವೂ ಇಲ್ಲವೆ? ಇದೋ ತಾತನು!

(ಷಾಜಹಾನನು ಬರುವನು)

ಷಾಜಹಾನ್-ನೋಡು, ಜಹನಾರಾ, ಈಗ ಹೇಗಿರುವೆನು ನೋಡು! ಜಹರತ್‌ಉನ್ನೀಸಾ, ಔರಂಗಜೀಬನೀ ರತ್ನಾಭರಣಗಳನ್ನು ಕದ್ದುಕೊಂಡು ಹೋಗಲು ಯೋಚಿಸಿರುವನು. ಆದುದರಿಂದಲೇ ಎಲ್ಲವನ್ನು ನಾನು ಧರಿಸಿಕೊಂಡಿರುವೆನು. (ಜಹರತಳನ್ನುದ್ದೇಶಿಸಿ) ಈಗ ನನ್ನನ್ನು ಮದುವೆಯಾಗಬೇಕೆಂಬ ಇಚ್ಛೆಯಾಗುವದಿಲ್ಲವೇ, ಜಹರತ್?

ಜಹರತ್-ಮತ್ತೆ ಜ್ಞಾನಶೂನ್ಯನಾಗಿರುವನು. ಈ ಉನ್ಮಾದವು ಚಂದ್ರನಮೇಲೆ ಹಾದುಹೋಗುವ ಶರತ್ಕಾಲದ ಮೇಘದಂತೆ ಆಗಿಂದಾಗ್ಗೆ ಬಂದು ಹೋಗುತ್ತಿರುವುದು.

ಷಾಜಹಾನ್—[ಇದ್ದಕ್ಕಿದ್ದಹಾಗೆ ಗಂಭೀರನಾಗಿ] ಖಬರ್‌ದಾರ್! ಮದುವೆಯಾಗುವದಿಲ್ಲವೆ? [ನಿಮ್ನ ಸ್ವರದಿಂದ] ಮಗುವಾಗಿದ್ದರೆ ನಿನ್ನನ್ನು ಖೈದುಮಾಡಿ ನಿನ್ನ ಒಡವೆಗಳನ್ನು ಕಿತ್ತುಕೊಳ್ಳುತ್ತಿದ್ದೆನು. ಮದುವೆಯಾಗುವುದಿಲ್ಲವೆ?

ಜಹನಾರಾ—ನೋಡು ಜಹರತ್, ಇದು ಬರಿಯ ಹುಚ್ಚಲ್ಲ. ಜ್ಞಾನವು ಚನ್ನಾಗಿ ಗಿರುವುದು. ಇದೊಂದು ವಿಧವಾದ ವಿಲಾಪ.

ಜಹರತ್-ಪ್ರಪಂಚದಲ್ಲಿ ಜ್ಞಾನಿಯ ಉನ್ಮತ್ತಾವಸ್ಥೆಗಿಂತ ಹೃದಯವೇದಕವಾದ

ನೋಟವು ಮತ್ತಾವುದೂ ಇಲ್ಲವೆಂದು ತೋರುವುದು. ಒಂದು ಸುಂದರಪ್ರತಿಮೆಯು ಒಡೆದು ಮಣ್ಣಿನಲ್ಲಿ ಬಿದ್ದಂತೆ. ಓ! ಎಂತಹ ನೋಟ!

(ಅಳುತ್ತ ಹೊರಟುಹೋಗುವಳು)

ಷಾಜಹಾನ್-ನಾನು ಹುಚ್ಚನಲ್ಲ ಜಹನಾರಾ, ಸರಿಯಾಗಿ ಮಾತನಾಡಬಲ್ಲೆನು. ಮನಸ್ಸುಮಾಡಿದರೆ ಸರಿಯಾಗಿ ಮಾತನಾಡಬಲ್ಲೆನು.

ಜಹನಾರಾ--ಅದೆನಗೆ ಗೊತ್ತು, ಅಪ್ಪ.

ಷಾಜಹಾನ್-ನನ್ನ ಹೃದಯವು ಒಡೆದು ಹೋಗುತ್ತಿರುವದು. ಇಷ್ಟೊಂದು ದುಃಖವನ್ನು ಸಹಿಸುತ್ತಾ ಹೇಗೆ ಜೀವಿಸುತ್ತಿರುವೆನೋ ಆಶ್ಚರ್ಯ! ದಾರಾ. ಷೂಜಾ, ಮುರಾದ ಎಲ್ಲರನ್ನು ಮುಗಿಸಿಬಿಟ್ಟನೆ? ಪ್ರತಿಶೋಧವನ್ನು ತೆಗೆದುಕೊಳ್ಳಲು ಅವರ ಮಕ್ಕಳಲ್ಲೊಬ್ಬರೂ ಇಲ್ಲ! ಎಲ್ಲರೂ ಹೋದರು.

(ಔರಂಗಜೀಬನು ಬಂದನು)

ಷಾಜಹಾನ್-ಇದಾರು? [ಭಯವಿಸ್ಮಯಗಳಿಂದ] ಏನು ಏನು! ಸಮ್ರಾಟನೆ?

ಜಹನಾರಾ-ಹೌದು; ಔರಂಗಜೀಬನು.

ಔರಂಗಜೀಬ-ತಂದೆಯೇ—

ಷಾಜಹಾನ್--ನನ್ನ ರತ್ನಾಭರಣಗಳನ್ನು ಕೊಂಡೊಯ್ಯಲು ಬಂದಿರುವನು! ಕೊಡುವದಿಲ್ಲ; ಕೊಡುವದಿಲ್ಲ. ಈ ನಿಮಿಷದಲ್ಲೆಲ್ಲವನ್ನು ಕಬ್ಬಿಣದ ಪೆಟ್ಟಿಗೆಯಲ್ಲಿಟ್ಟು ಭದ್ರಪಡಿಸಿ ಬರುವೆನು. [ಹೊರಡುವನು]

ಔರಂಗಜೀಬ-[ಎದುರಿಗೆ ಬಂದು] ಇಲ್ಲ, ತಂದೆಯೇ; ನಾನು ನಿನ್ನ ಆಭರಣಗಳನ್ನು ತೆಗೆದುಕೊಂಡು ಹೋಗಲು ಬರಲಿಲ್ಲ.

ಜಹನಾರಾ--ಹಾಗಾದರೆ ತಂದೆಯನ್ನು ವಧೆಮಾಡುವ ಸಲುವಾಗಿ ಬಂದೆಯಾ? ಪಿತೃಹತ್ಯವೊಂದು ಉಳಿಯಲೇಕೆ? ಅದೂ ಆಗಿ ಹೋಗಲಿ!

ಷಾಜಹಾನ್--ವಧೆಮಾಡುವುದೆ? ನನ್ನನ್ನು ವಧೆಮಾಡುವುದೆ! ಮಾಡು ಔರಂಗಜೀಬ, ನನ್ನನ್ನು ಕೊಂದುಬಿಡು. ವಿನಿಮಯವಾಗಿ ಈ ಸಮಸ್ತ ಆಭರಣರಾಜಿಯನ್ನು ನಿನಗೆ ಕೊಡುವೆನು; ಮತ್ತು ಸಾಯುವ ಮೊದಲು ಈ ಅನುಗ್ರಹದ ಸಲುವಾಗಿ ನಿನ್ನನ್ನು ಹರಸಿ ಸಾಯುವೆನು. ಇಗೋ! ನನ್ನ ತೆಗೆದ ಹೃದಯವು; ನಿನ್ನ ಕಠಾರಿಯನ್ನಿರಿದು ಬಿಡು.

ಔರಂಗಜೀಬ-[ಹಠಾತ್ತಾಗಿ ಮೊಣಕಾಲೂರಿ ಕುಳಿತು] ನನ್ನನ್ನು ಇದಕ್ಕಿಂತ ಹೆಚ್ಚಿಗೆ ಅಪರಾಧಿಯನ್ನಾಗಿ ಮಾಡಬೇಡ, ತಂದೆಯೇ. ನಾನು ಪಾಪಿ—ಘೋರತರ ಪಾಪಿ. ಆ ಪಾಪದ ಜ್ವಾಲೆಯಿಂದ ಉರಿದುಹೋಗುತ್ತಿರುವೆನು. ನೋಡು ತಂದೆಯೇ, ಈ ಕ್ಷೀಣವಾದ ದೇಹ, ಗುಳಿಬಿದ್ದ ಕಣ್ಣುಗಳು, ಈ ಶುಷ್ಕವಾದ ಪಾಂಡುರಮುಖ—ಇವುಗಳನ್ನು. ಅವು ನನ್ನ ಸ್ಥಿತಿಯನ್ನು ಹೇಳುವುವು.

ಷಾಜಹಾನ್– ಬಡವಾಗಿರುವೆ. ಹೌದು; ನಿಜವಾಗಿಯೂ ಬಡವಾಗಿರುವೆ.

ಜಹನಾರಾ--ಔರಂಗಜೀಬ, ಸಾಕೀಅಭಿನಯ! ನಿನ್ನನ್ನು ಚನ್ನಾಗಿ ಬಲ್ಲವರೊಬ್ಬರಿಲ್ಲಿರುವರು. ಹೊಸದಾಗಿ ಯಾವ ಸೈತಾನೀ ತಂತ್ರವನ್ನು ಮಾಡಲು ಇಲ್ಲಿ ಬಂದೆ? ಇಲ್ಲಿ ನಿನಗೆ ಬೇಕಾದುದೇನು?

ಔರಂಗಜೀಬ--ತಂದೆಯ ಕ್ಷಮೆ.

ಜಹನಾರಾ—ಕ್ಷಮೆ! ಇದೇನು ತೀರಾ ಹೊಸದಾದ ನಡತೆ, ಔರಂಗಜೀಬ!

ಔರಂಗಜೀಬ–ನನಗೆ ಗೊತ್ತು ತಂಗಿ—

ಜಹನಾರಾ--ಸಾಕು ಬಿಡು.

ಷಾಜಹಾನ್--ಮಾತಾಡಲಿ ತಾಳು ಜಹನಾರಾ. ಹೇಳು, ಹೇಳುತ್ತಿದ್ದುದನ್ನು ಪೂರೈಸು ಔರಂಗಜೀಬ.

ಔರಂಗಜೀಬ–ಮತ್ತೇನು ಇಲ್ಲ; ನಿನ್ನ ಕ್ಷಮೆಯನ್ನು ಬೇಡುವೆನು.

[ಜಹನಾರಳು ವ್ಯಂಗವಾಗಿ ನಗುವಳು]

ಔರಂಗಜೀಬ--[ಒಂದುಬಾರಿ ಜಹನಾರಳ ಕಡೆನೋಡಿ ಬಳಿಕ ಷಾಜಹಾನನೊಡನೆ] ಈ ನನ್ನ ಪ್ರಾರ್ಥನೆಯನ್ನು ಕಪಟವೆಂದು ತಿಳಿಯುವೆಯಾದರೆ ನನ್ನೊಡನೆ ಬರುವನಾಗು ತಂದೆಯೇ; ಈ ಮುಹೂರ್ತದಲ್ಲಿ ನಿನ್ನನ್ನೀ ಪ್ರಾಸಾದ ದುರ್ಗದಿಂದ ಕರೆದುಕೊಂಡುಹೋಗಿ, ಆಗ್ರದ ಮಯೂರಸಿಂಹಾಸನದ ಮೇಲೆ ಕುಳ್ಳಿರಿಸಿ, ಸರ್ವರ ಸಮಕ್ಷಮ ಸಮ್ರಾಟನೆಂದು ಅಭಿವಾದನ ಮಾಡುವೆನು. ಇದೋ ನನ್ನ ರಾಜ ಮುಕುಟವನ್ನು ನಿನ್ನ ಪದತಲದಲ್ಲಿಡುವೆನು.

[ಹೇಳುತ್ತಾ ಔರಂಗಜೀಬನು ಮುಕುಟವನ್ನು ತೆಗೆದು ಷಾಜಹಾನನ ಪದತಲದಲ್ಲಿಡುವನು.]

ಷಾಜಹಾನ್–ನನ್ನ ಹೃದಯವು ಒಡೆಯುತ್ತಿರುವುದು! ಒಡೆಯುತ್ತಿರುವುದು!

ಔರಂಗಜೇಬ--ನನ್ನನ್ನು ಕ್ಷಮಿಸು ತಂದೆಯೇ! [ಕಾಲುಗಳನ್ನು ಹಿಡಿದುಕೊಳ್ಳುವನು]

ಷಾಜಹಾನ್--ಮಗನೇ, [ಕೈ ಹಿಡಿದೆತ್ತಿ ಬಳಿಕ ಕಣ್ಣುಗಳನ್ನು ಮುಚ್ಚಿಕೊಳ್ಳುವನು]

ಜಹನಾರಾ-ಇದೊಳ್ಳೆಯ ಅಭಿನಯ, ಔರಂಗಜೇಬ.

ಷಾಜಹಾನ್—ಮಾತಾಡಬೇಡ, ಜಹನಾರಾ. ನನ್ನ ಮಗನು ನನ್ನ ಕಾಲುಗಳನ್ನು ಹಿಡಿದುಕೊಂಡು ಕ್ಷಮೆ ಬೇಡುತ್ತಿರುವನು; ನಾನದನ್ನು ನಿರಾಕರಿಸಲು ಸಾಧ್ಯವೇ? ಹಾ! ಪಿತೃಗಳ ಹೃದಯವೇ, ಇಷ್ಟು ದಿನವೂ ಕುಳಿತುಕೊಂಡು ನನ್ನ ಹೃದಯದ ಏಕಾಂತದಲ್ಲಿ ಈ ಸಮಯಕ್ಕೋಸುಗವಾಗಿ ತಪಿಸುತ್ತಿದ್ದೆನೇ? ಒಂದು ಕ್ಷಣದಲ್ಲಿ ನನ್ನ ಕ್ರೋಧವೆಲ್ಲವೂ ನೀರಾಗಿ ಹೋಗುತ್ತಿರುವುದೇ!

ಔರಂಗಜೇಬ--ಬಾ, ತಂದೆಯೇ; ನಿನ್ನನ್ನು ಮತ್ತೆ ಆಗ್ರಾದ ಸಿಂಹಾಸನದ ಮೇಲೆ ಕುಳ್ಳಿರಿಸುವೆನು. ನಾನು ಮಕ್ಕಾಯಾತ್ರೆಗೆ ಹೋಗಿ ನನ್ನ ಪಾಪಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುವೆನು.

ಷಾಜಹಾನ್--ಇಲ್ಲ; ನನಗೆ ಮತ್ತೆ ಸಮ್ರಾಟನಾಗುವ ಇಚ್ಛೆಯಿಲ್ಲ. ನನ್ನ ಸಂಜೆಯು ಸಂದಣಿಸಿ ಬಂದಿರುವುದು. ಈ ಸಾಮ್ರಾಜ್ಯವನ್ನು ನೀನು ಅನುಭವಿಸು, ಪುತ್ರ; ಈ ರಾಜಮುಕುಟವು ನಿನ್ನದು. ಮತ್ತೆ ಕ್ಷಮೆಯೇ, ಔರಂಗಜೇಬ? ಔರಂಗಜೇಬ, ಕಳೆದುದೆಲ್ಲವನ್ನು ಮನಸ್ಸಿನಲ್ಲಿಡಬೇಡ. ಔರಂಗಜೇಬ, ನಿನ್ನ ಸರ್ವಾಪರಾಧವನ್ನು ನಾನು ಕ್ಷಮಿಸಿರುವೆನು. [ಮುಖವನ್ನು ತಿರುಗಿಸಿಕೊಳ್ಳುವನು]

ಜಹನಾರಾ -ತಂದೆಯೇ, ದಾರನನ್ನು ಕೊಂದವನಿಗೆ ಕ್ಷಮೆಯೇ?

ಷಾಜಹಾನ್--ಸುಮ್ಮನಿರು, ಜಹನಾರಾ. ಈ ಸಮಯದಲ್ಲಿ ನನ್ನ ಸುಖದಲ್ಲಿ ವಿಷಪಾತವಾಗದಿರಲಿ. ಅದನ್ನು ಮತ್ತೆ ಹೊಂದುವದು ಸಾಧ್ಯವಿಲ್ಲ. ಏಳು ವರ್ಷಗಳನ್ನು ದುಃಖದಿಂದ ಕಳೆದೆನು; ಹೃದಯ ಜ್ವಾಲೆಯಿಂದ ಉರಿದೆನು; ಶೋಕದಿಂದ ಉನ್ಮತ್ತನಾಗಿ ಹೋದೆನು; ನೋಡಲಿಲ್ಲವೆ? ಇನ್ನೆರಡು ದಿನಗಳು ಸುಖವಾಗಿರಗೊಡು ಜಹನಾರಾ. ನೀನು ಔರಂಗಜೇಬನನ್ನು ಕ್ಷಮಿಸು, ಜಹನಾರಾ. ಔರಂಗಜೇಬ, ಜಹನಾರಳ ಕ್ಷಮೆ ಬೇಡು.

ಔರಂಗಜೇಬ—ನನ್ನನ್ನು ಕ್ಷಮಿಸು, ಸೋದರಿ.

ಜಹನಾರಾ--ಕ್ಷಮೆಯನ್ನು ಬೇಡುವೆಯಾ? ತಂದೆಯಂತೆ ನನಗೆ ಅರುಳು ಮರುಳಲ್ಲ; ಛೀ! ರಾಜದಸ್ಯು! ಘಾತಕ! ಪಾಪಿ!

ಔರಂಗಜೇಬ--ನಿನ್ನ ಹಾಗೆ ಇವನೂ ತಾಯಿಲ್ಲದವನು ಜಹನಾರಾ, ನಿನ್ನಹಾಗೆ ತಬ್ಬಲಿ, ಕ್ಷಮಿಸು. ಅವನ ತಾಯಿಯು ಜೀವಿಸಿದ್ದರೆ ಈಗೇನು ಮಾಡುತ್ತಿದ್ದಳು, ಜಹನಾರಾ? ಅವನ ತಾಯಿಯು ತನ್ನ ವ್ಯಥೆಯೆಲ್ಲವನ್ನೂ ನನ್ನಬಳಿಯಲ್ಲಿ ಕೂಡಿಟ್ಟು ಹೋಗಿರುವಳೋ? ಏನು ಜಹನಾರಾ, ಇನ್ನೂ ನಿಷ್ಪಂದ! ತಲೆಯೆತ್ತಿ ನೋಡು: ಸಂಧ್ಯಾಕಾಲದ ಈ ಯಮುನೆಯ ದೃಶ್ಯವನ್ನು, ಆದೆಷ್ಟು ಸ್ವಚ್ಛವಾಗಿದೆ! ನೋಡು: ಈನೀಲಾಕಾಶವನ್ನು, ಎಷ್ಟೊಂದು ಗಾಢ! ನೋಡು: ಕುಸುಮರಂಜಿತವಾದ ಕುಂಜವನವನ್ನು, ಎಷ್ಟೊಂದು ಸುಂದರವಾಗಿದೆ! ಮತ್ತು ನೋಡು: ಈ ಪ್ರಸ್ತರೀಭೂತವಾದೆನ್ನ ಪ್ರೇಮಾಶ್ರುವನ್ನು, ಈ ಅನಂತ ಆಕ್ಷೇಪದ, ಆಪ್ಲುತ ವಿಯೋಗದ, ಅಮರಕಾವ್ಯವನ್ನು; ಎಷ್ಟೊಂದು ಹೃದಯದ್ರಾವಕ! ಇವುಗಳಕಡೆ ನೋಡಿ, ಔರಂಗಜೇಬನನ್ನು ಕ್ಷಮಿಸು. ಮತ್ತು ಮನಸ್ಸಿನಲ್ಲಿಟ್ಟುಕೋ—ಈ ಪ್ರಪಂಚವನ್ನು ನಾವೆಷ್ಟೊಂದು ಕೆಟ್ಟದೆಂದು ಭಾವಿಸುವೆವೋ, ನಿಜವಾಗಿ ಅದು ಅಷ್ಟೊಂದು ಕೆಟ್ಟದಲ್ಲವೆಂದು, ಜಹನಾರಾ.

ಜಹನಾರಾ--ಔರಂಗಜೀಬ, ಈ ನಿನ್ನ ವಿಜಯವು ಸಂಪೂರ್ಣವಾಯಿತು. ನನ್ನ ಈ ಜರಾಜೀರ್ಣ ಮುಮೂರ್ಷು ತಂದೆಯ ಅನುರೋಧದಿಂದ-ನಿನ್ನನ್ನು ಕ್ಷಮಿಸುವೆನು

[ಮುಖ ತಿರುಗಿಸಿಕೊಳ್ಳುವಳು. ಅವಸರದಿಂದ ಜಹರತ್ ಉನ್ನೀಸಳ ಪ್ರವೇಶ]

ಜಹರತ್—ಆದರೆ ನಾನು ಕ್ಷಮಿಸುವುದಿಲ್ಲ; ಘಾತುಕ! ಸಮಸ್ತ ಪ್ರಪಂಚವೂ ನಿನ್ನನ್ನು ಕ್ಷಮಿಸಿದರೂ ನಾನು ಬೇರೆ ಕ್ಷಮಿಸುವುದಿಲ್ಲ. ನಾನು ನಿನಗೆ ಅಭಿಶಾಪ ಕೊಡುವೆನು. ರೇಗಿದ ಫಣಿನಿಯ ಉಷ್ಣನಿಶ್ವಾಸದಿಂದ ನಾನು ನಿನ್ನನ್ನು ಶಪಿಸುವೆನು. ನನ್ನ ಶಾಪದ ಭೀಷಣ ಛಾಯೆಯು, ಆಹಾರದಲ್ಲೂ, ವಿಹಾರದಲ್ಲೂ ನಿನ್ನನ್ನು ಎಡೆಬಿಡದೆ ಬೆನ್ನುಬಿದ್ದು ಆತಂಕದಂತೆ ಹಿಂಸಿಸುವದು. ನನ್ನ ಶಾಪವು ನಿದ್ರೆಯಲ್ಲಿ ಪರ್ವತಸಮನಾದ ಭಾರದಿಂದ ನಿನ್ನೆದೆಯನ್ನು ಒತ್ತುವುದು. ನನ್ನ ಶಾಪದ ವಿಕಟಧ್ವನಿಯು ಆಜೀವವೂ ನಿನ್ನ ವಿಜಯವಾದ್ಯದೊಂದಿಗೆ ತನ್ನ ಆಮಂಗಲ ವಿಲಾಪವನ್ನು ಸೇರಿಸಿ ನುಡಿಯುವುದು. ನನ್ನ ತಂದೆಯನ್ನು ಕೊಂದು ಯಾವ ಸಾಮ್ರಾಜ್ಯವನ್ನು ಸಂಪಾದಿಸಿದೆಯೋ ದೀರ್ಘಕಾಲ ಬದುಕಿ ಆ ಸಾಮ್ರಾಜ್ಯವನ್ನು ನೀನನುಭವಿಸು; ಏಕೆಂದರೆ—ಆ ಸಾಮ್ರಾಜ್ಯವು ನಿನಗೆ ಯಮನ ಸಮಾನವು; ಆ ಸಾಮ್ರಾಜ್ಯವು ನಿನ್ನನ್ನು ಒಂದು ಪಾಪದಿಂದ ಅದಕ್ಕಿನ್ನು ಮಿಗಿಯಾದ ಮತ್ತೊಂದು ಪಾಪಕ್ಕೆ ಕೊಂಡೊಯ್ಯುವುದು; ಬಳಿಕ ಸಾಯುವಾಗ ನಿನ್ನೀ ಉತ್ತಪ್ತ ಲಲಾಟದಲ್ಲಿ ಈಶ್ವರನ ಕರುಣೆಯ ಒಂದಲ್ಪ ಕಣಕ್ಕೂ ಎಡೆಯಿಲ್ಲದಿರಲಿ. (ಹೋಗುವಳು)

[ ಮೂವರೂ ನೀರವವಾಗಿ ತಲೆಯನ್ನು ತಗ್ಗಿಸಿಕೊಂಡು ನಿಲ್ಲುವರು.]

ಬೆಂಗಳೂರು ಸಿಟಿ

ಮೊಡಲ್ ಮುದ್ರಾಕ್ಷರಶಾಲಾ,

1927.